
ಪುಸ್ತಕ ಪ್ರಪಂಚ

ಸಂಪುಟ ೫೧ ಏಪ್ರಿಲ್ ೨೦೦೧ ಸಂಚಿಕೆ ೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಪ್ರೊ. ಜಿ. ಹನುಮಂತರಾವ್

PUSTAKA PRAPANCHA: Monthly

Published and printed by Karnataka State Adult Education Council,Mysore-6.
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

೧. ಅನುದಾನದಲ್ಲಿ ಕಡಿತ

ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ, ವಿಸ್ತರಿಸುವ ಮತ್ತು ಊರ್ಜಿತಗೊಳಿಸುವ ದೃಷ್ಟಿಯಿಂದ, ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇಕಡ ೧೫ ಭಾಗವನ್ನು ಕಡಿತಗೊಳಿಸುವುದಾಗಿ ಕರ್ನಾಟಕ ಸರ್ಕಾರ ಘೋಷಿಸಿದಂದಿನಿಂದ, ಶಿಕ್ಷಣ ಕ್ಷೇತ್ರದಲ್ಲಿ ಕೋಲಾಹಲ ವುಂಟಾಗಿದೆ. ಶಿಕ್ಷಕರಲ್ಲಿ ತಳಮಳವುಂಟಾಗಿದೆ, ಶಿಕ್ಷಣಾರ್ಥಿಗಳಲ್ಲಿ ಅಂಜಿಕೆಯುಂಟಾಗಿದೆ. ಪ್ರಾಥಮಿಕ ಶಿಕ್ಷಣದ ಬಗೆಗಿನ ಸರ್ಕಾರದ ನಿಲವು ಸಾಧುವಾದದ್ದೇ. ಮುಂದುವರಿದ ದೇಶಗಳಲ್ಲಿ ಪದವಿಗಳ ಬಗ್ಗೆ ವಿದ್ಯಾರ್ಥಿಗಳಿಗಾಗಲಿ, ತಂದೆ ತಾಯಿಯರಿಗಾಗಲಿ ವ್ಯಾಮೋಹವಿಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸಾವಿರಾರು ವರ್ಷಗಳಿಂದ ವಿದ್ಯೆಯಿಂದ ವಂಚಿತರಾದ ಜನರಲ್ಲಿ ಡಿಗ್ರಿಗಳ ವ್ಯಾಮೋಹ ಸಹಜವಾದದ್ದೇ. ಆದರೂ ಉನ್ನತ ಶಿಕ್ಷಣ ಸಮಾಜದ ಜವಾಬ್ದಾರಿಯೆಂಬ ಗಾಂಧೀಜಿಯ ಸಲಹೆ ಸ್ವೀಕಾರಯೋಗ್ಯವಾದದ್ದೇ.

ಪದವಿಪೂರ್ವ ಕಾಲೇಜುಗಳನ್ನು ಸರ್ಕಾರವೇ ಸ್ಥಾಪಿಸುವಾಗ, ಅಥವಾ ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ನೀಡುವಾಗ ಯಾವ ಸರ್ಕಾರವೂ ಯಾವೊಂದು ಅಳತೆಗೋಲನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಯನ್ನು ಕಸಿದುಕೊಂಡನಂತರ ಸರ್ಕಾರವೇ ಕಾಲೇಜುಗಳಿಗೆ ಮಾನ್ಯತೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದೆ. ಮಾನ್ಯತೆ ನೀಡುವಾಗ ಪ್ರಾದೇಶಿಕ ಆವಶ್ಯಕತೆಯನ್ನಾಗಲಿ, ತಜ್ಞರ ಸಲಹೆಯನ್ನಾಗಲಿ ಲಕ್ಷಿಸದೆ ರಾಜಕೀಯ ಒತ್ತಡಕ್ಕೆ ಹಾಗೂ ತಜ್ಞೇತರ ಕಾರಣಗಳಿಗೆ ಮಣಿಯುವುದರಿಂದ ಇಂದು ಅನೇಕ ಸಮಸ್ಯೆಗಳು ಹೆಡೆಯೆತ್ತಿವೆ. ಈ ಸಮಸ್ಯೆಗಳಿಗೆ ಸರ್ಕಾರವೇ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ.

ಅನುದಾನ ಕಡಿತ ಸರ್ಕಾರಿ ಕಾಲೇಜುಗಳಿಗೂ ಅನ್ವಯವಾಗುತ್ತದಲ್ಲವೆ ? ಇಲ್ಲವಾದರೆ ತಾರತಮ್ಯ ಮತ್ತು ಸವತಿಮಾತ್ಸರ್ಯದ ಭಾವನೆಯ ಕಳಂಕಕ್ಕೆ ಸರ್ಕಾರ ಪಾತ್ರವಾಗುತ್ತದೆ. ಹತ್ತಾರು ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬಂದಿರುವ ಕಾಲೇಜುಗಳಿಗೆ ಅನುದಾನ ಹೆಚ್ಚಿಸದಿದ್ದರೂ, ಹಿಂದಿನಿಂದ ಬರುತ್ತಿದ್ದ ಅನುದಾನವನ್ನು ಕಡಿತಗೊಳಿಸುವುದು ನ್ಯಾಯವಲ್ಲ. ಬೋಧನೆ ಶಿಸ್ತುಗಳಲ್ಲಿ ಲೋಪದೋಷಗಳಿದ್ದು, ಫಲಿತಾಂಶಗಳಲ್ಲಿ ಭಾರಿ ಕೊರತೆಯಿದ್ದರೆ, ಅನುದಾನವನ್ನು ತಾತ್ಕಾಲಿಕವಾಗಿ ಕಡಿತಗೊಳಿಸಬಹುದು.

ಕೆಲವು ಖಾಸಗಿಕಾಲೇಜುಗಳಲ್ಲಿ ಹಣ ದುರುಪಯೋಗವಾಗುತ್ತಿದೆ, ನಿಜ. ಅವುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ; ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ, ವಿದ್ಯಾರ್ಥಿಗಳ ಸಂಖ್ಯೆಯೂ ಕಡಮೆ. ಅಂಥ ಕಾಲೇಜುಗಳ ಅನುದಾನವನ್ನು ಕತ್ತರಿಸಬಹುದು; ಇಲ್ಲವೆ, ಅವುಗಳ ಮಾನ್ಯತೆಯನ್ನೇ ರದ್ದುಗೊಳಿಸಬಹುದು. ಮಾನ್ಯತೆ ಕೊಟ್ಟನಂತರ, ಪ್ರಾರಂಭದಲ್ಲಿ ಏನೇ ಷರತ್ತುಗಳಿದ್ದರೂ, ಮೂಲಭೂತ ಸೌಕರ್ಯಗಳಿದ್ದರೆ, ಅನುದಾನ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಒಳ್ಳೆಯ ಫಲಿತಾಂಶಗಳನ್ನು ಗಳಿಸಿ, ಏಳೆಂಟು ವರ್ಷ ದುಡಿದ ಅಧ್ಯಾಪಕರ ಗತಿ ಏನು? ಮಾನವೀಯತೆಯ ದೃಷ್ಟಿಯಿಂದ ಮಾತ್ರವಲ್ಲ, ನ್ಯಾಯದ ದೃಷ್ಟಿಯಿಂದಲೂ ಅಂಥ ಕಾಲೇಜುಗಳಿಗೆ ಅನುದಾನ ನೀಡಲೇಬೇಕು. ಅಧ್ಯಾಪಕರನ್ನು, ವಿದ್ಯೆಕಲಿಸುವ ಗುರುಗಳನ್ನು ನಿರಾಶೆಗೊಳಿಸಿದ್ದಾದರೆ, ಬೋಧನೆ ಯಶಸ್ವಿಯಾಗುವುದಿಲ್ಲ, ಶಿಕ್ಷಣದ ಮಟ್ಟ ಮೇಲೇರುವುದಿಲ್ಲವೆಂಬುದನ್ನೂ, ಕೀಳ್ಮಟ್ಟದ ಶಿಕ್ಷಣದ ಪರಿಣಾಮ ಏನಾಗಬಹುದೆಂಬುದನ್ನೂ ವಿವೇಕಿಗಳು ಅರಿಯಬೇಕಾಗಿದೆ.

ಹಳೆಯ ಕಾಲೇಜುಗಳಿಗೆ ಅನುದಾನ ಕಡಿತಗೊಳಿಸುವ ಯೋಚನೆಯೊಂದು ಕಡೆಯಾದರೆ,

ಹತ್ತು ಹನ್ನೆರಡು ವರ್ಷಗಳಿಂದ ಅನುದಾನವಿಲ್ಲದೆಯೇ ಶಿಕ್ಷಣ ನೀಡುತ್ತಿರುವ ಹೊಸಕಾಲೇಜುಗಳ ಯೋಚನೆ ಮತ್ತೊಂದು ಕಡೆ. ಅಲ್ಲಿಯ ಅಧ್ಯಾಪಕರು ಅಲ್ಪವೇತನ ತೆಗೆದುಕೊಂಡು, ಕೆಲಸಮಾಡಿ, ಮುಪ್ಪಾಗುತ್ತಿದ್ದಾರೆ. ಅವರ ಮಡದಿ ಮಕ್ಕಳ ಗತಿಯೇನು ? ಸರ್ಕಾರದ ಬೊಕ್ಕಸದಲ್ಲಿ ಹಣವಿಲ್ಲವೆಂಬ ನೆಪವೊಡ್ಡಿ, ಅವರನ್ನು ಗೋಳ್ಗರೆಸುವುದು ತರವಲ್ಲ. ಶಿಕ್ಷಣವೊಂದು ಬಂಡವಾಳವೆಂದು ಬಗೆದು, ಶಿಕ್ಷಣ ತೆರಿಗೆಯ ಮೂಲಕ ಅಥವಾ ಇತರ ಆಕರಗಳ ಮೂಲಕ ಹಣ ಸಂಪಾದಿಸಿ ಬಂಡವಾಳ ಹೂಡಬೇಕಾಗುತ್ತದೆ, ಹಾಗೂ ಸಾಕಷ್ಟು ಬಂಡವಾಳ ದೊರೆಯದಿದ್ದರೆ, ಅನುಕೂಲವಾದ ಅನುದಾನ ಸೂತ್ರವೊಂದನ್ನು ರೂಪಿಸಬಹುದು. ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟಿದ್ದು, ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿದ್ದು, ಪರೀಕ್ಷಾ ಫಲಿತಾಂಶಗಳು ರಾಜ್ಯದ ಒಟ್ಟು ಸರಾಸರಿಗೆ ಸಮನಾಗಿದ್ದರೆ, ಮುಂದಿನ ನಿಯಮದಂತೆ ಮೂರುಹಂತಗಳಲ್ಲಿ ಅನುದಾನವನ್ನು ಅನುಗ್ರಹಿಸಬಹುದು. ನಿರ್ದಿಷ್ಟ ಕಾಲೇಜಿಗೆಷ್ಟು ಅನುದಾನ ಸಲ್ಲಬೇಕೋ ಅದರಲ್ಲಿ ಮೂರನೆಯ ಒಂದು ಭಾಗವನ್ನು ಪ್ರಾರಂಭವಾದ ಐದುವರ್ಷದನಂತರ ನೀಡಬಹುದು. ಎರಡನೆಯ ಹಂತದಲ್ಲಿ, ಅಂದರೆ ಏಳು ವರ್ಷದನಂತರ, ಮೂರನೆಯ ಎರಡು ಭಾಗ ಮಂಜೂರು ಮಾಡಬಹುದು. ಮೂರನೆಯ ಹಂತದಲ್ಲಿ, ಅಂದರೆ ಹತ್ತು ವರ್ಷದನಂತರ ಪೂರ್ತಿ ಅನುದಾನವನ್ನು ಕೊಡಬಹುದು. ಇಂಥ ಕಡೆ ಮಾತ್ರ ಅನಿವಾರ್ಯವಾದರೆ ಶೇಕಡ ೧೫ ಭಾಗ ಕಡಿತ ಮಾಡಬಹುದು. ಸರ್ಕಾರಿ ಕಾಲೇಜಿನ ಅಧ್ಯಾಪಕರಿಗೆ ಸಲ್ಲುವ ಎಲ್ಲ ಸವಲತ್ತುಗಳೂ ಖಾಸಗಿ ಕಾಲೇಜುಗಳ ಅಧ್ಯಾಪಕರಿಗೆ ಸಲ್ಲಬೇಕು. ಮೂಲಭೂತ ಸೌಕರ್ಯಗಳಿಲ್ಲದ, ವಿದ್ಯಾರ್ಥಿ ಸಂಖ್ಯೆ ಸಾಕಷ್ಟಿಲ್ಲದ ಕಾಲೇಜುಗಳನ್ನು ಮುಚ್ಚಿ, ಅಧ್ಯಾಪಕರಿಗೆ ಪುನರ್ವಸತಿ ಸೌಕರ್ಯವನ್ನೊದಗಿಸಬಹುದು. ಆದರೆ ಮಾನ್ಯತೆ ನೀಡಿದ ನಂತರ ಅನುದಾನ ನೀಡಬೇಕಾದ್ದು ಸರ್ಕಾರದ ಕರ್ತವ್ಯವೆಂಬುದನ್ನು ಮರೆಯಲಾಗದು. ಸರ್ಕಾರದ ಸಮಸ್ಯೆಯನ್ನು ಅಧ್ಯಾಪಕರೂ, ಅಧ್ಯಾಪಕರ ಅಸಹಾಯಕ ಸ್ಥಿತಿಯನ್ನು ಸರ್ಕಾರವೂ ಅರಿತುಕೊಂಡು, ಪರಸ್ಪರ ಸಮಾಲೋಚನೆಯ ಮೂಲಕ ಒಂದು ಒಪ್ಪಂದಕ್ಕೆ ಬರುವುದು ಸೂಕ್ತ. ಶಿಕ್ಷಣದ ಗುಣ ಮಟ್ಟದ ದೃಷ್ಟಿಯಿಂದ ಈ ಏರ್ಪಾಡು ಅತ್ಯಗತ್ಯ. ಎರಡು ಕಡೆಯವರೂ ಪ್ರತಿಷ್ಠೆಯನ್ನು ತೊರೆದು, ಕೆಟ್ಟಚಲವನ್ನು ಬಿಟ್ಟು, ಪರಸ್ಪರ ಸಹಕಾರ ಸೌಮನಸ್ಯ ಸಹಾನುಭೂತಿಗಳಿಂದ, ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಶ್ರೇಯಸ್ಕರ.

ನಿವೃತ್ತರಾದ ಅಧ್ಯಾಪಕ-ಪ್ರಾಧ್ಯಾಪಕರ ಸ್ಥಾನಗಳನ್ನು ಭರ್ತಿಮಾಡಕೂಡದೆಂಬ ನಿಯಮವಿದೆಯಂತೆ. ಇದು ಅಪಾಯಕಾರೀ ನಿಯಮ. ಇದರಿಂದ ಪಾಠಪ್ರವಚನಗಳು ಸ್ಥಗಿತಗೊಳ್ಳುತ್ತವೆ; ವಿದ್ಯಾರ್ಥಿಗಳಲ್ಲಿ ಅಶಾಂತಿ, ಅಸಹನೆ, ಅಶಿಸ್ತುಗಳು ತಲೆಯೆತ್ತುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಅನೈತಿಕತೆ ತಾಂಡವವಾಡುತ್ತದೆ. ಗೊಂದಲ ಸುತ್ತಿಕೊಳ್ಳುತ್ತದೆ. ಅತೃಪ್ತ ಅಧ್ಯಾಪಕ ಸಮಾಜಕ್ಕೆ ಭಾರವಾಗುತ್ತಾನೆ, ಅಪಾಯಕಾರಿಯಾಗುತ್ತಾನೆ. ಅಧ್ಯಾಪಕರಿಲ್ಲದೆ ಕಾಲೇಜು ನಡಸಬೇಕೆನ್ನುವ ಇರಾದೆ ಸರ್ಕಾರಕ್ಕಿದ್ದರೆ, ಎಲ್ಲ ವಿಶ್ವವಿದ್ಯಾನಿಲಯಗಳನ್ನು ಮುಚ್ಚಿ, ಮುಕ್ತ ವಿಶ್ವವಿದ್ಯಾನಿಲಯವೊಂದನ್ನುಳಿಸಿ ಕೊಳ್ಳಬಹುದು.

ಶಾಲಾ ಕಾಲೇಜುಗಳ ರಜಾದಿನಗಳನ್ನು ಕಡಮೆ ಮಾಡುವುದು, ಅಧ್ಯಾಪಕರ ದೈನಂದಿನ ಪಾಠ ಪ್ರವಚನಗಳ ಅವಧಿಯನ್ನೂ ಪ್ರಮಾಣವನ್ನೂ ಹೆಚ್ಚಿಸುವುದು, ಎಲ್ ಟಿಸಿ ಮೊದಲಾದ

ರಿಯಾಯಿತಿಗಳನ್ನು ಸಂಪೂರ್ಣವಾಗಿ ನಿಲ್ಲಿಸುವುದು, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪರೀಕ್ಷೆಗಳ ಕಾವಲು ಮೊದಲಾದ ಸೇವೆಗಳು ಅಧ್ಯಾಪಕರ ಕರ್ತವ್ಯವೆಂದು ಘೋಷಿಸಿ, ಎಲ್ಲ ಹಣಸಂಬಂಧವಾದ ರಿವಾಜುಗಳನ್ನು ನಿಲ್ಲಿಸುವುದು, ವರ್ಗಾವಣೆಗಳನ್ನು ತಡೆಗಟ್ಟುವುದು ಇವೇ ಮೊದಲಾದ ಉಪಾಯಗಳ ಮೂಲಕ ಖರ್ಚನ್ನು ಕಡಮೆ ಮಾಡಬಹುದು.

ಹತ್ತನೆಯ ವರ್ಗದವರೆಗಿನ ಎಲ್ಲ ಪಠ್ಯಗಳನ್ನು ಸರ್ಕಾರವೇ ತಯಾರಿಸಿ, ಮುದ್ರಿಸಿ, ಹಂಚುವುದಾದರೆ, ಪುಸ್ತಕದ ಬೆಲೆಯನ್ನು ಶೇಕಡ ಹದಿನೈದು ಭಾಗ ಹೆಚ್ಚಿಸುವುದಾದರೆ ಕೋಟ್ಯಂತರ ರೂಪಾಯಿ ಲಾಭ ಬರುತ್ತದೆ. ತೆರಿಗೆ ರಿಯಾಯ್ತಿಗಳ ಮೂಲಕ ಸ್ವಸಹಾಯಪರ ಶಾಲಾ ಕಾಲೇಜುಗಳಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು. ವೃತ್ತಿ ತೆರಿಗೆಯನ್ನು ಹೆಚ್ಚಿಸಬೇಕು. ದೊಡ್ಡ ಪ್ರಮಾಣದ ರೈತರ ಮೇಲೆ, ನಗರ ಕಂದಾಯದ ಮೇಲೆ, ಕೈಗಾರಿಕೋತ್ಪನ್ನಗಳ ಮೇಲೆ ಶಿಕ್ಷಣ ಶುಲ್ಕ ವಿಧಿಸಬೇಕು. ಮಾದಕ ಪದಾರ್ಥಗಳ ಮೇಲಣ ತೆರಿಗೆಯನ್ನು ಹೆಚ್ಚಿಸಬೇಕು. ಮಂತ್ರಿಗಳಾಗಲಿ, ರಾಜ್ಯಪಾಲರಾಗಲಿ ತಿಂಗಳಿಗೆ ಹದಿನೈದು ದಿನ ಮಾತ್ರ ರಾಜಧಾನಿಯ ಹೊರಗೆ ಪ್ರಯಾಣ ಮಾಡಬೇಕು. ಸಂಬಳಗಳ ಪುನರ್ಪರಿಶೀಲನೆಯಲ್ಲಿ, ತುಟ್ಟಿಭತ್ಯೆಯನ್ನು ಹೆಚ್ಚಿಸುವಲ್ಲಿ ಸಂಯಮವಿರಬೇಕು. ರಾಜ್ಯದ ಸರಾಸರಿಗಿಂತ ಯಾವ ಶಾಲಾಕಾಲೇಜುಗಳಲ್ಲಿ ಕಡಮೆ ಫಲಿತಾಂಶ ಬರುತ್ತದೆಯೋ ಅಂಥ ಶಾಲಾ ಕಾಲೇಜುಗಳ ಮುಖ್ಯಸ್ಥರ ಮತ್ತು ಅಧ್ಯಾಪಕರ ಬಡ್ತಿಯನ್ನು ನಿಲ್ಲಿಸಬೇಕು. ಅನೇಕ ಕಚೇರಿಗಳಲ್ಲಿ ಹೆಚ್ಚಾಗಿರುವ ಸಿಬ್ಬಂದಿ ವರ್ಗವನ್ನು ಮುಖ್ಯವಾಗಿ ಉನ್ನತವರ್ಗದ ಅಧಿಕಾರಿಗಳನ್ನು ಖೋತಾಮಾಡಬೇಕು. ಕೆಲವು ಶ್ರೇಣೀಕೃತ ವರ್ಗಗಳನ್ನು ಕಿತ್ತು ಹಾಕಬಹುದು. ಉದಾಹರಣೆಗೆ ಗುಮಾಸ್ತ, ಸೀನಿಯರ್ ಅಸಿಸ್ಟಂಟ್, ಸೂಪರಿಂಟೆಂಡೆಂಟ್, ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಪ್ರಿನ್ಸಿಪಾಲ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ-ಇವೆಲ್ಲ ಆವಶ್ಯಕವೆ? ವಾಹನ ಸೌಕರ್ಯಗಳನ್ನು ಕಡಿಮೆ ಮಾಡಬೇಕು. ದಾಕ್ಷಿಣ್ಯಕ್ಕಾಗಿ, ಹಣಕ್ಕಾಗಿ ಹೊಸ ಶಾಲಾಕಾಲೇಜುಗಳನ್ನು ಮಂಜೂರು ಮಾಡಬಾರದು.

ಕಾಲೇಜುಗಳ ಅನುದಾನ ಕಡಿತಗೊಳಿಸುವುದರಿಂದ, ಸ್ನಾತಕೋತ್ತರ ಶಿಕ್ಷಣ ಕುಂಠಿತವಾಗುತ್ತದೆ. ಅದರಿಂದ ಪಾಂಡಿತ್ಯಕ್ಕೆ, ತಜ್ಞತೆಗೆ, ಜ್ಞಾನಾಭಿವೃದ್ಧಿಗೆ ಒಟ್ಟಿನಲ್ಲಿ ಅಕಾಡೆಮಿಕ್ ಎಕ್ಸಲೆನ್ಸ್‌ಗೆ ಹೊಡೆತ ಬೀಳುತ್ತದೆಂಬುದನ್ನು ಜ್ಞಾನಾಸಕ್ತರು ಮತ್ತು ವಿವೇಕಿಗಳು ಯೋಚಿಸಬೇಕು. ಶುದ್ಧವಿಜ್ಞಾನ (ಪ್ಯೂರ್ ಸೈನ್ಸ್) ಪ್ರಾಯೋಗಿಕ ಹಾಗೂ ತಂತ್ರವಿಜ್ಞಾನಗಳಿಗೆ ಆಧಾರ. ಶುದ್ಧ ವಿಜ್ಞಾನದ ಸ್ನಾತಕೋತ್ತರ ತರಗತಿಗಳಿಗೆ ಬುದ್ಧಿವಂತ ವಿದ್ಯಾರ್ಥಿಗಳು ಕಾಣೆಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಭೂಕಂಪನಕ್ಕಿಂತ ವಿದ್ಯಾಕ್ಷೇತ್ರದ ಕಂಪನ ಹೆಚ್ಚು ಅಪಾಯಕಾರಿಯೆಂಬುದನ್ನು ಆಡಳಿತಗಾರರು ಗಮನಿಸಬೇಕು.

ಸ್ವಾತಂತ್ರ್ಯ ಬಂದು ಅರ್ಧಶತಮಾನವಾದರೂ, ಇಂಗ್ಲಿಷ್ ಮಾಧ್ಯಮದ ಶಾಲೆಗಳು ದಿನೇ ದಿನೇ ಹೆಚ್ಚುತ್ತಿವೆ. ಅನೇಕ ಶಾಲೆಗಳು ವಾಮಮಾರ್ಗಗಳ ಮೂಲಕ ತಲೆಯೆತ್ತುತ್ತಿವೆ. ಶಿಕ್ಷಣಕ್ಷೇತ್ರದಲ್ಲಿಯೂ ಲಂಚ ಹೆಚ್ಚುತ್ತಿದೆ. ತಂದೆ ತಾಯಿಯರಿಗೆ ಮತ್ತು ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮ ಬೇಕೆನ್ನುವುದಾದರೆ, ಬೇಡವೆನ್ನುವುದು ಸರಿಯೆ? ಇಂಗ್ಲಿಷ್ ಶಾಲೆಗಳನ್ನು ಕದ್ದು ತೆರೆಯುವ ಅವಕಾಶವನ್ನೇಕೆ ಸೃಷ್ಟಿಸಬೇಕು ? ಯಾರು ಬೇಕಾದರೂ ತೆರೆಯಲಿ. ಆದರೆ ಸರ್ಕಾರ

ನಾಲ್ಕು ನಿಯಮಗಳನ್ನು ಕಠಿಣವಾಗಿ ಜಾರಿಗೆ ತರಬೇಕು. ೧. ಪ್ರತಿವರ್ಷ ಒಂದು ಲಕ್ಷಕ್ಕೆ ಕಡಮೆ ಇಲ್ಲದಂತೆ ಪ್ರತಿಯೊಂದು ಇಂಗ್ಲಿಷ್ ಮಾಧ್ಯಮ ಶಾಲೆ ಸರ್ಕಾರಕ್ಕೆ ಶುಲ್ಕ ತೆರಬೇಕು. ೨. ಉಪಾಧ್ಯಾಯರ ಸಂಬಳ ಸಾರಿಗೆ ಮೊದಲಾಗಿ ಎಲ್ಲ ಖರ್ಚುಗಳಿಗೂ ಶಾಲೆಗಳೇ ಜವಾಬ್ದಾರಿ ಹೊರಬೇಕು. ೩. ಆ ಶಾಲೆಗಳ ಎಲ್ಲ ಪಠ್ಯ ಪುಸ್ತಕಗಳನ್ನು ಸರ್ಕಾರವೇ ಮುದ್ರಿಸಿ ಒದಗಿಸತಕ್ಕದ್ದು. ಪೋಷಕ ಅಥವಾ ಸಹಾಯಕ ಗ್ರಂಥಗಳನ್ನು ಖಾಸಗಿಯವರು ಪ್ರಕಟಿಸಬಹುದು. ೪. ಸರ್ಕಾರಿ ಮತ್ತು ಅರೆಸರ್ಕಾರಿ ಉದ್ಯೋಗಗಳು ಹಾಗೂ ತಾಂತ್ರಿಕ ಮತ್ತು ವೃತ್ತಿಪರ ಕಾಲೇಜುಗಳ ಪ್ರವೇಶಗಳು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿರತಕ್ಕದ್ದು. ಎಲ್ಲ ಕೇಂದ್ರ ರಾಜ್ಯ ಕಚೇರಿಗಳ ಅಧಿಕೃತ ಭಾಷೆ ಕನ್ನಡವೇ ಇರತಕ್ಕದ್ದು. ಈ ರಾಜ್ಯದಲ್ಲಿದ್ದುಕೊಂಡು ಇಲ್ಲಿಯ ಸುಖಸೌಲಭ್ಯ ಸವಲತ್ತುಗಳನ್ನನುಭವಿಸುತ್ತಿರುವ ಶೋಷಕ ಪ್ರವೃತ್ತಿಯ ಅನ್ಯಭಾಷಿಕರು, ಇಲ್ಲಿಯ ಗುಲಾಮಿ ಮನೋಭಾವದವರು ಮತ್ತು ಮೀರ್‌ಸಾದಿಕ್ ಪರಂಪರೆಯ ಜನ ಮಾತ್ರ ಈ ನಿಯಮಗಳನ್ನು ವಿರೋಧಿಸುವ ಸಂಭವವಿದೆ. ಕನ್ನಡ ಜನ ಆ ವಿರೋಧವನ್ನು ಕೆಚ್ಚೆದೆಯಿಂದ ಎದುರಿಸಬೇಕಾಗಿದೆ.

ಇತ್ತೀಚೆಗೆ ೨೬.೨.೨೦೦೧ ಮುಖ್ಯಮಂತ್ರಿ ಶ್ರೀ ಕೃಷ್ಣ ಅವರು ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸುವರ್ಣ ವರ್ಷಭವನದ ಶಂಕುಸ್ಥಾಪನೆಯನ್ನು ನೆರವೇರಿಸಿ ಆಡಿದ ಮಾತುಗಳನ್ನು (ಪ್ರಜಾವಾಣಿಯಿಂದ) ಉದ್ಧರಿಸುತ್ತೇನೆ: 'ಸರ್ಕಾರಿ ಕರ್ತವ್ಯದ ವೇಳೆಯಲ್ಲಿ ಕಡತಗಳ ವಿಲೇವಾರಿ ನಿದಾನ ಮಾಡುವುದೂ ಒಂದು ಅಪರಾಧ, ಇಂತಹ ಅಧಿಕಾರಿಗಳನ್ನು ಗುರುತಿಸಿ, ನಿದಾನ ದ್ರೋಹ ಆರೋಪದ ಮೇಲೆ ಶಿಕ್ಷೆಗೆ ಒಳಪಡಿಸಲಾಗುವುದು' ಮುಖ್ಯಮಂತ್ರಿಗಳ ದಿಟ್ಟತನದ ಈ ಹೇಳಿಕೆ ಶ್ಲಾಘ್ಯ. ವಿಲಂಬವೂ ಭ್ರಷ್ಟಾಚಾರದ ಮೂಲ, ಅದಕ್ಷತೆಯ ಸಂಕೇತ, ಪ್ರಜಾಪ್ರಭುತ್ವದ ಶಾಪವೆಂಬುದನ್ನು ತಿಳಿದು, ಅದಕ್ಕೆ ಕಾರಣರಾದವರನ್ನೂ ದಕ್ಷ ಪ್ರಾಮಾಣಿಕ ಅಧಿಕಾರಿಗಳು ಬಲಿಹಾಕಬೇಕು. ಅದೆಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆಯೋ ಕಾದು ನೋಡಬೇಕಾಗಿದೆ. ಎರಡು ಮೂರು ದಿನಗಳ ಹಿಂದೆ ನಾನೊಂದು ವಿಶ್ವವಿದ್ಯಾನಿಲಯದ ಇಲಾಖೆಯೊಂದಕ್ಕೆ ಹೋಗಿದ್ದೆ, ಸುಮಾರು ಬೆಳಗ್ಗೆ ೧೦.೧೫ ಗಂಟೆಯ ಸಮಯದಲ್ಲಿ, ಒಬ್ಬರೇ ಒಬ್ಬರು ಪ್ರಾಧ್ಯಾಪಕರು ಹಾಜರಿದ್ದರು. ಇಡೀ ಕಟ್ಟಡ ಭಣಗುಡುತ್ತಿತ್ತು. ಉಳಿದ ಮಿತ್ರರು ಯಾವಾಗ ಬರುತ್ತಾರೆ? ಎಂದು ಕೇಳಿದೆ. ಅವರಿಗೆ ಮನಸ್ಸು ಬಂದಾಗ, ೧೨ ಗಂಟೆಯ ಮೇಲೆ ಎಂಬ ಉತ್ತರ ಸಿಕ್ಕಿತು. ಮತ್ತೊಂದು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನನ್ನ ಬಳಿ ಬಂದು ಹೇಳಿದ್ದುಂಟು: 'ನಮ್ಮ ಪ್ರಾಧ್ಯಾಪಕರಿಗೆ ದಿನಕ್ಕೊಂದು ಸಾವಿರ ಸಂಬಳ, ಪಾಠ ಮಾತ್ರ ತಿಂಗಳಿಗೆ ಎರಡು ಗಂಟೆ ಎಂದು. ಕೆಲವು ಪ್ರಾಧ್ಯಾಪಕರು ಅಕಾಡೆಮಿಗಳ ಅಧ್ಯಕ್ಷರಾಗಿರುತ್ತಾರೆ. ಅವರು ಅಲ್ಲಿ ಇಲ್ಲಿ ಹೇಗೆ ಕೆಲಸಮಾಡುತ್ತಾರೆಯೋ ಕಾಣೆ. ಅವರು ಇಲ್ಲಿರಲಿ, ಅಥವಾ ಅಲ್ಲಿರಲಿ.

ಮಂತ್ರಿಗಳು ಮತ್ತು ಅಧಿಕಾರಿಗಳು ಸರಿಯಾಗಿ ಹೋಂವರ್ಕ್ ಮಾಡುವುದಾದರೆ ನಿರಾಶೆಗೊಳ್ಳಬೇಕಾದ್ದಿಲ್ಲ; ಅನಾವಶ್ಯಕವಾಗಿ ಶೇಕಡ ೧೫ ಭಾಗ ಕಡಿಯಬೇಕಾಗಿಲ್ಲ ಎಂಬುದು ಮೇಲಣ ಅಂಕಿಅಂಶಗಳಿಂದ ವೇದ್ಯವಾಗದಿರದು. ಅದೇನೇ ಆದರೂ, ಸಂಬಂಧಪಟ್ಟವರು ಶೈಕ್ಷಣಿಕ ಕ್ಷೇತ್ರದ ನೈತಿಕತೆಯನ್ನೂ ಶಿಸ್ತನ್ನೂ ಕಾಪಾಡುವಂತಾಗಲಿ, ಜ್ಞಾನ ಸಾಗರದ ತುಂಬಿಗೆ ಕಾರಣವಾದ ಸ್ನಾತಕೋತ್ತರ ಶಿಕ್ಷಣವನ್ನು ಅಸಡ್ಡೆ ಮಾಡದಿರಲಿ ಎಂದು ಆಶಿಸುತ್ತೇನೆ.

೨. ವಿಗ್ರಹ ಭಂಜನೆ

ಇಸ್ಲಾಂ ಧರ್ಮ ಧಾಳಿಮಾಡುವ ಮುನ್ನ ಅಫ್ಘಾನಿಸ್ಥಾನದಲ್ಲಿ ಬೌದ್ಧರೊ , ಹಿಂದುಗಳೊ ಕ್ರಿಶ್ಚಿಯನ್ನರೊ ಪುಷ್ಕಳವಾಗಿ ಇದ್ದಿರಬೇಕು. ಇಂದಿನ ಆಫ್ಘನ್‌ರಲ್ಲಿಯೂ ಅದೇ ರಕ್ತ ಹರಿಯು ತ್ತಿದ್ದರೂ, ಪರಿಸರದ ಪ್ರಭಾವದಿಂದ ಅಲ್ಲಿಯ ಜನ ಮತಾಂಧರಾಗಿರುವಂತೆ ತೋರುತ್ತದೆ. ಅಲ್ಲಿಯ ಮಧ್ಯಪ್ರದೇಶದ ಬೆಮಿಯಾನ್ ಪ್ರಾಂತ್ಯದಲ್ಲಿ ಸುಮಾರು ಎರಡು ಸಾವಿರ ವರ್ಷ ಹಿಂದಿನ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ಶಿಲ್ಪಕೃತಿಗಳು ಅಪಾರ ಸಂಖ್ಯೆಯಲ್ಲಿವೆ. ಯಾವ ಮತದವರೇ ಆಗಲಿ, ಆ ವಿಗ್ರಹಗಳನ್ನು ದ್ವೇಷಿಸುವ, ನಾಶಮಾಡುವ ಜನ ಬರ್ಬರರೇ ಇರಬೇಕು, ಅಮಾನವೀಯ ಕ್ರೂರ ಜಂತುಗಳೇ ಇರಬೇಕು.

ಮೂರ್ನಾಲ್ಕು ವರ್ಷಗಳ ಹಿಂದೆ ತಾಲಿಬಾನ್ ಸರ್ಕಾರ ಚಾಲ್ತಿಗೆ ಬಂದಾಗಿನಿಂದ, ಜಗತ್ತಿನ ಉಗ್ರಗಾಮಿಗಳ ಪಾಳೆಯಗಾರನಂತಿರುವ ಒಸಾಮ ಬಿನ್ ಲೇಡನ್ ಆ ಸರ್ಕಾರದ ಆಶ್ರಯ ಸೇರಿದಾಗಿನಿಂದ, ಜೆಹಾದ್ ಮೂಲಕ ಜಗತ್ತನ್ನು ಇಸ್ಲಾಮೀಕರಣಮಾಡುವ ಸನ್ನಾಹ ನಡೆದಿದೆ. ಆ ಸರ್ಕಾರ ರಚಿಸಿರುವ ಕಾನೂನೇ ಬರ್ಬರೀಯವಾಗಿದೆ, ಅನಾಗರಿಕವಾಗಿದೆ. ವಸ್ತ್ರಧಾರಣೆ ಬಗೆಗೂ ಕಾನೂನಿದೆ. ಹೆಂಗಸರು ವಿದ್ಯೆ ಕಲಿಯುವಂತಿಲ್ಲ, ಬೀದಿಯಲ್ಲಿ ಓಡಾಡುವಂತಿಲ್ಲ. ಕೊನೆಗೆ ಮನೆಯಲ್ಲಿ ಟಿವಿ ಇಟ್ಟುಕೊಳ್ಳುವಂತಿಲ್ಲ ; ಕ್ಯಾಮರಾ ಬಳಸುವಂತಿಲ್ಲ. ಆಧುನಿಕ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯದ ಜನಾಂಗ ತನ್ನ ಸಮಾಧಿಯನ್ನು ತಾನೇ ತೋಡಿಕೊಳ್ಳುತ್ತದೆ.

ಅನ್ಯಧರ್ಮೀಯರನ್ನು ದ್ವೇಷಿಸುವ, ಅವರ ದೇವಾಲಯಗಳನ್ನಾಗಲಿ, ಪವಿತ್ರ ಕ್ಷೇತ್ರ ಗಳನ್ನಾಗಲೀ ನಾಶಮಾಡುವ ಜನ ದೈವದ್ರೋಹಿಗಳು. ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ ಬುದ್ಧನ ವಿಗ್ರಹವನ್ನು ನೆಲಸಮ ಮಾಡಿದ ಜನ ಮಹಾಪಾಪಿಗಳು. ಅವುಗಳನ್ನು ನೋಡುವುದರಿಂದ ಕಣ್ಣುರಿಯಾಗುವುದಾದರೆ ದೂರದ ಕಾಡಿನಲ್ಲೊಂದು ಮ್ಯೂಸಿಯಮ್ ಸ್ಥಾಪಿಸಿ , ಅವನ್ನಲ್ಲಿ ರಕ್ಷಿಸಬಹುದಿತ್ತು. ತಮ್ಮ ದೇಶದಲ್ಲಿ ಅವು ಇರಬಾರದೆನ್ನುವ ಇರಾದೆ ಇದ್ದುದಾದರೆ, ಅವುಗಳಿಗೆ ಬೇಡಿಕೆ ಇರುವ ದೇಶಗಳಿಗೆ ಮಾರಿ, ಹಣಗಳಿಸಬಹುದಿತ್ತು, ಅಥವಾ ದಾನ ಮಾಡಬಹುದಿತ್ತು. ಈ ಮೂರು ಮಾರ್ಗಗಳಲ್ಲಿ ಒಂದನ್ನಾದರೂ ಅನುಸರಿಸದ ಆ ಜನ ದುಷ್ಟರೆಂದೇ ಹೇಳಬೇಕಾಗುತ್ತದೆ. ಇಂಥ ಹತ್ತು ಹಲವಾರು ದುಷ್ಕೃತ್ಯಗಳ ಮೂಲಕ ಜಗತ್ತನ್ನೇ ರಣಭೂಮಿಯನ್ನಾಗಿ ಪರಿವರ್ತಿಸುವ ಕೆಟ್ಟತನ ಆ ನೀಚರದ್ದೆಂದು ಪ್ರಧಾನಿ ವಾಜಪೇಯಿ ಹೇಳಿರುವ ಮಾತು ಸರಿಯೇ ಸರಿ. ಅಲ್ಲಿಯ ಅಧ್ಯಾತ್ಮ ನಾಯಕನೆಂದು ಕರೆದುಕೊಳ್ಳುವ ಮುಲ್ಲಾ ಮೊಹಮದ್ ಓಮರ್ ಈ ಎಲ್ಲ ಅಕೃತ್ಯಗಳ ಹಿಂದಿದ್ದಾನೆಂದು ಹೇಳುವಾಗ, ಪುರೋಹಿತಶಾಹಿಯ ಪೈಶಾಚಿಕ ಪ್ರವೃತ್ತಿಯ ಹೇಯ ವರ್ತನೆ ಯನ್ನು ಗಮನಿಸಬಹುದಾಗಿದೆ. ಆ ವಿಗ್ರಹಗಳು ಕಲ್ಲಿನಿಂದಾದುವು, ಅವು ಹುಚ್ಚರು ಸೃಷ್ಟಿಸಿದ ಸುಳ್ಳು ದೇವರುಗಳಾದ್ದರಿಂದ, ಅವು ಸಾಮಾನ್ಯರನ್ನು ಅಲ್ಲಾನಿಂದ ಬೇರ್ಪಡಿಸ ಬಹುದಾದ್ದರಿಂದ, ಅವನ್ನು ನಾಶಪಡಿಸಬೇಕೆಂದು ೨೬.೨.೨೦೦೧ರಂದು ಅವನು ಆಜ್ಞೆ ಮಾಡುತ್ತಾನೆ.

ವಿಶ್ವದ ಎಲ್ಲ ಕಡೆಗಳಿಂದ, ಮುಸ್ಲಿಮ್ ರಾಷ್ಟ್ರಗಳಿಂದ, ಬೌದ್ಧರಿಂದ, ಭಾರತದ ಉಲೇಮಾ ಗಳಿಂದ, ವಿಶ್ವಸಂಸ್ಥೆಯಿಂದ, ಮಾನವಹಕ್ಕು ಸಂಸ್ಥೆಗಳಿಂದ, ಕಿವಿಗಡಚಿಕ್ಕುವ ಪ್ರಮಾಣದಲ್ಲಿ ಮನವಿಗಳು, ಪ್ರತಿಭಟನೆಗಳು, ವಿರೋಧಗಳು ಬಿರುಸಾಗಿ ಅಪ್ಪಳಿಸಿದರೂ, ಅಲ್ಲಿಯ ಆಡಳಿತಗಾರರು ವಿಚಲಿತರಾಗಿಲ್ಲ. ಮತಾಂಧತೆಯ ಸೊಕ್ಕು ಎಂಥ ಹೇಯ ಕಾರ್ಯಕ್ಕಾದರೂ ಸಿದ್ಧ. ಅನ್ಯಧರ್ಮಗಳ ದೇವರನ್ನು ನಿಂದಿಸುವುದಾಗಲಿ, ದೇವಾಲಯಗಳನ್ನು ನಾಶಪಡಿಸುವು ದಾಗಲಿ ಇಸ್ಲಾಮ್ ತತ್ತ್ವವಿರೋಧಿಯೆಂದು ಲಕ್ನೋ ಉಲೇಮಾಗಳು ಸ್ಪಷ್ಟಪಡಿಸಿದ್ದಾರೆ. ವಿಗ್ರಹಭಂಜನೆ ನಾಚಿಕೆಗೇಡಿನ ದುಷ್ಕೃತ್ಯವೆಂದು ಅಪಹಾಸ್ಯ ಮಾಡಿದ್ದಾರೆ. ಸಂಯುಕ್ತ ರಾಷ್ಟ್ರಸಂಸ್ಥೆ ಪಿಯರಿಲಾಫ್ರಾನ್ಸ್ ಎಂಬ ದೂತನ ಮೂಲಕ ವಿಗ್ರಹಭಂಜನ ವಿರೋಧಿ ಮನವಿಯನ್ನು ಪ್ರಧಾನ

ಮುಲ್ಲಾನ ಮುಂದೆ ಸಲ್ಲಿಸಿದರೂ, ದೀರ್ಘಚರ್ಚೆ ನಡಸಿದರೂ ಫಲಕಾರಿಯಾಗಲಿಲ್ಲ. ಆ ವಿಗ್ರಹಗಳು ಬಹುಮುಖ್ಯ ಐತಿಹಾಸಿಕ ಸಾಂಸ್ಕೃತಿಕ ಆಸ್ತಿಯಾದರೂ, ತಮ್ಮ ರಾಷ್ಟ್ರದ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾಗಿದೆಯೆಂದೂ , ಪರಿಹಾರ ಕಾರ್ಯದಲ್ಲಿ ಬಹುದೂರ ಮುಂದುವರಿದಿರುವುದರಿಂದ ಪರ್ಯಾಯ ಕಾರ್ಯ ಸಾಧ್ಯವಿಲ್ಲವೆಂದು ಆ ಮುಲ್ಲಾ ಹೇಳಿ ಬಿಡುತ್ತಾನೆ.

ಪಾಕಿಸ್ತಾನದ ಮಾಜಿ ಪ್ರಧಾನಿ ಬೆಂಜೀರ್ ಭುಟ್ಟೋ ಮತ್ತು ಮಾಜಿ ವಿಖ್ಯಾತ ಕ್ರಿಕೆಟ್ ಆಟಗಾರ ಇಮ್ರಾನ್ ಖಾನರೂ ಅಫ್ಘಾನಿಸ್ಥಾನದ ಆಡಳಿತಗಾರರಿಗೆ ಉಗ್ರಪ್ರತಿಭಟನೆ ಸಲ್ಲಿಸಿದ್ದಾರೆ. ಭಾರತದಂಥ ರಷ್ಯಾದಂಥ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರಾಗಿರುವ ಮುಸ್ಲಿಮರ ಕ್ಷೇಮಾಭ್ಯುದಯಗಳ ಬಗ್ಗೆ ಆ ಮುಲ್ಲಾಗಳು ಚಿಂತಿಸಬೇಡವೆ ?

ಆರೆಸ್ಸೆಸ್, ಹಿಂದೂಪರಿಷತ್, ಬಜರಂಗದಳದಂಥ ಸಂಸ್ಥೆಗಳಿಗೆ ಅಫ್ಘಾನಿಸ್ಥಾನ ಮಾರ್ಗದರ್ಶಿಯಾಗಬಹುದೆ? ಸ್ಥಳೀಯ ಮುಸ್ಲಿಮರು ಪಾಕಿಸ್ತಾನದ ಬೆದರಿಕೆಗಳನ್ನು ಪ್ರತಿಭಟಿಸುವ ಮೂಲಕ ಹಿಂದೂಪರಿಷತ್ ಆರೆಸ್ಸೆಸ್‌ಗಳ ಶಕ್ತಿಯನ್ನು ಕುಂದಿಸಬೇಕಾಗಿದೆ.

ಪ್ರತಿಯೊಂದು ರಾಷ್ಟ್ರವೂ ಸರ್ವತಂತ್ರ ಸ್ವತಂತ್ರ ದೇಶವಾಗಿದ್ದು, ಹೊರಗಿನ ಶಕ್ತಿಗಳು ಅವುಗಳ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕಬಾರದು, ನಿಜ. ಆದರೆ ಜಗತ್ತಿನ ಶಾಂತಿಗೆ ಭಂಗವುಂಟು ಮಾಡುವ ರಾಷ್ಟ್ರವನ್ನು ತಹಬಂದಿಗೆ ತರುವ ಅಧಿಕಾರ ಸಂಯುಕ್ತ ರಾಷ್ಟ್ರ ಸಂಸ್ಥೆ, ಅಂತರರಾಷ್ಟ್ರೀಯ ನ್ಯಾಯಾಸ್ಥಾನ ಮತ್ತು ಅಂತರ ರಾಷ್ಟ್ರೀಯಮಾನವ ಹಕ್ಕು ಸಂಸ್ಥೆಗಳಿಗಿರಬೇಕಾದ್ದು ಅತ್ಯವಶ್ಯ. ಅಂತರ ರಾಷ್ಟ್ರೀಯ ಒತ್ತಡಕ್ಕೆ ಬೆಲೆ ಕೊಡದಿದ್ದಾಗ, ಎಲ್ಲ ರಾಷ್ಟ್ರಗಳೂ ತಪ್ಪಿತಸ್ಥ ರಾಷ್ಟ್ರಕ್ಕೆ ಬಹಿಷ್ಕಾರ ಹಾಕಬೇಕು. ಅಂತೆಯೇ ಒಂದು ರಾಷ್ಟ್ರದೊಳಗಿನ ಶಾಂತಿಯನ್ನು ಯಾವುದಾದರೂ ಅಲ್ಪ ಸಂಖ್ಯಾತ ವರ್ಗ ಕದಡುವುದಾದರೆ, ಉಳಿದ ಅಲ್ಪಸಂಖ್ಯಾತರು ತಪ್ಪಿತಸ್ಥವರ್ಗವನ್ನು ಹದಕ್ಕೆ ತರುವುದಾದರೆ, ಪ್ರಗತಿಗೆ ಅಡ್ಡವಾಗಿರುವ ಸಮಸ್ಯೆಗಳು ಬತ್ತಿ ಹೋಗುತ್ತವೆ.

ಮತಾಂಧರ ದುರುದುಂಬಿತನ, ಮೂಲಭೂತವಾದ ಹಾಗೂ ಉಗ್ರಗಾಮಿ ಮನೋಭಾವ ಜಗತ್ತಿನ ಶಾಂತಿಗೆ, ಅಸ್ತಿತ್ವಕ್ಕೆ ಅಪಾಯಕಾರಿಯಾದ್ದರಿಂದ, ಮತಾಂಧರನ್ನು ಹಾಗೂ ಪುರೋಹಿತ ಶಾಹಿಯನ್ನು ಕೊನೆಗೊಳಿಸಲು ಎಲ್ಲ ರಾಷ್ಟ್ರಗಳೂ ಪ್ರಯತ್ನಿಸಬೇಕು. ಭಾರಿ ಭೂಕಂಪದ ಅಪಾಯಕ್ಕಿಂತ ಮತಾಂಧತೆಯ ಮೂಲಭೂತವಾದ ಅಪಾಯ, ಅಪಾರ, ಅಪರಿಹಾರ್ಯವೆಂಬುದನ್ನು ಲೋಕದ ವಿವೇಕಿಗಳು ಅರಿಯಬೇಕು.

೩. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವರದಿ

(ಶಿಕ್ಷಣ ಮತ್ತು ಮಾಧ್ಯಮ)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ೨೦೦೧ನೆಯ ಇಸವಿ ಜನವರಿ ತಿಂಗಳಲ್ಲಿ 'ಶಿಕ್ಷಣ ಮತ್ತು ಮಾಧ್ಯಮ'ಕ್ಕೆ ಸಂಬಂಧಿಸಿದ ನೀತಿ ನಿರೂಪಣಾ ವರದಿಯನ್ನು ಮುಖ್ಯಮಂತ್ರಿಗಳಿಗೆ ಒಪ್ಪಿಸಿದೆ. ಗೋಕಾಕ ವರದಿಯಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ಆ ಬಗ್ಗೆ ನಡೆದಿರುವ ಚರ್ಚೆಯನ್ನು , ರಾಜ್ಯದ ವರಿಷ್ಠನ್ಯಾಯಾಲಯದ ಹಾಗೂ ಭಾರತದ ಪರಮೋಚ್ಚನ್ಯಾಯಾಲಯದ ತೀರ್ಪುಗಳನ್ನು ಸರ್ಕಾರಿ ಆಜ್ಞೆಗಳನ್ನು ಪರಿಶೀಲಿಸಿ, ಆಲೋಚನೆ ನಡಸಿ, ಪರಾಮರ್ಶಿಸಿ, ಇಡೀ ದೇಶಕ್ಕೆ ಅನ್ವಯಿಸಬಹುದಾದಂಥ ವಿವೇಕಯುತವಾದ ವರದಿ ತಯಾರಿಸಿರುವುದು ಸ್ತುತ್ಯಕಾರ್ಯ. ಇದರಲ್ಲಿ ಹದಿನೈದು ಅಧ್ಯಾಯಗಳಿವೆ.

ರಾಜ್ಯಭಾಷೆ ಪ್ರಜಾಪ್ರಭುತ್ವ ಸಿದ್ಧಾಂತದ, ಸಾಮಾಜಿಕ ನ್ಯಾಯದ ಹಾಗೂ ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ ಸರ್ವಮಾಧ್ಯಮವಾಗತಕ್ಕದ್ದು ಸೂಕ್ತ, ನ್ಯಾಯ ಹಾಗೂ ಧರ್ಮ. ರಾಜ್ಯದಲ್ಲಿಯೇ

ಹುಟ್ಟಿದ, ಜೀವಿಕೆಗಾಗಿ ಎಲ್ಲಿಂದಲೋ ಬಂದು ನೆಲಸಿದ ಎಲ್ಲ ಪ್ರಜೆಗಳಿಗೂ ರಾಜ್ಯ ಭಾಷೆಯೇ ಹೆತ್ತತಾಯಿ ಅಥವಾ ಸಾಕು ತಾಯಿ; ಮೂಲ ಮಾತೃಭಾಷೆ ಅಥವಾ ದ್ವಿತೀಯ ಮಾತೃಭಾಷೆ. ಒಂದೇ ನೆಲದ ಸವಲತ್ತುಗಳನ್ನನುಭವಿಸುವವರೆಲ್ಲರೂ ಏಕಭಾಷೀಯರೇ ಆಗಬೇಕು, ಏಕೀಭವಿಸಿ ಬಾಳಬೇಕು. ದೇಶದ ಜನರೆಲ್ಲರೂ ಈ ತತ್ತ್ವವನ್ನೊಪ್ಪಿಕೊಂಡಾಗ, ಭಾಷಾ ಸಮಸ್ಯೆ ಕಗ್ಗಂಟಾಗಲಾರದು. ಗ್ರಾಮೀಣರನ್ನು ಹಾಗೂ ನಗರದ ಬಡವರನ್ನು ಈ ವರದಿ ಗಮನದಲ್ಲಿಟ್ಟುಕೊಂಡಿರುವುದು ಸಮಾಧಾನದ ಸಂಗತಿ. ಸಿಬಿಎಸ್‌ಇ; ಐಸಿಎಸ್‌ಇ ಶಾಲೆಗಳಿಗೆ ಸರ್ಕಾರ ಅನುಮತಿ ನೀಡಬಾರದೆಂಬ ಡಾ. ಎಚ್ಚೆನ್ ವರದಿಯ ಶಿಫಾರಸು ಯೋಗ್ಯವಾದದ್ದೇ. 'ಭಾಷಾ ನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ' ಎಂಬುದಾಗಿ ಸರ್ವೋಚ್ಚ ನ್ಯಾಯಾಲಯ ೮.೧೨.೧೯೯೩ರಲ್ಲಿ ನೀಡಿದ ತೀರ್ಪು ಮೆಚ್ಚುವಂಥದು. ಅಲ್ಪಸಂಖ್ಯಾತರು ಜನಜೀವನದಲ್ಲಿ ಒಂದಾಗಲು, ಏಕತೆ ಸಾಧಿಸಲು, ನೆಲದ ಸತ್ವವನ್ನು ಹೀರಿಕೊಳ್ಳಲು, ದೇಶಪ್ರೇಮವನ್ನು ಬೆಳೆಸಿಕೊಳ್ಳಲು, ಭ್ರಾತೃತ್ವವನ್ನು ಏಳ್ಗೆಗೊಳಿಸಲು ರಾಜ್ಯಭಾಷೆಗೆ ಮಾತ್ರ ಸಾಮರ್ಥ್ಯವಿದೆಯೆಂಬುದು ನಿಜ. ಆಂಗ್ಲಮಾಧ್ಯಮ ಉಳ್ಳವರ, ಉಚ್ಚಸಂಸ್ಕೃತಿವಂತರ ಮಾಧ್ಯಮವೆನ್ನುವ ಮಾತು ತಪ್ಪಬೇಕು.

ಪ್ರಾಥಮಿಕ ಶಿಕ್ಷಣ ಮಾತೃಭಾಷೆಯ ಅಥವಾ ಕನ್ನಡ ಭಾಷೆಯ ಮಾಧ್ಯಮದಲ್ಲಿ ನಡೆಯಬೇಕೆನ್ನುವುದು ಸರಿ. ಆ ಮುಂದೆಯೂ ರಾಜ್ಯ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕಾದ್ದು ಭಾಷಾ ವಿಜ್ಞಾನ ಮತ್ತು ಮನೋವಿಜ್ಞಾನದ ದೃಷ್ಟಿಯಿಂದ ಅನಿವಾರ್ಯ. ಎಲ್ಲ ಡಿಪ್ಲೊಮಾ ತರಗತಿಗಳಲ್ಲಿಯೂ ಕನ್ನಡ ವನ್ನು ಕಲಿಸಬೇಕು; ವೈದ್ಯ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಪ್ರಾರಂಭದಲ್ಲಿ ದ್ವಿಭಾಷಾ ಮಾಧ್ಯಮವೂ ಎಂಟು ಹತ್ತು ವರ್ಷಗಳ ನಂತರ ಕನ್ನಡ ಮಾಧ್ಯಮವೂ ಇರಬೇಕೆಂದು ಪ್ರಾಧಿಕಾರದ ಶಿಫಾರಸು ಮಾಡಬೇಕಿತ್ತು. ಇಂಗ್ಲಿಷ್ ಮಾಧ್ಯಮದ ಚಾಲನೆಗೆ ಅಡ್ಡಿ ಅನವಶ್ಯ. ಆದರೆ ವೃತ್ತಿ ಶಿಕ್ಷಣ ತರಗತಿಗಳಿಗೆ ಹಾಗೂ ಸರ್ಕಾರದ ಎಲ್ಲ ಉದ್ಯೋಗಗಳಿಗೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನೇ ಆರಿಸಿಕೊಳ್ಳಬೇಕು. ಆಗ ಇಂಗ್ಲಿಷ್ ಮಾಧ್ಯಮ ತಾನಾಗಿಯೇ ಸಾಯುತ್ತದೆ. ಆ ಬಗೆಗಿನ ಪ್ರಾಧಿಕಾರದ ಶಿಫಾರಸು ಯೋಗ್ಯವಾಗಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಮೂರು ಭಾಷೆ ಭಾರವಾಗುವುದಿಲ್ಲವೆ, ಅದರಲ್ಲಿಯೂ ಹಳ್ಳಿಯ ನಿರಕ್ಷರಿಗಳು ಮಕ್ಕಳಿಗೆ ತಜ್ಞರು ಯೋಚಿಸಬೇಕು. ಬಾಲ್ಯದಲ್ಲಿಯೇ ಓದು, ಬರಹ, ಗಣಿತಗಳಲ್ಲಿ ಸಾಮರ್ಥ್ಯವನ್ನು ಸಂಪಾದಿಸಿದ್ದಾದರೆ, ವಿದ್ಯಾರ್ಥಿಯ ಭವಿಷ್ಯ ಜೀವನವಾಗಲಿ, ಭವಿಷ್ಯ ಶಿಕ್ಷಣವಾಗಲಿ ಸಲೀಸಾಗಿ ನಡೆಯುತ್ತದೆಂಬುದನ್ನು ಉಪೇಕ್ಷಿಸಲಾಗದು. ಚರಿತ್ರೆ, ಭೂಗೋಳ, ಆರೋಗ್ಯ, ಗಣಿತ, ಸುಲಭವಿಜ್ಞಾನ-ಇವನ್ನೂ ಜತೆಗೆ ಎರಡು ಭಾಷೆಗಳನ್ನೂ ಮಕ್ಕಳು ಚೆನ್ನಾಗಿ ಕಲಿಯಬೇಕು. ಮಾತೃಭಾಷೆಯನ್ನು ಚೆನ್ನಾಗಿ ಕಲಿತವನು ಉಳಿದ ಭಾಷೆಗಳನ್ನು ಅನಂತರ ಹೆಚ್ಚು ಕ್ಲೇಶವಿಲ್ಲದೆ ಕಲಿಯಬಹುದಾಗಿದೆ.

ತ್ರಿಭಾಷಾ ಸೂತ್ರ ಅನಿವಾರ್ಯವೆನ್ನುವುದಾದರೆ, ಪರೀಕ್ಷಾ ಫಲಿತಾಂಶ ನಿರ್ಣಯಕ್ಕೆ ಸಂಬಂಧಿಸಿದಂತೆ ಒಂದು ಹೊಸ ಸೂತ್ರವನ್ನು ಅನುಸರಿಸಬಹುದು. ಮೂರು ಭಾಷೆಗಳದ್ದೇ ಒಂದು ಘಟಕವಾಗಬೇಕು. ಪ್ರತಿಯೊಂದು ಭಾಷೆಯಲ್ಲಿಯೂ ವಿದ್ಯಾರ್ಥಿ ಶೇಕಡ ೩೦ ಅಂಕಗಳನ್ನು, ಮೊತ್ತದಲ್ಲಿ ಶೇಕಡ ೩೫ ಅಂಕಗಳನ್ನು ಪಡೆದರೆ ತೇರ್ಗಡೆ ಹೊಂದುವಂತಾಗಬೇಕು. ಆಗ ಅಲ್ಪ ಸಂಖ್ಯಾತರಿಗೂ ಅನ್ಯಾಯವಾಗುವುದಿಲ್ಲ. ಅವನು ತನ್ನ ಮಾತೃ ಭಾಷೆಯಲ್ಲಿ ೪೫ ಅಂಕಗಳನ್ನು ಪಡೆದು, ಉಳಿದ ಭಾಷೆಗಳಲ್ಲಿ ತಲಾ ೩೦ ಅಂಕಗಳನ್ನು ಪಡೆದರೆ ಸಾಕು, ಪಾಸಾಗುತ್ತಾನೆ. ಅವಶ್ಯವಾದರೆ ಈ ಪರಿಮಾಣವನ್ನು ವ್ಯತ್ಯಾಸ ಮಾಡಿಕೊಳ್ಳಬಹುದು. ಪ್ರಾಥಮಿಕ ೬ನೆಯ ತರಗತಿಯಿಂದ ಶಿಕ್ಷಣ ಮಾಧ್ಯಮ ಕನ್ನಡವಾಗಬೇಕು. ಶಿಕ್ಷಣ ಮಾಧ್ಯಮದ ಭಾಷೆಯೇ

ಪ್ರಥಮ ಭಾಷೆಯಾಗಬೇಕು.

ಸಂಪೂರ್ಣ ಕನ್ನಡ ಮಾಧ್ಯಮದ ಶಾಲಾ ಕಾಲೇಜುಗಳಿಗೆ ವಿಶೇಷಾನುದಾನ ನೀತಿಯನ್ನು ರೂಪಿಸಬೇಕೆಂಬ ಪ್ರಾಧಿಕಾರದ ಶಿಫಾರಸು ಅತ್ಯಂತ ಶ್ಲಾಘ್ಯವಾದದ್ದು. ವೈದ್ಯರಾಗಲಿ, ಇಂಜನಿಯರ್‌ರಾಗಲಿ, ಕೃಷಿತಜ್ಞರಾಗಲಿ ಸಾಮಾನ್ಯ ಜನತೆಯ ಜತೆಯಲ್ಲಿ ವ್ಯವಹರಿಸಬೇಕಾಗಿರುವುದರಿಂದ, ಅವರು ಕನ್ನಡ ಕಲಿಯುವಂತಾಗಬೇಕು; ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವಾಗಬೇಕೆನ್ನುವ ಯೋಚನೆ ಯೋಗ್ಯವಾದದ್ದು. ವಿಶ್ವವಿದ್ಯಾನಿಲಯಗಳಲ್ಲಿ 'ಕ್ರಿಯಾತ್ಮಕ ಕನ್ನಡ' ಕಲಿಸಬೇಕು; ಕನ್ನಡ ಸಂಸ್ಕೃತಿ ಪಠ್ಯ ಮತ್ತು ಪಠ್ಯವಿಷಯ ಪುನರ್‌ವಿಂಗಡನೆಗೊಂಡು ಸಂಸ್ಕೃತಿ ಪಠ್ಯಗಳಾಗಿ ರೂಪಾಂತರಗೊಳ್ಳಬೇಕು ; ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡಕ್ಕೆ ಸ್ಥಾನ ದೊರಕಬೇಕು;ಇವು ಪ್ರಾಧಿಕಾರದ ಉಪಯುಕ್ತ ಸಲಹೆಗಳು. ಒಟ್ಟಿನಲ್ಲಿ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡವೇ ಮಾಧ್ಯಮವಾಗಬೇಕೆಂಬುದು ಈ ವರದಿಯ ಆಶಯವಾಗಿದೆ.

ಶಿಕ್ಷಣದ ಯಾವ ಹಂತದಲ್ಲಾದರೂ ಕನ್ನಡ ಇಂಗ್ಲಿಷ್ ಎರಡು ಮಾಧ್ಯಮಗಳಲ್ಲೂ ಪಾಠ ಹೇಳಬಹುದು, ವಿದ್ಯಾರ್ಥಿಗಳು ಯಾವ ಮಾಧ್ಯಮ (ಇಂಗ್ಲಿಷ್ ಅಥವಾ ಕನ್ನಡ)ದಲ್ಲಾದರೂ ಉತ್ತರ ಬರೆಯಬಹುದು; ಇಂಗ್ಲಿಷ್ ಮಾಧ್ಯಮದಲ್ಲಿ ಪಾಠ ಕಲಿತಿದ್ದರೂ ಕನ್ನಡದಲ್ಲಿ ಉತ್ತರ ಬರೆಯಬಹುದು ; ಪಿಎಚ್‌ಡಿ ನಿಬಂಧಗಳೂ ಕನ್ನಡದಲ್ಲಿರಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯ ಮೂವತ್ತು ವರ್ಷಗಳ ಹಿಂದೆಯೇ ಉದಾರ ಭಾಷಾನೀತಿಯನ್ನು ರೂಪಿಸಿ, ಜಾರಿಗೊಳಿಸಿದ್ದುಂಟು. ಒಂದೇ ಉತ್ತರಪತ್ರಿಕೆಯಲ್ಲಿ ಅನಿವಾರ್ಯವಾದರೆ ಎರಡೂ ಭಾಷೆಗಳನ್ನು ಬಳಸಬಹುದೆಂಬುದು ನನ್ನ ಸಲಹೆ. ಶಿಕ್ಷಣದ ಪಠ್ಯಕ್ರಮ, ಮಾಧ್ಯಮ, ಕಾಲಾವಧಿ ಅಂಶಗಳಲ್ಲಿ ಏಕರೂಪತೆ ಇರಬಹುದೇ ಹೊರತು ಸಮವಸ್ತ್ರದಲ್ಲಲ್ಲ. ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯವಾಗುವುದಾದರೆ, ಮೊದಲು ಉಪಾಧ್ಯಾಯರಿಗೆ ಕಡ್ಡಾಯವಾಗಬೇಕಲ್ಲವೆ?

ಕೊನೆಯದಾಗಿ ಗಡಿನಾಡು ಹೊರನಾಡುಗಳಲ್ಲಿಯ ಕನ್ನಡದ-ಕನ್ನಡಿಗರ ಅಗತ್ಯಗಳಿಗೆ ಸ್ಪಂದಿಸಬೇಕಾದ ಅನಿವಾರ್ಯತೆಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಗಡಿರಾಜ್ಯದ ಮಂತ್ರಿಗಳು ವರ್ಷಕ್ಕೆರಡು ಸಲವಾದರೂ ಸಭೆ ಸೇರಿ, ಎರಡೂ ಕಡೆಯ ಭಾಷಾ ಅಲ್ಪಸಂಖ್ಯಾತರ ಆವಶ್ಯಕತೆಗಳನ್ನು ಗುರುತಿಸಿ, ಅವರ ಸಂಖ್ಯೆಯ ಆಧಾರದ ಮೇಲೆ ಶೈಕ್ಷಣಿಕ ಸೌಲಭ್ಯಗಳನ್ನು ಸಾಂಸ್ಕೃತಿಕ ಅಗತ್ಯಗಳನ್ನೂ ಪೂರೈಸಬೇಕಾದ್ದು ಸಂಬಂಧಪಟ್ಟ ಎಲ್ಲ ರಾಜ್ಯಸರ್ಕಾರಗಳ ಕರ್ತವ್ಯವಾಗಿದೆ.

ಒಟ್ಟಿನಲ್ಲಿ ಪ್ರಾಧಿಕಾರದ ಈ ವರದಿ ಶಿಕ್ಷಣಕ್ಷೇತ್ರದ ಐತಿಹಾಸಿಕ ದಾಖಲೆಯಾಗುಳಿಯಲಿದೆ. ಅದರಿಂದಾಗಿ ಪ್ರಾಧಿಕಾರ ಕನ್ನಡಿಗರ ಅಭಿನಂದನೆಗೆ ಪಾತ್ರವಾಗಿದೆ. ಕರ್ನಾಟಕ ಸರ್ಕಾರ ಈ ವರದಿಯ ಒಂದೊಂದಂಶವನ್ನೂ ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕಾದ್ದು ಅತ್ಯಗತ್ಯ. **ಆಡಳಿತ ಮಾಧ್ಯಮದ ಬಗ್ಗೆಯೂ ಸಮಗ್ರ ಅಧ್ಯಯನವನ್ನೊಳಗೊಂಡ ಒಂದು ವರದಿ ಬಂದರೆ ಮೇಲು.** ಆ ಕಡೆಗೂ ಪ್ರಾಧಿಕಾರ ಗಮನಹರಿಸುತ್ತದೆಂದು ನಂಬಬಹುದಾಗಿದೆ. ಕನ್ನಡದ ಸ್ಥಾನಮಾನ ಹಾಗೂ ಶಿಕ್ಷಣ ಮಾಧ್ಯಮದ ಯಶಸ್ಸು, ಆಡಳಿತ ಮಾಧ್ಯಮವನ್ನವಲಂಬಿಸಿದೆಯೆಂಬ ಸತ್ಯವನ್ನು ಮರೆಯುವಂತಿಲ್ಲ.

'Speak English if you are a British citizen, a Crown Court Judge ordered Mohamed Sarwar' (9.5.1988 Hindu)ಎಂಬ ಮಾತನ್ನು ತುಸು ಬದಲಾಯಿಸಿ ಕರ್ನಾಟಕ ದಲ್ಲಿರಬೇಕಾದರೆ, ಕನ್ನಡ ಕಲಿಯಿರಿ ಎಂದು ಅನ್ಯಭಾಷೀಯರಿಗೆ ನಮ್ರತೆಯಿಂದ ಹೇಳಬೇಕಾಗಿದೆ.

-ದೇಜಗೌ

ದಕ್ಷ ದಾರ್ಶನಿಕ ಪ್ರೊ. ಜಿ. ಹನುಮಂತರಾವ್

ಭಾರತೀ ಕಾಸರಗೋಡು
೮೩, ೨ನೇ ಮಹಡಿ, ೫ನೇ ಬಿ ಮೆಯಿನ್,
ಆರ್‌ಪಿಸಿ ಲೇಔಟ್, ವಿಜಯನಗರ,
ಬೆಂಗಳೂರು-೪೦

ಶುಭ್ರ ಮುಖ, ಶುದ್ಧ ನಗು, ಸೌಮ್ಯ ಆಕಾರ, ಜಗತ್ತಿನ ಒಳ್ಳೆಯತನವನ್ನೆಲ್ಲ ತುಂಬಿಕೊಂಡು. ಬಿಡಬಲ್ಲೆನೆನ್ನುವ, ಅಷ್ಟನ್ನೂ ಹಾಗೇ ಹಿಂತಿರುಗಿಸಿ ಕೂಡ ಕೊಟ್ಟು ಬಿಡಬಲ್ಲೆನೆನ್ನುವ ತಿಳಿ ನೋಟ, ಪ್ರಾಮಾಣಿಕತೆ ತುಂಬಿಕೊಂಡ ಚಹರೆಗಳು. ಇದು ಹತ್ತೊಂಬತ್ತನೇ ಶತಮಾನದಲ್ಲಿ ಹುಟ್ಟಿ ಇಪ್ಪತ್ತನೇ ಶತಮಾನಕ್ಕೆ ಸೇವೆ ಸಲ್ಲಿಸಿದ ಪ್ರೊ. ಜಿ. ಹನುಮಂತರಾಯರ ಬಾಹ್ಯ ವರ್ಣನೆ. ಇನ್ನು ಅವರ ಆಂತರಂಗಿಕ ಸ್ವರೂಪ. ಅದನ್ನು ವರ್ಣಿಸುವುದು ಕಷ್ಟ. ಒಂದು ಮಾತಿನಲ್ಲಿ ಹೇಳುವುದಾದರೆ ಅವರು Master of all, ಅಪರಿಮಿತ ಜೀವನೋತ್ಸಾಹಿ, ಧೀಮಂತ ಪ್ರಾಧ್ಯಾಪಕ, ಪ್ರತಿಭಾವಂತ ಲೇಖಕ, ಉತ್ತಮ ಕ್ರೀಡಾಪಟು, ಕಲಾರಸಿಕ, ಪತ್ರಿಕೋದ್ಯಮಿ, ಮನೆ ಕಟ್ಟಿಸುವ 'ಸಿವಿಲ್ ಎಂಜಿನಿಯರ್', ತೋಟಗಾರ, ಗೋಪಾಲಕ, ದಕ್ಷ ಆಡಳಿತಗಾರ, ಯೂನಿವರ್ಸಿಟಿ ಲೈಬ್ರೆರಿಯನ್... ಎಲ್ಲಕ್ಕಿಂತ ಮುಖ್ಯವಾಗಿ ಮನೆಯವರೆಲ್ಲರ ಅಕ್ಕರೆಯ 'ಅಣ್ಣಯ್ಯ'.

ಹನುಮಂತರಾಯರು ತುಮಕೂರಿನಲ್ಲಿ ೧೨.೪.೧೮೯೮ರಂದು ಜನಿಸಿದರು. ತಂದೆ ಗಂಡೂರು ರಾಮರಾಯರು. ತಾಯಿ ಬಾಗೀರಥಮ್ಮ. ರಾಯರ ಜೀವನದ ರೂವಾರಿ ಈ ತಾಯಿಯೇ ! ಭಾಗೀರಥಮ್ಮನವರ ಜೀವನವನ್ನು ಭದ್ರ ತಳಹದಿಯ ಮೇಲೆ ನೆಲೆಗೊಳಿಸಿದವರು ಅವರ ತಂದೆ ವೆಂಕಟಕೃಷ್ಣಯ್ಯನವರು. ಹದಿನಾಲ್ಕರ ಚಿಗುರು ವಯಸ್ಸಿನಲ್ಲೇ ವಿಧವೆಯ ಪಟ್ಟ ಹೊತ್ತ ಮಗಳಿಗೆ ಮನೆಯಲ್ಲೇ ಪಾಠ ಹೇಳಿ ಖಾಸಗಿಯಾಗಿ ಲೋವರ್ ಸೆಕೆಂಡರಿ ತೇರ್ಗಡೆ ಮಾಡಿಸಿದರು. ಹೈಯರ್ ಸೆಕೆಂಡರಿ ಓದಿಗೆ-ಸಮಾಜದ ತೀವ್ರ ವಿರೋಧವನ್ನು ಲೆಕ್ಕಿಸದೆ-ಶಾಲೆಗೇ ಕಳಿಸಿಕೊಟ್ಟರು. ಭಾಗೀರಥಮ್ಮ ಕೂಡ ಛಲವಾದಿ. ಹಂಗಿಲ್ಲದ ಸ್ವತಂತ್ರ ಬಾಳುವೆಯ ಆಕಾಂಕ್ಷೆ ಆಕೆಗೂ ಇತ್ತು. ಶ್ರದ್ಧೆಯಿಂದ ಓದಿ ಪರೀಕ್ಷೆ ಪಾಸು ಮಾಡಿ ಉದ್ಯೋಗವನ್ನೂ ಗಿಟ್ಟಿಸಿಕೊಂಡರು. ತೊಂಭತ್ತೇಳು ವರ್ಷಗಳಷ್ಟು ಕಾಲ ಸಾರ್ಥಕ ಜೀವನ ನಡೆಸಿದ ಆಕೆ ಒಮ್ಮೊಮ್ಮೆ ತಾವೇ ನೊಂದು ಕೊಳ್ಳುತ್ತಿದ್ದರಂತೆ. ''ಸರ್ಕಾರದ ಋಣಾನ ಇನ್ನೂ ಎಷ್ಟು ದಿನ ಅನುಭವಿಸಬೇಕೋ ಏನೋ ?.. ನನ್ನಂಥ ಗಟ್ಟಿಪಿಂಡಗಳಿಗೆ ಪೆನ್‌ಶನ್ ಕೊಟ್ಟೂ ಕೊಟ್ಟೂ ಸರ್ಕಾರದ ಬೊಕ್ಕಸವೇ ಬರಿದಾಗಿ ಬಿಡುತ್ತೋ ಏನೋ?''

ಭಾಗೀರಥಮ್ಮ ಮೊದಲಿನಿಂದಲೂ ಸಮಾಜ ಜೀವನಕ್ಕೆ ವಿಶೇಷವಾಗಿ ಮಹಿಳೆಯರ ಸೇವೆಗೆ, ತಮ್ಮನ್ನು ತಾವು ತೆರೆದು ಕೊಂಡವರು. ಪ್ರಾಯ ಕಣ್ತೆರೆಯುವ ಮುನ್ನವೇ ವಿಧವೆಯಾಗಿಬಿಟ್ಟರೂ ಸಂಸಾರ ಸುಖದಿಂದ ವಂಚಿತವಾದ ಕೊರಗನ್ನು ಆಕೆ ಎಂದೂ ತೋರಿಸಿಕೊಂಡವರಲ್ಲ. ಜೀವನದ ಬಗ್ಗೆ ಆಕ್ರೋಶವಿಲ್ಲ. ಬದಲಿಗೆ ಸ್ನೇಹವನ್ನೂ ಪ್ರೀತಿಯನ್ನೂ ಹಂಚಿ ಬದುಕಿದರಾಕೆ. ತನ್ನಂತೆ ವಿಧವೆಯರಾದ ಅದೆಷ್ಟೋ ಮಹಿಳೆಯರನ್ನು ಪರೀಕ್ಷೆಗಳಿಗೆ ಕಟ್ಟಿಸಿ ಪಾಸು ಮಾಡಿಸಿ, ಕೆಲಸಗಳನ್ನು ಕೊಡಿಸಿದರು. ಹಿಂದೀ ಭಾಷೆಯಲ್ಲಿ ಶಿಕ್ಷಣ ಕೊಡಿಸಿ

ದರು. ಸ್ವಯಂ ಸೇವಕಿಯರನ್ನಾಗಿ ನಿರೂಪಿಸಿ, ತಮ್ಮ ಅನ್ನವನ್ನು ತಾವೇ ಗಳಿಸಿಕೊಳ್ಳಲು ನೆರವಾದರು. ಅಷ್ಟು ಮಾತ್ರವಲ್ಲ, ಯಾವುದೇ ಗಂಡ-ಹೆಂಡತಿ ಜಗಳದಲ್ಲಿ ಭಾಗೀರಥಮ್ಮ ಹಾಜರ್! ಬುದ್ಧಿವಾದ ಹೇಳಿ ಜಗಳ ಬಿಡಿಸಿ, ಕುಟುಂಬದಲ್ಲಿ ಸೌಹಾರ್ದ ಮೂಡಿಸಿ ಬಿಡುತ್ತಿದ್ದರು. ಇಂಥ ತಾಯಿ ಹೆತ್ತ ಮಗ ನಮ್ಮ ಹನುಮಂತರಾಯರು.

ರಾಯರ ವ್ಯಕ್ತಿತ್ವ ನಿರ್ಮಾಣದಲ್ಲಿ ತಾತ ವೆಂಕಟಕೃಷ್ಣಯ್ಯನವರದು ಪ್ರಮುಖ ಪಾತ್ರ. ತಂದೆಯ ಮುಖವನ್ನೇ ಕಾಣದ ಈ ಹುಡುಗ ಬೆಳೆದದ್ದು ತಾತನ ಬಗಲಿನಲ್ಲಿಯೇ. ಆಟ ಆಡಿಸುತ್ತಲೇ ರಂಜನೀಯ ಬಾಲಪಾಠಗಳನ್ನು ಶ್ಲೋಕಗಳನ್ನು ತಲೆಗೆ ತುಂಬಿದರು. ಮನುಷ್ಯ ಏನಾಗಬೇಕು, ಹೇಗೆ ಬಾಳಬೇಕು ಎಂಬುದನ್ನೆಲ್ಲ ವಿವರವಾಗಿ ಹೇಳಿ ಕೊಟ್ಟರು. ತಾತನ ಶ್ರಮ ನಿರರ್ಥಕವಾಗಲಿಲ್ಲ. ಹುಡುಗ ೧೯೨೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. (ತತ್ವಶಾಸ್ತ್ರ) ಯಶಸ್ವಿಯಾಗಿ ಮುಗಿಸಿ ಮನೆತನಕ್ಕೇ ಕೀರ್ತಿ ತಂದ. ತಂದೆ ಇರಲಿಲ್ಲವೆಂಬ ಏಕೈಕ ಕೊರತೆಯನ್ನು ಬಿಟ್ಟರೆ ರಾಯರು ತಮ್ಮ ಬದುಕಿನ ಪೂರಾ ಸುಖ-ಸಮೃದ್ಧಿಯನ್ನೇ ಕಂಡವರು. ಶಿಸ್ತು, ಶ್ರದ್ಧೆ, ಸೌಖ್ಯ, ಸಾಫಲ್ಯಗಳ ರಸಮಯ ಸಂಗಮ ಅವರ ಸುದೀರ್ಘ ಬದುಕು. ''ಅದೃಷ್ಟವಂತ ವ್ಯಕ್ತಿಯನ್ನು ಕಡಲಿಗೆ ಎಸೆದರೂ ಆತ ಹಿಂದೆ ಬರುತ್ತಾನೆ. ಬಾಯಿಯಲ್ಲಿ ಒಂದು ಮೀನಿನ ಸಹಿತ!'' ಅನ್ನುವಂತೆ ನನ್ನ ತಂದೆ ತುಂಬ ಅದೃಷ್ಟಶಾಲಿಗಳು ಎಂದು ಅವರ ಮಗಳು ಶ್ರೀಮತಿ ಕಮಲ ಹೆಮ್ಮೆಯಿಂದ ನೆನೆದು ಕೊಳ್ಳುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕ ವೃತ್ತಿಯ ಜತೆಜತೆಗೆ ಸಾಹಿತ್ಯ ವ್ಯವಸಾಯವನ್ನೂ ಯಶಸ್ವಿಯಾಗಿ ತೂಗಿಸಿಕೊಂಡು ಹೋದ ಹೆಗ್ಗಳಿಕೆ ರಾಯರದು. ಅವರೊಬ್ಬ ಅದ್ವಿತೀಯ ಲೇಖಕರು. 'ವಿಜ್ಞಾನ', 'ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು', 'ಕುಟುಂಬ ಜೀವನ', 'ತರ್ಕಶಾಸ್ತ್ರ', 'ಸಮಾಜದ ರೋಗ ರುಜಿನಗಳು', 'ಋಗ್ವೇದ ಸೂಕ್ತಗಳು', 'ಶಂಕರಾಚಾರ್ಯ' 'ಭಾರತದಲ್ಲಿ ಪರಧರ್ಮ ಸಹಿಷ್ಣುತೆ', 'ಧರ್ಮದೀಪಕರು' ಅಲ್ಲದೆ ಭಾರತೀಯ ತತ್ವಶಾಸ್ತ್ರದ ಬಗ್ಗೆ ಬೆಳಕು ಚೆಲ್ಲಬಲ್ಲ ಇಪ್ಪತ್ತೆಂಟು ಕಿರುಹೊತ್ತಿಗೆಗಳನ್ನು ಅವರು ರಚಿಸಿದ್ದಾರೆ. ವೇದ, ಉಪನಿಷತ್ತು, ಭಗವದ್ಗೀತೆ ಅಲ್ಲದೆ ವಿಭಿನ್ನ ತತ್ವದರ್ಶನಗಳ ಬಗ್ಗೆ ವಿಪುಲ ಮಾಹಿತಿ ಇಲ್ಲಿದೆ. Sadharanikarana', 'Aesthetics of poetry','Music and painting', ಮುಂತಾದ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ರಚಿಸಿದ್ದಾರೆ.

ರಾಯರು ಹಲವಾರು ಪ್ರೌಢಲೇಖನಗಳನ್ನು ಕೂಡ ರಚಿಸಿದ್ದಾರೆ. ಇವು 'Aryan path' 'The quest', 'The International journal of Ethics', 'The Indian philosophical posterity', ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಇಂಡಿಯನ್ ಫಿಲಾಸಾಫಿಕಲ್ ಕಾಂಗ್ರೆಸ್‌ನ ಹಲವಾರು ಅಧಿವೇಶನಗಳಲ್ಲಿ ಭಾಗವಹಿಸಿ ಪ್ರೌಢ ನಿಬಂಧಗಳನ್ನು ಮಂಡಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಕಾಲ ಸೇವೆ ಸಲ್ಲಿಸಿದ ಹಿರಿಯ ಚಿಂತಕ ಡಾ. ಎಸ್. ರಾಧಾಕೃಷ್ಣನ್ ಮೈಸೂರನ್ನು ಬಿಟ್ಟು ಹೋಗುವ ಮುನ್ನ ರಾಯರನ್ನು ಕುರಿತು

ಹೇಳಿದ ಮಾತುಗಳು ರಾಯರ ವ್ಯಕ್ತಿತ್ವದ ಹಿರಿಮೆಯನ್ನು ಎತ್ತಿ ಹಿಡಿಯುವಂತಿದೆ. ''ಇನ್ನು ಮುಂದೆ ಜಿ.ಹನುಮಂತರಾಯರು ನನ್ನ ಸ್ಥಾನವನ್ನು ತುಂಬುತ್ತಾರೆ. ಇಂಥ ದಕ್ಷ ಗುರುಗಳನ್ನು ಪಡೆಯುತ್ತಿರುವ ನೀವು ಅದೃಷ್ಟ ಶಾಲಿಗಳು.''

ರಾಧಾಕೃಷ್ಣನ್ ಅವರು ದೆಹಲಿಗೆ ಹೊರಟು ಹೋದ ಕೆಲವು ವರ್ಷಗಳ ಅನಂತರ ಹನುಮಂತರಾಯರು ಅವರನ್ನು ಸಂಪರ್ಕಿಸ ಬೇಕಾಯಿತು. ರಾಧಾಕೃಷ್ಣನ್‌ರಿಗೆ ತನ್ನ ನೆನಪು ಮಾಸಿಹೋಗಿರಬಹುದು ಅನ್ನುವ ಅಳುಕು ರಾಯರಿಗೆ. ತಮ್ಮ ಪರಿಚಯವನ್ನೆಲ್ಲ ಕೊಟ್ಟು ಪತ್ರ ಬರೆದರು. ರಾಧಾಕೃಷ್ಣನ್‌ರಿಂದ ಕೂಡಲೇ ಬಂತು ಉತ್ತರ, ''ಅಷ್ಟೆಲ್ಲ ಪೀಠಿಕೆ ಯಾಕೆ? ಯಾವಾಗಲೂ ಪರೀಕ್ಷೆಗಳಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದ ನಿಮ್ಮಂಥ ನನ್ನ ಪ್ರಿಯ ಶಿಷ್ಯನನ್ನು ನಾನು ಮರೆಯಲು ಸಾಧ್ಯವೇ?''

''ತೇದು ಹೋಗು : ತುಕ್ಕು ಹಿಡಿಯ ಬೇಡ'', ವಿಶ್ವೇಶ್ವರಯ್ಯನವರ ಮಾತುಗಳನ್ನು ರಾಯರು ಅಕ್ಷರಶಃ ಪಾಲಿಸಿದರು. ಕ್ರಿಯಾ ಶೀಲತೆ ಅವರ ಉಸಿರು. ಏರುಪೇರಿಲ್ಲದ ಕ್ರಮಬದ್ಧ ದಿನಚರಿ. ಪ್ರತಿಯೊಂದೂ ಶಿಸ್ತು, ಅಚ್ಚುಕಟ್ಟು. ವಯಸ್ಸಾಗಿ ಶಸ್ತ್ರಚಿಕಿತ್ಸೆಗೊಳ ಗಾಗಿದ್ದ ಸಂದರ್ಭದಲ್ಲಿ ಕೂಡ ವಿಶ್ವಕೋಶಕ್ಕೆ ಲೇಖನಗಳನ್ನು ಬರೆದು ಸಕಾಲದಲ್ಲಿ ತಲಪಿಸು ತ್ತಿದ್ದರು.

ಹನುಮಂತರಾಯರು ಮೈಸೂರಿನ ಕಾಸ್ಮಾಪಾಲಿಟನ್ ಕ್ಲಬ್‌ನ ಶಾಶ್ವತ ಸದಸ್ಯರು. ಕಡೆಯ ದಿನಗಳವರೆಗೂ ಅಲ್ಲಿಗೆ ತಪ್ಪದೆ ಭೇಟಿ ನೀಡುತ್ತಿದ್ದರು. ಬಿಲಿಯರ್ಡ್ಸ್ ಮತ್ತು ಬ್ರಿಡ್ಜ್ ಆಟಗಳಲ್ಲಿ ಅವರಿಗೆ ಚತುರತೆಯಿತ್ತು. ಅಪರಿಮಿತ ಜೀವನೋತ್ಸಾಹದ ಈ ತತ್ತ್ವ ಜ್ಞಾನಿಗೆ ಹಸು ಸಾಕಣೆಯಲ್ಲಿಯೂ ವಿಶೇಷ ಆಸಕ್ತಿ. ಎಲ್ಲಿ ಹಸುಗಳ ಹರಾಜು ನಡೆದರೂ ತಪ್ಪದೆ ಹಾಜರಿರುತ್ತಿದ್ದರು. ಉತ್ತಮ ರಾಸು ಗಳನ್ನು ಕೊಂಡುತಂದು ಮನೆಯ ಮುಂದೆ ನಿಲ್ಲಿಸಿ ಮನೆಯವರನ್ನು ಆಶ್ಚರ್ಯ ಪಡಿಸು ತ್ತಿದ್ದರಂತೆ!

ಅತಿಥಿ ಸತ್ಕಾರದಲ್ಲೂ ಅವರು ಅಗ್ರ ಗಣ್ಯರು. ದ.ರಾ.ಬೇಂದ್ರೆ, ಕುವೆಂಪು, ರಾಜರತ್ನಂ, ಎ.ಎನ್.ಮೂರ್ತಿರಾಯರು, ತೀನಂಶ್ರೀ, ಎಸ್.ವಿ.ರಂಗಣ್ಣ ಮೊದಲಾದ ಗಣ್ಯರೆಲ್ಲರೂ ಒಂದಿಲ್ಲೊಂದು ಬಗೆಯಲ್ಲಿ ರಾಯರ ಸ್ನೇಹದ ಸವಿಯನ್ನು ಅವರ ಮನೆಯ ರಸಗವಳದ ರುಚಿಯನ್ನು ಉಂಡವರೇ.

ಹನುಮಂತರಾಯರ ದಾರ್ಶನಿಕತೆಯು ಬೋಧನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಹೇಳಿದ್ದನ್ನೆಲ್ಲ ಸ್ವತಃ ತಮ್ಮ ಜೀವನದಲ್ಲಿ ಚಾಚೂ ತಪ್ಪದೆ ಅನುಸರಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಮನುಷ್ಯನಿಗೆ ಒಂದೇ ಜಾತಿ. ಅನೇಕ ಅಂತರ್ಜಾತಿ ವಿವಾಹಗಳನ್ನು ಮಾಡಿಸಿದ ಹೆಗ್ಗಳಿಗೆಯೂ ಅವರ ಪಾಲಿಗಿದೆ.

ರಾಯರ ಮನೆಯಲ್ಲಿ ಉಂಡು ಹೋಗು ತ್ತಿದ್ದವರಿಗೆ ಲೆಕ್ಕವಿಲ್ಲ. ವಿದ್ಯಾರ್ಥಿಗಳು, ಆಶ್ರಯವಿಲ್ಲದವರು, ಬಡಸಾಹಿತಿಗಳು, ಹೀಗೆ ಅವರ ಮನೆ ಒಂದು ಛತ್ರ. ವಾರಾನ್ನದ ಹುಡುಗರನ್ನು ಮನೆಯವರು ನಡೆಸಿಕೊಳ್ಳ ಬೇಕಾದ ರೀತಿಯ ಬಗ್ಗೆ ಕಟ್ಟುನಿಟ್ಟಿನ ಸೂಚನೆಗಳೇ ಇದ್ದುವು. ''ಅವನು ವಿದ್ಯಾರ್ಥಿ. ಅವನ ಕಾಲ ವ್ಯರ್ಥವಾಗಬಾರದು. ಆದ್ದರಿಂದ ಅವನು ಬರುವ ಹೊತ್ತಿಗಾಗಲೇ ಎಲೆ ಸಿದ್ಧ ವಾಗಿರಬೇಕು. ಅವನಿಗೆ ಸ್ವಲ್ಪವೂ ಸಂಕೋಚ ವಾಗದಂತೆ ಮಾಡಲು ಬಡಿಸುವವರೇ

ಪದಾರ್ಥಗಳನ್ನು ಕೇಳಿ ಕೇಳಿ ಬಡಿಸಬೇಕು. ಊಟದ ನಡುವೆ ಅವನು ಕಾಯುವಂತಾಗ ಬಾರದು, ದಾಕ್ಷಿಣ್ಯ ಪಡುವಂತಾಗ ಬಾರದು''. ಇದಲ್ಲದೆ ಮನೆಯ ಕೆಲಸದಾಳುಗಳಿಗೆ ಅಗಸರವನಿಗೆ, ತೋಟದ ಕೂಲಿಯಾಳು ಗಳಿಗೆ ರಾಗಿಮುದ್ದೆ, ಬಿಸಿ ಬಿಸಿ ಸಾರು ಮನೆ ಯಿಂದಲೇ ಸರಬರಾಜು! ಪ್ರತಿಯೊಬ್ಬರೂ ತೃಪ್ತಿಯಾಗಿ ಉಣ್ಣಬೇಕು... ಸಂತೋಷದಿಂದ ಇರಬೇಕು!

ರಾಯರು ಸಾರಗ್ರಾಹಿ, ಮತ್ತೊಬ್ಬರ ಸಾಧನೆ-ಪ್ರತಿಭೆ ಕಂಡು ಹಿಡಿದು ಗೌರವಿಸು ವುದರಲ್ಲಿ ಯಾವತ್ತೂ ಎತ್ತಿದ ಕೈ. ಎ.ಆರ್. ಕೃಷ್ಣಶಾಸ್ತ್ರಿಗಳಿಗೋಸ್ಕರ ತಮ್ಮದೇ ಸಂಪಾದಕತ್ವ ದಲ್ಲಿ 'ಅಭಿನಂದನೆ' ಎಂಬ ಗ್ರಂಥವನ್ನು ಪ್ರಕಟಿಸಿದರು. ಹೆಸರಾಂತ ಸಾಹಿತಿಗಳಿಂದ ಲೇಖನಗಳನ್ನು ಬರೆಸಿ ಗ್ರಂಥ ಸಮರ್ಪಣೆಯ ಸಮಾರಂಭವನ್ನು ತಮ್ಮ ಮನೆಯಲ್ಲೇ ಅದ್ದೂರಿಯಾಗಿ ಏರ್ಪಡಿಸಿದ್ದರು. ಬೇಂದ್ರೆ, ಮಾಸ್ತಿ, ಶಿವರಾಮ ಕಾರಂತ, ವಿಸೀ, ಕುವೆಂಪು, ಡಿ.ಎಲ್.ನರಸಿಂಹಾಚಾರ್, ತೀನಂಶ್ರೀ, ಜಿ.ಪಿ.ರಾಜರತ್ನಂ ಮೊದಲಾದ ಗಣ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಉಪನ್ಯಾಸ ಮಾಲೆಯ ಪ್ರಪಿತಾಮಹರು ರಾಯರೇ ಅನ್ನುವುದರಲ್ಲಿ ಎರಡು ಮಾತಿಲ್ಲ. ಇದರ ಯಶಸ್ಸಿಗಾಗಿ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಸುತ್ತಮುತ್ತಲಿನ ಹಳ್ಳಿಗರಲ್ಲಿ ತಿಳುವಳಿಕೆ ಹೆಚ್ಚಿಸುವ ಹಂಬಲ ರಾಯರಿಗೆ. ಸಂತೆಗಳ ದಿವಸ ತಾವೇ ಖುದ್ದಾಗಿ ಅಲ್ಲಿಗೆಲ್ಲ ಹೋಗಿ ಭಾಷಣ ನೀಡಲು ಪ್ರಯತ್ನಿಸಿದರು. ಈ ಪ್ರಯತ್ನ ಅಷ್ಟಾಗಿ ಫಲ ಕೊಡಲಿಲ್ಲ. ನಿರಾಶರಾಗದೆ ಹಳ್ಳಿಯ ಮುಖಂಡರನ್ನು ಭೇಟಿಯಾಗಿ ಯಾವ ಯಾವ ವಿಷಯಗಳನ್ನು ಮಾತನಾಡಿದರೆ ಹಳ್ಳಿಗರಿಗೆ ಇಷ್ಟವಾಗುತ್ತದೆ. ಮತ್ತು ಪ್ರಯೋಜನವಾಗುತ್ತದೆ ಎಂಬುದನ್ನು ಚರ್ಚಿಸಿದರು. ಅದಕ್ಕೆ ತಕ್ಕ ಹಾಗೆ ಭಾಷಣ ಗಳು, ಸಂವಾದಗಳು ನಡೆದುವು. ಮಧ್ಯೆ ಮಧ್ಯೆ ಹಳ್ಳಿಗರಿಗೆ ಬೇಸರವಾಗದಂತೆ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಹಳ್ಳಿಯವನಾಗಲೀ, ದಿಳ್ಳಿಯವನಾಗಲೀ, ಮನುಷ್ಯನಂತೂ ಯಾವಾಗಲೂ ಒಳ್ಳೆಯ ಮಾತುಗಳಿಗೆ ಹಸಿದವನೇ. ರಾಯರ ಭಾಷಣ ಕಾರ್ಯಕ್ರಮಗಳು ಕ್ರಮೇಣ ಫಲ ಕೊಡ ತೊಡಗಿದುವು. ಇಂಥ ಉಪನ್ಯಾಸಗಳಿಗೆ ಹೆಚ್ಚು ಹೆಚ್ಚು ಬೇಡಿಕೆಯೂ ಬರತೊಡಗಿತು. ಅನಂತರದ ದಿನಗಳಲ್ಲಿ ಈ ಉಪನ್ಯಾಸಗಳು ಸಣ್ಣ ಸಣ್ಣ ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿ ಆ ಯೋಜನೆ ತುಂಬ ಯಶಸ್ವಿಯೂ ಆಯಿತು. ಕುಲಪತಿ ಇ.ಜಿ.ಮೆಕಾಲ್ಪೆನ್, ಪ್ರೊ.ರಾಲೋ ಮೊದಲಾದವರು ರಾಯರಿಗೆ ಅಭಿನಂದನೆ ಸಲ್ಲಿಸಿದರು. ಇದೆಲ್ಲದರ ಖ್ಯಾತಿ ಇಂಗ್ಲೆಂಡ್ ವರೆಗೂ ಹಬ್ಬಿತು! ಪ್ರಚಾರ ಪುಸ್ತಕ ಮಾಲೆಯ ನೂರಾರು ಪುಸ್ತಕಗಳನ್ನು ನೋಡಿ ಆಗಿನ ಉಪರಾಷ್ಟ್ರಪತಿ ವಿ.ವಿ.ಗಿರಿ ವಿಸ್ಮಯದಿಂದ, ''ಈ ಯೋಜನೆ ಎಲ್ಲ ಭಾಷೆಗಳಲ್ಲಿ ಅನು ಷ್ಠಾನಕ್ಕೆ ಬಂದರೆ ಎಷ್ಟು ಚೆನ್ನ!'' ಎಂದು ಉದ್ಗರಿಸಿದರಂತೆ! ಈ ಮೌನ ಕ್ರಾಂತಿಯ ಜನಕ ಜಿ.ಹನುಮಂತರಾಯರು ಎಂದು ತಿ.ತಾ. ಶರ್ಮ ಬಣ್ಣಿಸಿದ್ದಾರೆ. ಕನ್ನಡ ಭಾಷೆಯ ಒಲವು-ಚೆಲುವುಗಳನ್ನು ಶಕ್ತಿ-ತೇಜಸ್ಸುಗಳನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸಿದ ಕರ್ಮ ಯೋಗಿ ಎಂದು ಇನ್ನಿತರರು ಅಭಿಪ್ರಾಯ ಪಟ್ಟರು.

ರಾಯರ ಕರ್ತೃತ್ವಶಕ್ತಿಗಂತೂ ಮಿತಿಯೇ

ಇರಲಿಲ್ಲ. ವಿದ್ಯಾ ಇಲಾಖೆಯ ಅಧಿಕಾರಿಗಳಿಂದ ಸಹಾಯ ಪಡೆದು ತಾವೇ ಮುಂದಾಳಾಗಿ ನಿಂತು 'ವಿದ್ಯಾಸಂಘ' ಎಂಬ ಸಂಸ್ಥೆಯನ್ನು ಕಟ್ಟಿದರು. ಏಳು ವರ್ಷಕಾಲ 'ವಿದ್ಯಾದಾಯಿನಿ' ಪತ್ರಿಕೆಯನ್ನು ನಡೆಸಿದರು. ವಿಭಿನ್ನ ಕ್ಷೇತ್ರಗಳ ಬೇರೆ ಬೇರೆ ವಿಷಯಗಳನ್ನು ಲಲಿತವಾದ ಸರಳ ಕನ್ನಡದಲ್ಲಿ ಬರೆದು, ಬರೆಯಿಸಿ ಪ್ರಚಾರ ಮಾಡಿಸಿದರು. ಸುಮಾರು ಎರಡು ಸಾವಿರದ ಎಂಟುನೂರು ಪುಟಗಳಲ್ಲಿ ಹನುಮಂತರಾಯರೇ ಒಂದು ಸಾವಿರದ ಇನ್ನೂರು ಪುಟಗಳನ್ನು ಬರೆದಿದ್ದಾರೆ. ರಾಜ್ಯದ ಅಕ್ಷರ ಪ್ರಚಾರ ಸಮಿತಿ ನಡೆಸುತ್ತಿದ್ದ 'ಪುಸ್ತಕ ಪ್ರಪಂಚ' ಮಾಸಪತ್ರಿಕೆಗೆ ರಾಯರು ಬಹಳ ಕಾಲ ಪ್ರಧಾನ ಸಂಪಾದಕರಾಗಿ ಅದರ ವರ್ಚಸ್ಸನ್ನು ಹೆಚ್ಚಿಸಿದ್ದರು.

''ವ್ಯಕ್ತಿಯ ಸಂಗಡಿಗರು ಯಾರೆಂದು ಹೇಳಿದರೆ ಆತನ ಶೀಲ ತಿಳಿಯುತ್ತದೆ'' ಈ ಮಾತು ಹನುಮಂತರಾಯರಿಗೆ ತುಂಬ ಚೆನ್ನಾಗಿ ಅನ್ವಯಿಸುತ್ತಿತ್ತು. ಪ್ರೊ.ಎ.ಎನ್. ಮೂರ್ತಿರಾಯರು, ಡಾ. ಎಸ್.ರಾಧಾಕೃಷ್ಣನ್, ಏಸೀ, ಕುವೆಂಪು, ಗೋಪಾಲಕೃಷ್ಣ ಅಡಿಗ, ಡಾ.ಎ.ಆರ್.ಕೃಷ್ಣಶಾಸ್ತ್ರಿ, ಪ್ರೊ.ಎಂ.ಹಿರಿಯಣ್ಣ, ಪ್ರೊ.ರಾಲೋ, ಡಾ. ವಿ.ಕೆ. ಗೋಕಾಕ್, ತೀನಂಶ್ರೀ,ಪ್ರೊ.ಸತ್ಯಗಿರಿನಾಥನ್, ಪ್ರೊ.ಡಿ.ಎಲ್. ನರಸಿಂಹಾಚಾರ್, ಟಿ.ಎಸ್.ವೆಂಕಣ್ಣಯ್ಯ, ಬಿ.ಎಸ್.ಕೇಶವನ್, ನಾ.ಕಸ್ತೂರಿ, ದೇವುಡು, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಡಿವಿಜಿ-ಹೀಗೆ ರಾಯರ ಬಳಗ ಉಜ್ವಲವಾದದ್ದು.

ಒಂದು ಸಾರಿ ಭಾರತೀಯ ಶಾಸ್ತ್ರ ಪದ್ಧತಿಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಇಂಗ್ಲೆಂಡಿನ ವಿದ್ವಾಂಸರ ತಂಡವೊಂದು ಮೈಸೂರಿಗೆ ಭೇಟಿ ಕೊಟ್ಟಿತ್ತು. ಕಾಕತಾಳೀಯವಾಗಿ ಇದೇ ಸಂದರ್ಭದಲ್ಲಿ ರಾಯರ ಮಗಳ ಮದುವೆಯೂ ಏರ್ಪಟ್ಟಿತ್ತು. ರಾಯರು ಆ ಸಂಶೋಧಕರನ್ನೆಲ್ಲ ಮದುವೆಗೆ ಆಹ್ವಾನಿಸಿ, ಮದುವೆಯ ಕಲಾಪಗಳು ನಡೆಯುತ್ತಿರುವಂತೆಯೇ ಮಂತ್ರಗಳ ಅರ್ಥವನ್ನು ಅಲ್ಲಿಂದಲ್ಲೇ ಮನದಾಟ್ಟಾಗುವಂತೆ ವಿವರಿಸಿದರು. ವಿವಾಹ ವಿಧಿಗಳ ಔಚಿತ್ಯವನ್ನು ವಿವರಿಸಿದರು. ರಾಯರ ಸೌಜನ್ಯ, ಆತಿಥ್ಯಗಳಿಂದ ಆ ವಿದೇಶೀಯರ ಮನಸ್ಸು ತುಂಬಿ ಬಂದಿತ್ತು. ರಾಯರಿಗಾಗಿಯೇ ಕಲ್ಕತ್ತಾದಿಂದ ಧಾವಿಸಿ ಬಂದಿದ್ದ ಪ್ರೊ.ಬಿ.ಎಸ್. ಕೇಶವನ್ ''ರಾವ್, ಹುರುಳಿಲ್ಲದ ಸಾಮಾಜಿಕ ನಿಬಂಧನೆಗಳಿಗೆ ಒಳಗಾಗದೆ ಹೊಸ ಮಾದರಿಯನ್ನೇ ಮೆರೆದಿದ್ದೀ... ಭಾರತೀಯ ಸಂಸ್ಕೃತಿಯ ನಿಜವಾದ ಪ್ರತಿನಿಧಿ ನೀನು!'' ಎಂದು ಹೆಮ್ಮೆಪಟ್ಟದ್ದಲ್ಲದೆ ತಮ್ಮ ಪ್ರಿಯಮಿತ್ರ ನನ್ನು ಒಂದು ಸಾರಿ ಅನಾಮತ್ತಾಗಿ ಮೇಲೆತ್ತಿ, ಕೆಳಗಿಳಿಸಿ, ಭೀಮ ಮೈತ್ರಿಯನ್ನು ಪ್ರದರ್ಶಿಸಿದರಂತೆ!

ಮಹಿಳೆಯರ ವಿಷಯವಾಗಿ ರಾಯರಿಗೆ ವಿಶೇಷ ಪ್ರೀತಿ . ಮಹಿಳೆ ಸಮಾನ ಗೌರವಕ್ಕೆ ಅರ್ಹಳು. ಆಕೆಯನ್ನು ಶೋಷಿಸುವುದು ಅನಾಗರಿಕತನ ಎಂದವರು ಹೇಳುತ್ತಿದ್ದರು. ಅವರ ಹಿರಿಯ ಸೊಸೆ (ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸಿನ ತಜ್ಞ ಮುದ್ರಣಗಾರ ಜಿ.ಎಚ್.ರಾಮರಾಯರ ಮಡದಿ) ಮನೆಗೆ ಬಂದಾಗ ಸಣ್ಣ ಹುಡುಗಿ. ಯಾವುದಾದರೂ ವಿಷಯದಲ್ಲಿ ಆಕೆಯ ಅಭಿಪ್ರಾಯ ಹೀಗೆ ಎಂದು ತಿಳಿದ ಕೂಡಲೇ ರಾಯರು ''ಜಯಮ್ಮ ಹಾಗೆ ಹೇಳಿದಳೇ? ಹಾಗಾದರೆ ಅದೇ ಸರಿ. ಹಾಗೇ ಮಾಡಿ'' ಅನ್ನುತ್ತಿದ್ದರಂತೆ. ಮನೆಯ ಹೆಣ್ಣುಮಕ್ಕಳನ್ನೂ ಸೊಸೆಯರನ್ನೂ ಒಂದೇ ರೀತಿಯಲ್ಲಿ ಕಂಡವರು.

ಹೆಣ್ಣುಮಕ್ಕಳು ಸಣ್ಣವರಾಗಿದ್ದಾಗ ಮನೆಗೆ ಬರುತ್ತಿದ್ದ ತಂದೆಯ ಸಾಹಿತಿ ಮಿತ್ರರತ್ತ ಇಣುಕಲು ಕಾತುರ. ಊಟಕ್ಕೆ ಕೂತಾಗ ಬಡಿಸಲು ನಾ ಮುಂದು ತಾ ಮುಂದು ಎಂದು ಓಡೋಡಿ ಬರುತ್ತಿದ್ದರು. ಅಲ್ಲಿಯೂ ರಾಯರದು ಕಟ್ಟುನಿಟ್ಟು. ''ಎಲ್ಲರೂ ಓರಣವಾಗಿ ತಲೆ ಬಾಚಿಕೊಂಡಿರಬೇಕು.. ಇಸ್ತ್ರಿಹಾಕಿ ಶುಭ್ರವಾಗಿರುವ ಬಟ್ಟೆಗಳನ್ನೇ ಉಟ್ಟಿರಬೇಕು''.

ಸಂಗೀತ ನೃತ್ಯ ಮುಂತಾದ ಲಲಿತ ಕಲೆಗಳ ವಿಷಯವಾಗಿ ರಾಯರಿಗೆ ಅಪಾರ ಆಸಕ್ತಿ. ತಮ್ಮ ಸಂಕೀರ್ಣ ದಿನಚರಿಯ ನಡುವೆಯೇ ಇದಕ್ಕೂ ಅವಕಾಶ ಕಲ್ಪಿಸಿಕೊಂಡಿದ್ದರು. ಒಂದು ಸಾರಿ ಮೈಸೂರಿನಲ್ಲಿ ಜಾನ್ ಬಿ.ಹಿಗ್ಗಿನ್ಸ್ ಅವರ ಗಾಯನ ಕಛೇರಿ ಏರ್ಪಾಡಾಗಿತ್ತು. ಅವರ ಹಾಡುಗಾರಿಕೆಯಿಂದ ಪ್ರಭಾವಿತರಾದ ರಾಯರು ಅವರು ಉಳಿದುಕೊಂಡಿದ್ದ ಹೋಟೆಲಿಗೆ ಹೋಗಿ ಅವರನ್ನು ಭೇಟಿ ಮಾಡಿದರು. ಮಾತಿನ ನಡುವೆ ಸಂಗೀತ ಶಾಸ್ತ್ರದ (Musicology) ಬಗ್ಗೆ ನಿಮಗೆಷ್ಟು ಗೊತ್ತು ಎಂದು ಪ್ರಶ್ನಿಸಿದರು. ತಮಗೆ ಆ ಬಗ್ಗೆ ಅಷ್ಟಾಗಿ ತಿಳಿಯದು ಅಂದರು ಹಿಗ್ಗಿನ್ಸ್. ರಾಯರು ತಮಗೆ ತಿಳಿದಷ್ಟನ್ನು ಕೂಲಂಕಷವಾಗಿ ವಿವರಿಸಿ, ಮೈಸೂರಿನ ಕೆಲವು ನುರಿತ ಸಂಗೀತಜ್ಞರ ಹೆಸರನ್ನು ಶಿಫಾರಸು ಮಾಡಿ ಅವರಿಂದ ಹೆಚ್ಚಿನ ವಿಚಾರ ತಿಳಿಯಬಹುದೆಂದು ಸಲಹೆ ಕೊಟ್ಟರು. ಹಿಗ್ಗಿನ್ಸ್‌ಗೆ ಆಶ್ಚರ್ಯ ಮತ್ತು ಸಂತೋಷ. ಇದುವರೆಗೂ ಯಾರೂ ಈ ರೀತಿಯ ಸಲಹೆಯನ್ನು ಕೊಟ್ಟಿರಲಿಲ್ಲವಲ್ಲ ಎಂದಾತ ಹಿಗ್ಗಿದರಂತೆ.

ರಾಯರ ಆಪ್ತ ಬಳಗದಲ್ಲಿ ಪುತಿನ ಒಬ್ಬರು. ಅವರ 'ಹರಿಣಾಭಿಸರಣ' ನೃತ್ಯ ರೂಪಕವಾಗಿ ಟೌನ್ ಹಾಲಿನಲ್ಲಿ ಪ್ರದರ್ಶಿತವಾಯಿತು. ಈ ಸಂದರ್ಭದಲ್ಲಿ ಪುತಿನ ಅನೇಕ ಸಾರಿ ಹನುಮಂತರಾಯರ ಮನೆಗೆ ಬಂದು ಅವರೊಡನೆ ಚರ್ಚಿಸಿ ಸಲಹೆ-ಸೂಚನೆ ಪಡೆದುಕೊಂಡಿದ್ದರು.

ರಾಯರಿಗೆ ಲಹರಿ ಬಂದಾಗ ಮನೆ ಮಕ್ಕಳನ್ನು ಕೂರಿಸಿಕೊಂಡು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದುದೂ ಉಂಟು-''ಸುಖವಾಗಲೀ ದುಃಖವಾಗಲೀ ನಮ್ಮನ್ನು ಮುತ್ತಿದಾಗ ನಾವು ಅದರಲ್ಲೇ ಮುಳುಗಿ ಬಿಡಬಾರದು. ಮನೋನಿಗ್ರಹದ ಪಾಠಗಳನ್ನು ನಾನು ಭಗವದ್ಗೀತೆಯಿಂದ ಕಲಿತು ಸಾಧಿಸಲು ಪ್ರಯತ್ನಿಸುತ್ತಿದ್ದೇನೆ. ಯಾಕೆಂದರೆ ಗೀತೆಯಲ್ಲಿ ಚೈತನ್ಯವಿದೆ, ಆನಂದವಿದೆ. ಒಂದು ರೀತಿಯಲ್ಲಿ ಅದೇ ಮನುಷ್ಯರ ಜೀವನಾಧಾರ. ನಮ್ಮ ಅಂತರಾಳದಲ್ಲಿ ನಿಷ್ಕಲ್ಮಷ ಪ್ರೀತಿ ಇದ್ದಲ್ಲಿ ಯಾರನ್ನು ಬೇಕಾದರೂ ಗೆಲ್ಲಬಹುದು.''

ದಾನಗಳನ್ನು ಕೊಡುವ ಬಗ್ಗೆ ಕೂಡ ರಾಯರ ನಿಲುವು ವಿಶಿಷ್ಟವಾಗಿತ್ತು ''ಸತ್ತಮೇಲೆ ಆತನ ಹೆಸರಿನಲ್ಲಿ ದಾನ ಕೊಡುವ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ಇದರಿಂದ ಕೆಲವರ ಜೀವನಕ್ಕೆ ಸ್ವಲ್ಪ ಕಾಲವಾದರೂ ಸಹಾಯವಾಗುತ್ತದೆ. ಆದರೆ ಮನುಷ್ಯನೊಬ್ಬ ತಾನು ಬದುಕಿರುವಾಗಲೇ ತನ್ನ ಯೋಗ್ಯತಾನುಸಾರವಾಗಿ ಹಣದ ಕೊರತೆಯಿರುವವರಿಗೆ ಅವರಿಗೆ ಅಗತ್ಯವಿರುವಂಥ ವಸ್ತುಗಳನ್ನು ಕೊಟ್ಟರೆ ಅದು ಸಾರ್ಥಕವಾಗುತ್ತದೆ.'' ಒಂದು ಸಾರಿ ಮರದ ಕೆಳಗೆ

ಕೂತು ಮಳೆಯಲ್ಲಿ ನೆನೆಯುತ್ತಾ ಚಪ್ಪಲಿ ಹೊಲಿಯುವ ಮೋಚಿಯನ್ನು ಕಂಡು ಕರುಳು ಕರಗಿದ ರಾಯರು ಸದ್ದಿಲ್ಲದೆ ಪೇಟೆಗೆ ಹೋಗಿ ಕೊಡೆಯನ್ನು ಕೊಂಡು ತಂದು ಆತನಿಗೆ ಕೊಟ್ಟು ಸಂತುಷ್ಟರಾದರಂತೆ!

ಮಾವಿನ ಹಣ್ಣಿನ ಕಾಲ ಬಂತೆಂದರೆ ರಾಯರಿಗೆ ಸಡಗರ. ತಮ್ಮ ತೋಟದಲ್ಲಿ ತಮ್ಮದೇ ಅಕ್ಕರೆಯ ಉಸ್ತುವಾರಿಯಲ್ಲಿ ಚೆನ್ನಾಗಿ ಬೆಳೆದ ಹಣ್ಣುಗಳನ್ನು ಆರಿಸಿತಂದು ಮಾಗ ಹಾಕುತ್ತಿದ್ದರು. ಅವು ಹದವಾಗಿ ಕಳಿತ ಮೇಲೆ ರಾತ್ರಿಯೂಟದ ಬಳಿಕ ತಾವೇ ಶ್ರದ್ಧೆಯಿಂದ ಕೂತು ಓರಣವಾಗಿ ಹೆಚ್ಚಿ ರಾಶಿ ರಾಶಿ ಹೋಳು ಗಳನ್ನು ತಟ್ಟೆಯಲ್ಲಿ ಪೇರಿಸಿ ಇಡುವರು. ಮನೆಮಂದಿಗೆಲ್ಲ ಇದರ ಹಂಚಿಕೆ. ಹಣ್ಣಿನ ರುಚಿ ರಂಗು ಅವರೆಲ್ಲರ ಮುಖದ ಮೇಲೆ ಮೂಡುತ್ತಿದ್ದರೆ ಈ ಅಜ್ಜನಿಗೆ ಸಾರ್ಥಕತೆ! ಇಷ್ಟಾಗ ತಾವು ಬಾಯಿಗೆ ಹಾಕಿಕೊಳ್ಳುತ್ತಿದ್ದುದು. ಒಂದೋ ಎರಡೋ ಹೋಳುಗಳಷ್ಟೇ!

ಬಟ್ಟೆ ತೊಡುವ ವಿಷಯದಲ್ಲಿ ಚಿಕ್ಕಂದಿ ನಿಂದಲೂ ಬಹಳ ಅಚ್ಚುಕಟ್ಟು. ಶಾಲೆಗೆ ಹೋಗುತ್ತಿದ್ದ ಕಾಲದಲ್ಲಿ ರಾತ್ರಿಯೇ ಬಟ್ಟೆ ಗಳನ್ನು ಓರಣವಾದ ಮಡಿಕೆಗಳಲ್ಲಿ ಮಡಿಸಿ, ತಲೆದಿಂಬಿನ ಕೆಳಗಿಟ್ಟು ಮರುದಿನ ಶಿಸ್ತಾಗಿ ಧರಿಸಿ ಹೊರ ಬೀಳುತ್ತಿದ್ದರಂತೆ. ವಿಶ್ವವಿದ್ಯಾ ನಿಲಯ ದಲ್ಲಿ ಸೇವೆಗೆ ನಿಂತ ಮೇಲೆ ಅವರು ಸೂಟುಗಳನ್ನು ಹೊಲಿಸುತ್ತಿದ್ದುದು ಕಮರ್ಶಿಯಲ್ ಸ್ಟ್ರೀಟಿನಲ್ಲಿ ಬ್ರಿಟಿಷ್ ಅಧಿಕಾರಿಗಳು ಹೊಲಿಸು ತ್ತಿದ್ದ ಪ್ರಸಿದ್ಧ ಟೇಲರುಗಳ ಹತ್ತಿರ! ನವರಾತ್ರಿ ಸಂದರ್ಭದಲ್ಲಿ ಮಹಾರಾಜರಿಗೆ ಮರ್ಯಾದೆ ಸಲ್ಲಿಸಲು ಹೋಗುವಾಗ ಅವರ ಗೆಳೆಯರೆಲ್ಲ ದರ್ಬಾರ್ ಡ್ರೆಸ್ಸನ್ನು ಬಾಡಿಗೆಗೆ ತೆಗೆದು ಕೊಂಡರೆ ಅದೆಲ್ಲ ರಗಳೆಯೇ ಬೇಡವೆಂದು ರಾಯರು ಲಕ್ಷಣವಾಗಿ ಎರಡು ಸೆಟ್ ಡ್ರೆಸ್ಸನ್ನು ಸ್ವಂತಕ್ಕೇ ತಮಗ ಬೇಕಾದ ನಮೂನೆಗಳಲ್ಲಿ ಹೊಲಿಸಿಟ್ಟು ಬಿಟ್ಟಿದ್ದರು.

ಓದು-ಬರಹಗಳ ವಿಷಯದಲ್ಲಂತೂ ಸುಗ್ರೀವ ನಿಯಮ. ಅಂದು ಕೊಂಡಷ್ಟನ್ನು ಬರೆದು ಮುಗಿಸದೆ ಮಲಗಲು ಹೋಗುತ್ತಿರ ಲಿಲ್ಲ. ತೀರಿ ಹೋಗುವ ದಿನ (೨೨.೧೨.೧೯೭೪) ಕೂಡ ಅಂದಿನ ಭಾಗವನ್ನು ಬರೆದು ಮುಗಿಸಿ ಊಟಕ್ಕೆ ಮುನ್ನ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳು ತ್ತೇನೆಂದು ಮಲಗಿದರು. ಮತ್ತೆ ಮೇಲೇಳಲೇ ಇಲ್ಲ!

ರಾಯರ ಬಹುಮುಖ ಪ್ರತಿಭೆಯ ಬಗ್ಗೆ ''ಹನುಮಂತರಾಯರು ಶ್ರೀವಿಷ್ಣುವಿಗಿಂತ ಒಂದು ಹೆಜ್ಜೆ ಮುಂದೆ. ಒಂದೇ ಜನ್ಮದಲ್ಲಿ ಅನೇಕ ಸಾರ್ಥಕ ಅವತಾರಗಳನ್ನು ಎತ್ತಿ ಬಿಟ್ಟಿದ್ದಾರೆ'' ಎಂದು ಎ. ಎನ್. ಮೂರ್ತಿ ರಾಯರು ಪ್ರಶಂಸಿಸಿದರೆ ಪ್ರೊ. ಸಿ. ಡಿ. ನರಸಿಂಹಯ್ಯನವರು ''ಅವರೊಂದು ಚಿನ್ನದ ಗನಿ'' ಎಂದು ಅವರನ್ನು ಬಣ್ಣಿಸಿದರು.

ಹನುಮಂತರಾಯರ ಸೇವೆ-ಸಾಧನೆ ಗಳನ್ನು ಸ್ಮರಿಸುವಂತೆ ಮಾನಸಗಂಗೋತ್ರಿಯ ಪ್ರಸಾರಾಂಗದ ಪ್ರವೇಶದ್ವಾರದಲ್ಲಿ ಅವರ ಒಂದು ಭಾವಚಿತ್ರವನ್ನು ಸ್ಥಾಪಿಸಿರುವುದು ಅಪ್ಯಾಯಮಾನವಾದ ಸಂಗತಿ.

ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯುನಿನಗಲ್ಪತೆಯೊ ಮಂಕುತಿಮ್ಮ

ಹೀಗಿದ್ದರು ನಮ್ಮ ಹನುಮಂತರಾಯರು

ಶ್ರೀ ಜಿ. ಹನುಮಂತರಾಯರು 'ಪುಸ್ತಕಪ್ರಪಂಚ'ದ ಪ್ರಧಾನ ಸಂಪಾದಕರಾಗಿದ್ದಾಗ, ಸಂಪಾದಕನಾಗಿ ಅವರ ಮಾರ್ಗದರ್ಶನದಲ್ಲಿ ಕೆಲವು ವರುಷ ಕೆಲಸ ಮಾಡುವ ಸದವಕಾಶ ನನಗೆ ಒದಗಿತ್ತು. ಅವರು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕರಾಗಿದ್ದರು. ಗ್ರಂಥಾಲಯದ ಕೆಲಸ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚೆಯೇ ಅವರು ತಮ್ಮ ಸ್ಥಾನದಲ್ಲಿರುತ್ತಿದ್ದರು. ದಿನವೂ ಬೆಳಗ್ಗೆ ಒಂಬತ್ತು ಗಂಟೆಗೆ ನಾನು ಅಲ್ಲಿಗೆ ಹೋಗಬೇಕಾಗಿತ್ತು. ಅಷ್ಟು ಹೊತ್ತಿಗೆ ಅವರು ಅಂದು ಬಂದಿದ್ದ ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು-ಮುಂತಾದವುಗಳನ್ನೆಲ್ಲ ತಿರುವು ಹಾಕಿ, ಅನುವಾದ ಮಾಡಿ 'ಪುಸ್ತಕ ಪ್ರಪಂಚ'ದಲ್ಲಿ ಹಾಕಬಹುದಾದ ಲೇಖನಗಳನ್ನೆಲ್ಲ ಗುರುತು ಮಾಡಿ ಒಂದು ಟ್ರೇನಲ್ಲಿ ಹಾಕಿಡುತ್ತಿದ್ದರು. ಅವುಗಳನ್ನೆಲ್ಲ ಆರಿಸಿಕೊಂಡು ಅನುವಾದ ಮಾಡಿಸುವ ಮತ್ತು ಅನುವಾದಗಳಿಗೆ ಅನುಮತಿ ತರಿಸುವ ಕೆಲಸ ನನ್ನದಾಗಿತ್ತು. ಆಗ 'ಪುಸ್ತಕಪ್ರಪಂಚ' ಮೈಸೂರಿನ ವೆಸ್ಲಿಪ್ರೆಸ್‌ನಲ್ಲಿ ಅಚ್ಚಾಗುತ್ತಿತ್ತು. ಆ ಪ್ರೆಸ್ಸಿನವರು ಪತ್ರಿಕೆಯ ಪೂರ್ತಿ ಅರವತ್ತುನಾಲ್ಕು ಪುಟಗಳನ್ನು ದ್ವಿಪ್ರತಿಯಲ್ಲಿ ಕರಡು ತಿದ್ದಲು ಕೊಡುತ್ತಿದ್ದರು. ಒಂದು ಪ್ರತಿಯಲ್ಲಿ ನಾನೂ, ಇನ್ನೊಂದು ಪ್ರತಿಯಲ್ಲಿ ಹನುಮಂತರಾಯರೂ ತಿದ್ದಿದ ಮೇಲೆ ಆ ತಿದ್ದುಪಡಿಗಳನ್ನೆಲ್ಲ ಒಂದರಲ್ಲಿ ಅಳವಡಿಸಿ ಅಚ್ಚಿಗೆ ಕೊಡುವ ಕೆಲಸ ನನ್ನದಾಗಿತ್ತು. ಒಬ್ಬ ಗುರುವಿನ ಬಳಿ ಪಾಠ ಕಲಿತರೆ ಎಷ್ಟು ಲಾಭವೋ ಅಷ್ಟು, ಅವರ ಬಳಿ ಕೆಲಸ ಮಾಡುವಾಗ ನನಗಾಯಿತು.

ಹನುಮಂತನ ಮಗ ಶ್ರೀರಾಮ!

ಹಿಂದೆ ಸಂಸ್ಕೃತ ಪ್ರಾಧ್ಯಾಪಕರೊಬ್ಬರಿದ್ದರು. ಅವರ ಮನೆಗೆ, ಅವರ ಮಗನ ಜೊತೆಯಲ್ಲಿ ಒಬ್ಬ ಹುಡುಗ ಹೋದ. ಅಲ್ಲಿ ಇದ್ದ ಒಬ್ಬ ಹಿರಿಯರು '' ಈ ಹುಡುಗ ಯಾರು '' ಎಂದು ಕೇಳಿದಾಗ ಹಾಸ್ಯಪ್ರವೃತ್ತಿಯ ಆ ಪ್ರಾಧ್ಯಾಪಕರು ''ರಾಮಾಯಣ ಯುದ್ಧ ಮುಗಿದ ಮೇಲೆ ಆಂಜನೇಯನ ಸೇವೆಯನ್ನು ಮೆಚ್ಚಿಕೊಂಡ ಶ್ರೀರಾಮ 'ನಿನಗೇನು ಬೇಕು, ಕೇಳು' ಎಂದ. ಹನುಮಂತ 'ನಾನೇನಾದರೂ ಮುಂದಿನ ಜನ್ಮದಲ್ಲಿ ಸಂಸಾರಿಯಾದರೆ ನನಗೆ ನೀನೇ ಮಗನಾಗಿ ಜನಿಸಬೇಕು' ಎಂದು ಕೇಳಿದ. ಆ ಹನುಮಂತರಾಯರ ಮಗನೇ ಈ ಜಿ.ಹೆಚ್.ರಾಮರಾವ್'' ಎಂದರು.

ದಿವಂಗತ ರಾಮರಾಯರು ಮೈಸೂರು ನಗರದಲ್ಲಿ ದೊಡ್ಡ ಮುದ್ರಣಾಲಯವನ್ನು ಸ್ಥಾಪಿಸಿ ಅಚ್ಚುಕಟ್ಟಾದ ಮುದ್ರಣಕ್ಕೆ ಪ್ರಸಿದ್ಧರಾಗಿದ್ದರು.

ರಾವೆಂಶ್ರೀ

ಸರ್ ಡಾನ್ ಬ್ರಾಡ್‌ಮನ್‌ರಿಗೆ ವಿದಾಯ

ಪ್ರೊ. ಸಿ. ನಾಗಣ್ಣ
ನಂ. ೩೧೯೫, ೨೧/ಸಿ. ಮೆಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

ಯಾವುದೇ ಅಭಿವ್ಯಕ್ತಿ ಮಾಧ್ಯಮಕ್ಕೆ ಕಲೆಯ ಜೀವಂತಿಕೆ ಸ್ಪರ್ಶವಾಗುವುದು ಅದರಲ್ಲೊಂದು ಯುಗ ಪ್ರತಿಭೆ ಅರಳಿ ಬೆಳಗುವುದರಿಂದ. ಇಂಗ್ಲಿಷ್ ಭಾಷೆ ಮತ್ತು ಶೇಕ್‌ಸ್ಪಿಯರ್ ಪ್ರತಿಭೆ ಒಂದು ನಿದರ್ಶನ. ಇಲ್ಲಿ ಮಾಧ್ಯಮದಿಂದ ಪ್ರತಿಭೆ ಜನಿಸಿತೋ ಪ್ರತಿಭೆಯಿಂದ ಮಾಧ್ಯಮ ವಿಕಸಿಸಿತೋ ಈ ದ್ವಂದ್ವಕ್ಕೆ ಎಂದೂ ಪರಿಹಾರವಿಲ್ಲ. ಕ್ರಿಕೆಟ್-ಬ್ರಾಡ್‌ಮನ್ ಯುಗ ಕುರಿತು ಕೂಡ ಇದೇ ರೂಪಕವನ್ನು ಉಲ್ಲೇಖಿಸಬಹುದು ಎಂದೇ ''ನೀ ಕ್ರಿಕೆಟನೊಳಗೋ ನಿನ್ನೊಳು ಕ್ರಿಕೆಟೋ ಕ್ರಿಕೆಟು ನೀನೂ ಎರಡು ಪ್ರೇಕ್ಷಕರ ಮನದೊಳಗೋ!'' ಅವರು **broad-man** ಮಾತ್ರವಲ್ಲ **broad-heart** ಕೂಡ ಆಗಿದ್ದರು!

ದಿನಾಂಕ : ೨೬.೨.೨೦೦೧ರ ಭಾನುವಾರ ನಿದ್ದೆಯಲ್ಲಿದ್ದ ಸರ್ ಡಾನ್ ಬ್ರಾಡ್‌ಮನ್ನರು ಇಹಲೋಕ ತ್ಯಜಿಸಿದರು. ಸರ್ ಡೊನಾಲ್ಡ್ ಬ್ರಾಡ್‌ಮನ್ನರ ನಿರ್ಗಮನದಿಂದ ಕ್ರಿಕೆಟ್ ಜಗತ್ತಿನಲ್ಲಿ ತುಂಬಲಾಗದ ನಿರ್ವಾತ ಉಂಟಾಗಿದೆ. ಈ ಶೂನ್ಯವನ್ನು ಯಾರೂ ತುಂಬಲಾರರು. ಇನ್ನೊಬ್ಬ ಸರ್ ಡಾನ್ ಹುಟ್ಟಲಾಗುವುದಿಲ್ಲ. ಅವರ ಅದ್ಭುತವಾದ ಸಾಧನೆ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟಿದೆ. ಕಾಲ ಕಳೆದಂತೆಲ್ಲ ಅವರ ಬದುಕನ್ನು ಕುರಿತ ಐತಿಹ್ಯ ಬೆಳೆಯುತ್ತಾ ಹೋಗುವುದು ಖಂಡಿತ.

ಕ್ರಿಕೆಟ್ ಕ್ರೀಡೆಯನ್ನು ಬಹು ವಿನ್ಯಾಸದಲ್ಲಿ ಸುಂದರಗೊಳಿಸಿದಂಥ ಅಪ್ರತಿಮ ಕ್ರೀಡಾಪಟು ಆತ. ತನಗೇ ಸಸಿನವೆನ್ನಿಸುವ ಸರಾಗದಲ್ಲಿ ರನ್ನುಗಳ ಮಳೆಗರೆದ ಬ್ರಾಡ್‌ಮನ್ ಶ್ರೇಷ್ಠಮಟ್ಟದ ಆಡಳಿತಗಾರರೂ, ಆಯ್ಕೆಗಾರರೂ ಆಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ವಿನಯ, ವಿನಮ್ರತೆಯೇ ಮೈವೆತ್ತ ಮನುಷ್ಯನಾಗಿದ್ದರು ಬ್ರಾಡ್‌ಮನ್. ನೊಂದವರು ಹಾಗೂ ತುಳಿತಕ್ಕೊಳಗಾದವರ ಕ್ಷೇಮಾಭಿವೃದ್ಧಿಗಾಗಿ ದುಡಿಯುವ ಅನೇಕ ಸಂಘಸಂಸ್ಥೆಗಳಿಗೆ ಸಹಾಯ ಹಸ್ತ ನೀಡಿದ್ದರು. ಕ್ರೀಡಾಪಟುಗಳು ಅವರನ್ನು ಯಾವಾಗಲೂ ಭೇಟಿ ಮಾಡಬಹುದಾಗಿತ್ತು.

ಗ್ರಾಮಾಂತರ ನ್ಯೂ ಸೌತ್‌ವೇಲ್ಸ್‌ನ ಕೂಟಮುಂಡ್ರ ಎಂಬ ಊರಿನಲ್ಲಿ ಬ್ರಾಡ್‌ಮನ್ ೧೯೦೮ನೇ ಇಸವಿ ಆಗಸ್ಟ್ ೨೭ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ಅವರು ಸಿಡ್ನಿ ನಗರಕ್ಕೆ ನೈರುತ್ಯ ದಿಕ್ಕಿನಲ್ಲಿ ೮೦ ಕಿಮೀ ದೂರದಲ್ಲಿರುವ ಬೌವ್‌ರಾಲ್ ಎಂಬ ಊರಿಗೆ ಸ್ಥಳಾಂತರಿಸಿದರು. ತಮ್ಮ ವಯಸ್ಕ ಜೀವನದ ಬಹುಭಾಗವನ್ನು ತಮ್ಮ ಪತ್ನಿ ಜೆಸ್ಸಿಯ ಜೊತೆ ಅಡಿಲೈಡ್ ನಗರದಲ್ಲಿ ಕಳೆದಿದ್ದರಾದರೂ ಅವರ ಮನಸ್ಸು ಮಾತ್ರ ಬೌವ್‌ರಾಲ್‌ನಲ್ಲಿ ನೆಲೆಗೊಂಡಿತ್ತು. ಮುಂದೆ ಸತಿಪತಿಗಳಾದ ಬ್ರಾಡ್‌ಮನ್ ಮತ್ತು ಜೆಸ್ಸಿ ಬಾಲ್ಯದಲ್ಲಿ ಭೇಟಿಯಾದದ್ದು ಈ ಊರಿನಲ್ಲೇ. ೬೫ ವರ್ಷಗಳ ದೀರ್ಘ ದಾಂಪತ್ಯ ಕೊನೆಗೊಂಡದ್ದು ೧೯೯೭ರ ಸೆಪ್ಟೆಂಬರ್ ತಿಂಗಳಿನಲ್ಲಿ ಜೆಸ್ಸಿ ತಮ್ಮ ೮೮ನೇ ವಯಸ್ಸಿನಲ್ಲಿ ಕ್ಯಾನ್ಸರ್‌ನಿಂದ ನಿಧನರಾದಾಗ.

ಸರ್ ಡಾನ್ ಬ್ರಾಡ್‌ಮನ್‌ರ ಸಾಧನೆಯ ನೆನಪನ್ನು ಸ್ಥಿರಗೊಳಿಸುವ ಸಲುವಾಗಿ ಆ ಪಟ್ಟಣದ ಸಾಮಾಜಿಕರು ೧೯೮೯ರಲ್ಲಿ ಒಂದು ವಸ್ತು ಸಂಗ್ರಹಾಲಯುವನ್ನು ಸ್ಥಾಪಿಸಿದರು. ತಮ್ಮ ಕ್ರೀಡಾ ಕಾಲದಲ್ಲಿ ಬ್ರಾಡ್‌ಮನ್ ಆರು

* ಹಲವು ಮೂಲಗಳಿಂದ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆ

ಬಾರಿ ೩೦೦ಕ್ಕಿಂತ ಹೆಚ್ಚು ರನ್ ಗಳಿಸಿದರು ಹಾಗೂ ಸತತವಾಗಿ ಆರು ಇನ್ನಿಂಗ್ಸ್‌ಗಳಲ್ಲಿ ಶತಕವನ್ನು ಬಾರಿಸಿದರು. ೧೯೨೯ರಲ್ಲಿ ನ್ಯೂ ಸೌತ್‌ವೇಲ್ಸ್ ತಂಡದಿಂದ ಆಡಿದ್ದ ಡಾನ್ ಕ್ವೀನ್ಸ್‌ಲ್ಯಾಂಡ್ ವಿರುದ್ಧ ಆಗ ವಿಶ್ವದಾಖಲೆಯಾಗಿದ್ದ ೪೫೨ ರನ್‌ಗಳನ್ನು ಗಳಿಸಿದರು. ೧೧೭ ಪ್ರಥಮ ದರ್ಜೆ ಶತಕಗಳನ್ನು ಬಾರಿಸಿರುವುದೂ ಕೂಡ ಆಸ್ಟ್ರೇಲಿಯಾದ ದಾಖಲೆಯಾಗಿದೆ.

ಪ್ರತೀ ಬಾರಿ ಬ್ಯಾಟ್ ಮಾಡಲು ಹೋದಾಗಲೂ ಬ್ರಾಡ್‌ಮನ್ ಶ್ರೇಷ್ಠ ಗುಣಮಟ್ಟವನ್ನು ಕಣ್ಣ ಮುಂದಿರಿಸಿಕೊಂಡಿದ್ದರು. ರನ್ ಗಳಿಸುವುದರಲ್ಲಿ ಬ್ರಾಡ್‌ಮನ್‌ಗಿದ್ದ ದಾಹ ಆಶ್ಚರ್ಯಕರವಾದದ್ದು. ತಮ್ಮ ಕ್ರಿಕೆಟ್ ಜೀವನವನ್ನು ಅವರು ಸರಾಸರಿ ೯೯.೯೪ ರನ್ನುಗಳನ್ನು ಗಳಿಸಿ ಮುಕ್ತಾಯ ಮಾಡಿದುದು ಒಂದು ರೋಮಾಂಚಕಾರಿ ಕಥೆ. ಬ್ರಾಡ್‌ಮನ್‌ರ ಕೌಶಲ, ಧೋರಣೆ ಮತ್ತು ಬದ್ಧತೆಗೆ ಈ ಸರಾಸರಿಯೇ ಸಾಕ್ಷಿಯಾಗಿದೆ.

ಬ್ರಾಡ್‌ಮನ್ ಗೆರೆಯಲ್ಲಿರುವಾಗ ಎಲ್ಲಾ ಚೆಂಡನ್ನು ಪುಟಿಸಬೇಕೆಂದು ತಿಳಿಯದೆ ಬೌಲರುಗಳು ಕಂಗಾಲಾಗುತ್ತಿದ್ದರೆಂದು ಹೇಳುತ್ತಾರೆ. ಆ ರೀತಿ ಬ್ರಾಡ್‌ಮನ್ ರನ್ ವೃಷ್ಟಿ ಕರೆಯುವುದನ್ನು ತಡೆಯುವ ಸಲುವಾಗಿಯೇ ಇಂಗ್ಲೆಂಡಿನ ಡಗ್ಲಸ್ ಜಾರ್ಡಿನ್ ವಿವಾದಾತ್ಮಕವಾದ ''ಬಾಡಿಲೈನ್ ಸರಣಿ''(೧೯೩೨) ಯನ್ನು ಆಡಿದರು ಎನ್ನಲಾಗಿದೆ. ಆ ತಂಡದಲ್ಲಿದ್ದ ಅತ್ಯಂತ ವೇಗದ ಬೌಲರುಗಳಾದ ಹೆರಲ್ಡ್ ಲಾರ್‌ವುಡ್ ಮತ್ತು ಬಿಲ್ ವೋಸ್‌ರಿಗೆ ತಂಡದ ನಾಯಕ ಜಾರ್ಡಿನ್ ಹೇಳಿದ್ದೆಂದರೆ ಬೌಲ್ ಮಾಡಿದರೆ ಚೆಂಡು ಪುಟಿದು ವಿಕೆಟ್ ಕಡೆಗೆ ಹಾರುವುದಕ್ಕೆ ಬದಲಾಗಿ ಬ್ಯಾಟ್ಸ್‌ಮನ್‌ನ ಶರೀರದ ಮೇಲೆ ಎರಗಬೇಕು ಎಂದು. ಬ್ರಾಡ್‌ಮನ್ ತಮ್ಮ ೧೯ನೇ ವಯಸ್ಸಿನಲ್ಲಿ ಟೆಸ್ಟ್ ಶತಕ ಗಳಿಸಿ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ವಯಸ್ಸಿನ ಕ್ರಿಕೆಟ್ ಪಟು ಎಂಬ ಹಿರಿಮೆಗೆ ಪಾತ್ರರಾದರು. ೧೯೩೦ರಲ್ಲಿ ಇಂಗ್ಲೆಂಡಿನ ಮೊದಲ ಪ್ರವಾಸ ಮಾಡಿ ೯೭೪ ರನ್ನುಗಳನ್ನು ಬಾರಿ ಸರಾಸರಿ ೧೩೯ ರನ್ನುಗಳಿಸಿದರು. ಆ ಸರಣಿಯ ಪ್ರಮುಖ ಅಂಶವೆಂದರೆ ಹೆಡಿಂಗ್ಲೀ ಟೆಸ್ಟ್‌ನಲ್ಲಿ ಅವರು ೩೩೪ ರನ್ನುಗಳನ್ನು ಗಳಿಸಿದ್ದು; ಆ ಕಾಲಕ್ಕೆ ಅದು ಒಂದು ಇನ್ನಿಂಗ್ಸ್‌ನಲ್ಲಿ ಒಬ್ಬ ಕ್ರಿಕೆಟ್ಟಿಗನ ಅತ್ಯಂತ ಹೆಚ್ಚು ರನ್ನುಗಳಾಗಿತ್ತು. ಕೇವಲ ೫೨ ಟೆಸ್ಟ್‌ಗಳಲ್ಲಿ ೬೯೯೬ ರನ್ನುಗಳನ್ನು ಗಳಿಸಿದ ಬ್ರಾಡ್‌ಮನ್‌ರ ಸರಾಸರಿ ೯೯.೯೪ ರನ್ನುಗಳು. ಲೋಕ ಅಚ್ಚರಿಪಡುವ ಒಂದು ಅವಕಾಶ ತಪ್ಪಿದ್ದು ಕಡೆಯ ಟೆಸ್ಟ್‌ನಲ್ಲಿ ಅವರು ಕೇವಲ ನಾಲ್ಕು ಗಳಿಸಲಾಗದೆ ಸೊನ್ನೆಗೆ ಔಟಾದದ್ದರಿಂದ ಆ ನಾಲ್ಕು ರನ್ನುಗಳನ್ನು ಅವರು ಗಳಿಸುತ್ತಾರೆಂದು ಆ ಅಪೂರ್ವವಾದ ಸನ್ನಿವೇಶ ವನ್ನು ಕಣ್ಣಾರೆ ಕಾಣಲು ಲಂಡನ್‌ನ ಓವಲ್ ಮೈದಾನದಲ್ಲಿ ಕೀಡಾಭಿಮಾನಿಗಳು ಕಿಕ್ಕಿರಿದು ತುಂಬಿದ್ದರು. ೧೯೪೮ರ ಆ ದಿನ ಬ್ರಾಡ್‌ಮನ್‌ರಿಗೆ ಸುದಿನವಾಗಿದೆ. ಆ ನಾಲ್ಕು ರನ್ನುಗಳು ಸಿಕ್ಕಿದ್ದ ಪಕ್ಷದಲ್ಲಿ ಬ್ರಾಡ್‌ಮನ್‌ರ ಸರಾಸರಿ ೧೦೦ ಆಗುತ್ತಿತ್ತು. ''ಓಂಕಾರದ ನಾದಕ್ಕಿಂತ ಕಿಂಚಿದೂನ'' ಎಂಬಂತಾಯಿತು. ಪುತ್ಥಳಿ ಪರಿಪೂರ್ಣವಾದರೆ ದೇವತೆಗಳು ಮುನಿದಾರೆಂದು ಶಿಲ್ಪಿ ಬೇಕಂತಲೇ ಅದನ್ನು ಕೊಂಚ ಕಡಿಮೆ ಮಾಡುತ್ತಿದ್ದುದು ವಾಡಿಕೆ. ಬ್ರಾಡ್‌ಮನ್‌ರನ್ನು ಸೃಷ್ಟಿಸಿದ ಬ್ರಹ್ಮ ಅವರಾಡಿದ ಕಡೆಯ ಟೆಸ್ಟ್‌ನಲ್ಲಿ ಅವರಿಗೆ ನಾಲ್ಕು ರನ್ನು

ಕೂಡಲಿಲ್ಲ. ಮನುಷ್ಯ ಪ್ರಯತ್ನದ ಮಿತಿಗೆ ಒಂದು ಶಾಶ್ವತ ರೂಪಕದಂತೆ ಬ್ರಾಡ್‌ಮನ್‌ರ ಸರಾಸರಿ ರನ್ನುಗಳು ೯೯.೯೪ಕ್ಕೆ ನಿಂತು ಕೊಂಡಿತು.

ಬ್ರಾಡ್‌ಮನ್ ಕಡೆಯವರೆಗೂ ತಮ್ಮ ಗೃಹ ಕಛೇರಿಯಿಂದ ತಮ್ಮ ಅಭಿಮಾನಿಗಳಿಗೆ ಪತ್ರ ಬರೆಯುತ್ತಾ ಚಟುವಟಿಕೆ ಯಿಂದಿದ್ದರು. ಕ್ರಿಕೆಟ್ ಆಟವನ್ನು ರೇಡಿಯೊ ಮತ್ತು ಟೆಲಿವಿಷನ್ ಮೂಲಕ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಸಚಿನ್ ಟೆಂಡೂಲ್ಕರ್‌ರ ಆಟ ನನ್ನ ಆಟವನ್ನು ನೆನಪಿಗೆ ತರುತ್ತದೆ ಎಂದು ಸಾರ್ವಜನಿಕವಾಗಿ ಹೇಳಿದ್ದು ಭಾರತದ ಕ್ರಿಕೆಟ್ ಪಟುವಿಗೆ ನೀಡಿದ ಅಪರೂಪದ ಪ್ರೋತ್ಸಾಹ ವಾಗಿದೆ. ೧೯೯೮ ರಲ್ಲಿ ಬ್ರಾಡ್‌ಮನ್‌ರನ್ನು ಭೇಟಿಯಾದದ್ದು ಮರೆಯ ಲಾಗದ ಅನುಭವ ವೆಂದು ಸಚಿನ್ ಟೆಂಡೂಲ್ಕರ್ ಹೇಳುತ್ತಾರೆ.

ಬ್ರಾಡ್‌ಮನ್ ಎರಡನೇ ಮಹಾಯುದ್ಧದ ಸಮಯದಲ್ಲಿ ರಾಯಲ್ ಆಸ್ಟ್ರೇಲಿಯನ್ ಏರ್ ಫೋರ್ಸ್‌ನಲ್ಲಿ ಸೇವೆ ಸಲ್ಲಿಸಬೇಕಾದ ಪ್ರಮೇಯ ಒದಗಿ ಬರದಿದ್ದರೆ ಕ್ರಿಕೆಟ್‌ನಲ್ಲಿ ಇನ್ನೇನು ಅದ್ಭುತವನ್ನು ಅವರು ಮೆರೆಯುತ್ತಿ ದ್ದರೊ ಏನೊ ! ಆಡುವ ದಿನಗಳನ್ನು ಹಿಂದೆಬಿಟ್ಟ ಬಳಿಕ ಬ್ರಾಡ್‌ಮನ್ ಪ್ರಚಾರ ದಿಂದ ಹೆಚ್ಚೂ ಕಡಿಮೆ ದೂರವಾಗಿ ಬದುಕಿ ದರು. ಮಾಧ್ಯಮಗಳಲ್ಲಿನ ಸಂದರ್ಶನವೆಂದರೆ ಅವರಿಗೆ ಆಗುತ್ತಲೇ ಇರಲಿಲ್ಲ. ಸಾರ್ವಜನಿಕ ಪ್ರಚಾರದಿಂದ ಅವರು ದೂರ ಉಳಿದದ್ದರಿಂದ ಅವರ ವ್ಯಕ್ತಿತ್ವದ ಸುತ್ತ ಆಕರ್ಷಕವಾದ ಪ್ರಭೆ ಯೊಂದು ನಿರ್ಮಾಣವಾಯಿತು. ಇದಕ್ಕೊಂದು ಅಪವಾದವೆಂಬಂತೆ ೧೯೮೮ರಲ್ಲಿ ಆಸ್ಟ್ರೇಲಿಯಾ ದ್ವಿಶತಮಾನ ಆಚರಿಸುವ ಸಂದರ್ಭದಲ್ಲಿ ಆಸ್ಟ್ರೇಲಿಯನ್ ಬ್ರಾಡ್ ಕಾಸ್ಟಿಂಗ್ ಕಾರ್ಪೊ ರೇಷನ್‌ಗೆ ತಮ್ಮ ಜೀವನ ಕುರಿತಂತೆ ಸರಣಿ ಸಂದರ್ಶನವನ್ನು ನೀಡಿದರು. ೧೯೯೬ರಲ್ಲಿ ನೀಡಿದ ಅಪರೂಪದ ಸಂದರ್ಶನವೊಂದರಲ್ಲಿ "ಏಕೆ ನಿಮ್ಮ ದಾಖಲೆಯನ್ನು ಇನ್ನೂ ತನಕ ಯಾರೂ ಮುರಿದಿಲ್ಲ ?" ಎಂದು ಕೇಳಲಾದ ಪ್ರಶ್ನೆಗೆ ಬ್ರಾಡ್‌ಮನ್ ನೀಡಿದ ಉತ್ತರ ಎಲ್ಲರ ಕಣ್ತೆರೆಸುವಂತಿದೆ. ದೊಡ್ಡ ವ್ಯಕ್ತಿಯೊಬ್ಬರ ಅಂತರಂಗದ ದರ್ಶನ ಮೂಡಿಸುತ್ತವೆ ಆ ಮಾತುಗಳು. ಬ್ರಾಡ್‌ಮನ್ ಉತ್ತರಿಸಿದ್ದು ಹೀಗೆ : "ನನಗಿಂತ ಉತ್ತಮ ವಾದ ಬಹಳ ಮಂದಿ ಬ್ಯಾಟ್ಸಮನ್ನರನ್ನ ನಾನು ನೋಡಿದೆ...ಆದರೆ ಅವರೆಲ್ಲಾ ತಾವಾಗಿಯೇ ಔಟಾಗುತ್ತಿದ್ದರು."

೧೯೪೯ರಲ್ಲಿ ಅವರಿಗೆ ನೈಟ್ ಪದವಿಯನ್ನು ನೀಡಿದ ಸಂದರ್ಭದಲ್ಲಿ ಅವರ ಸಂದರ್ಶನ ಮಾಡಲಾಯಿತು. ಮುಂದೆ ತಾವು ಉತ್ತಮ ಬ್ಯಾಟ್ಸಮನ್ ಆಗಿ ಅರಳಲು ಸಾಧ್ಯವಾದದ್ದು ಬಾಲ್ಯದಲ್ಲಿ ತಾವು ಕಂಡುಕೊಂಡ ಒಂದು ಆಟದಿಂದ ಎಂಬ ರಹಸ್ಯವನ್ನು ಬಯಲು ಮಾಡಿದರು. ಬಾಲಕ ಬ್ರಾಡ್‌ಮನ್ ಶಾಲೆ ಬಿಟ್ಟ ನಂತರ ಸಂಜೆ ವೇಳೆ ಬಹಳ ಹೊತ್ತಿನ ವರೆಗೆ ಕ್ರಿಕೆಟ್ ಹುದ್ದರಿಯೊಂದನ್ನು ಹಿಡಿದು ಕೊಂಡು ಗಾಲ್ಫ್ ಚೆಂಡಿಗೆ ಗುರಿಕಟ್ಟಿ ಹೊಡೆ ಯುತ್ತಾ ಕಣ್ಣ ಕಕ್ಷೆಯಿಂದ ಲಕ್ಷ್ಯ ಜಗುಳದಂತೆ ಅಭ್ಯಾಸ ಮಾಡಿಕೊಂಡ. "ವಾಸ್ತವವಾಗಿ ಈ ಕ್ರಮದಿಂದ ಮುಂದೆ ಕ್ರಿಕೆಟ್‌ನಲ್ಲಿ ನನಗೆ ಅನುಕೂಲವಾಗುತ್ತದೆಯೆಂದು ನಾನು ಎಣಿಸಿರಲಿಲ್ಲ. ಸುಮ್ಮನೆ ಕಾಲಹರಣ ಮಾಡು ವುದಕ್ಕೆ ನಾನು ಆ ರೀತಿ ಪುಟಿದು ಬಂದ ಚೆಂಡನ್ನು ಹೊಡೆಯುವುದರಲ್ಲಿ ತೊಡಗಿರು ತ್ತಿದ್ದೆ",ಎಂದಿದ್ದಾರೆ ಬ್ರಾಡ್‌ಮನ್.

ಕ್ರಿಕೆಟ್ ಚರಿತ್ರೆ ಬರೆಯುವವರಿಗೆ ಇರುವ

ಒಂದೇ ವಿಧಾನವೆಂದರೆ ಕಾಲವನ್ನು ಬ್ರಾಡ್‌ಮನ್ ಪೂರ್ವ ಮತ್ತು ಬ್ರಾಡ್‌ಮನೋತ್ತರ ಎಂದು ವಿಭಾಗಿಸಿಕೊಳ್ಳುವುದು. ಬ್ರಾಡ್‌ಮನ್ ೧೯೨೮ರಲ್ಲಿ ತಮ್ಮ ಮೊಟ್ಟಮೊದಲ ಟೆಸ್ಟ್ ಪಂದ್ಯ ಆಡಿದರು ಮತ್ತು ೧೯೪೮ರಲ್ಲಿ ಕಡೆಯ ಪಂದ್ಯ ಆಡಿದರು. ಈಗಾಗಲೇ ತಿಳಿಸಿರುವಂತೆ ಕಡೆಯ ಬಾರಿಗೆ ಅವರು ಲಂಡನ್‌ನ ಓವಲ್ ಮೈದಾನಕ್ಕೆ ಇಳಿದಾಗ ರನ್ ಸರಾಸರಿ ೧೦೦ ಆಗಲು ಕೇವಲ ನಾಲ್ಕು ರನ್ನು ಮಾತ್ರ ಬೇಕಾಗಿತ್ತು. ವಾರ್ವಿಕ್‌ಶೈರ್‌ನ ಬೌಲರ್ ಎರಿಕ್ ಹೋಲಿಸ್ ಬೌಲ್ ಮಾಡಿದ ಎರಡನೇ ಬಾಲಿಗೆ ಬ್ರಾಡ್‌ಮನ್ ಸೊನ್ನೆಗೆ ಔಟಾದರು. ಬ್ರಾಡ್‌ಮನ್‌ರ ಸಾಧನೆಯನ್ನು ಸ್ಥಿರಗೊಳಿಸುವ ಸಲುವಾಗಿ ಸಿಡ್ನಿ ಬ್ರಾಡ್‌ಕಾಸ್ಟಿಂಗ್‌ನ ಪ್ರಸಿದ್ಧ ವೀಕ್ಷಕ ವಿವರಣಕಾರ ಸರ್ ಚಾರ್ಲ್ಸ್ ಮೋಸಸ್ ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ ಅಂಚೆ ವಿಳಾಸವನ್ನು ಅಂಚೆ ಪೆಟ್ಟಿಗೆ ೯೯೯೪, ಸಿಡ್ನಿ ಎಂದು ನಾಮಕರಣ ಮಾಡಿದರು.

ವಸಾಹತು ಹಿಡಿತದಲ್ಲಿ ಕಂಗಾಲಾಗಿದ್ದ ರಾಷ್ಟ್ರಗಳಲ್ಲಿ ಆಸ್ಟ್ರೇಲಿಯಾ ಕೂಡ ಒಂದು. ಕೇವಲ ಅಪರಾಧಿಗಳಿಂದ ಆದ ದೇಶವೆಂಬ ಅವಮಾನ ಆಸ್ಟ್ರೇಲಿಯನ್ನರನ್ನ ಬಾಧಿಸುತ್ತಲೇ ಇತ್ತು. ಒಂದರ್ಥದಲ್ಲಿ ತಗ್ಗಿಸಿದ ತಲೆಯನ್ನು ಎತ್ತಿ ತಿರುಗಾಡುವಂತೆ ಮಾಡಿದವರು ಬ್ರಾಡ್‌ಮನ್. ಈ ಸಂಗತಿಯನ್ನ ನೊಬೆಲ್ ಬಹುಮಾನ ವಿಜೇತ ಲೇಖಕ ಥಾಮಸ್ ಕೆನೀಲಿ ಹೀಗೆ ತಿಳಿಸುತ್ತಾರೆ : ''ನಮಗೆ ಬೋಧಿಸುತ್ತಿದ್ದ ಚರಿತ್ರೆ ಎಂದರೆ ಯೂರೋಪಿಯನ್ ಚರಿತ್ರೆ ಮಾತ್ರ. ಕಾವ್ಯ ಟೆನಿಸನ್‌ಗೇ ನಿಂತು ಹೋಗಿತ್ತು. ಸಾಹಿತ್ಯದ ವ್ಯಕ್ತಿಗಳ ಬಗ್ಗೆ ನಾವು ಮಾತನಾಡುವಾಗ ಇಂಗ್ಲಿಷಿನವರನ್ನು ದಾಟಿ ನಾವು ಮುಂದೆ ಹೋಗುತ್ತಿರಲಿಲ್ಲ. ಆಸ್ಟ್ರೇಲಿಯಾ ಸಾಂಸ್ಕೃತಿಕವಾದ ಅವಮಾನವನ್ನು ಮರೆಯುವಂತೆ ಮಾಡಿದ್ದುದು ಕ್ರಿಕೆಟ್ ಮಾತ್ರ ; ಏಕೆಂದರೆ, ಯಾವ ಆಸ್ಟ್ರೇಲಿಯನ್ನನೂ ''ಪ್ಯಾರಡೈಸ್ ಲಾಸ್ಟ್''ನಂಥ ಕಾವ್ಯವನ್ನು ಬರೆದಿರಲಿಲ್ಲ, ಆದರೆ ಲಾರ್ಡ್ಸ್ ಮೈದಾನದಲ್ಲಿ ಮಧ್ಯಾಹ್ನದ ಊಟಕ್ಕೆ ಮೊದಲು ಡಾನ್ ಬ್ರಾಡ್‌ಮನ್ ೧೦೦ ರನ್ನುಗಳಿಸಿದ್ದ ಸಂಗತಿ ನಮಗೆ ಗೊತ್ತಿತ್ತು.''

ಬ್ರಾಡ್‌ಮನ್ ಆರಂಭದಿಂದಲೂ ಖ್ಯಾತಿವಂತರಾಗಿದ್ದರೆನ್ನುವುದಕ್ಕೆ ಒಂದು ಪ್ರಸಂಗವನ್ನು ನೆನೆಯಬಹುದು. ಅವರು ಎರಡನೇ ಬಾರಿ ಇಂಗ್ಲೆಂಡ್ ಪ್ರವಾಸ ಮಾಡುವ ಕಾಲದಲ್ಲಿ ವಿಪರೀತ ರನ್ನುಗಳ ಮಳೆ ಕರೆದು ೧೯೩೦ರಲ್ಲಿ ಮೊದಲನೇ ಪ್ರವಾಸದಲ್ಲಿ ಮಾಡಿದ್ದ ಸಾಧನೆಯನ್ನೂ ಮಂಕುಗೊಳಿಸಿದ್ದರು. ಆ ಕಾಲದಲ್ಲೇ ಅವರಿಗೆ ಕರುಳು ಬಾಲದ ಶಸ್ತ್ರ ಚಿಕಿತ್ಸೆಯಾಗಿ ಎರಡು ದಿನಗಳ ಕಾಲ ತುರ್ತು ವಾರ್ಡಿನಲ್ಲೇ ಇದ್ದರು. ೨೬ ವರ್ಷದ ಬ್ರಾಡ್‌ಮನ್‌ರ ಸ್ಥಿತಿಯ ಬಗ್ಗೆ ಲಂಡನ್ ಟೈಮ್ಸ್ ''ಅರಮನೆ ಸುತ್ತೋಲೆ'' ಎಂಬ ಪುಟದಲ್ಲಿ ಪ್ರಕಟಿಸಿತ್ತು: ''ಬ್ರಾಡ್‌ಮನ್‌ರ ಪ್ರಗತಿಯ ಬಗ್ಗೆ ಬಾಲ್‌ಮೊರಾಲ್‌ನಲ್ಲಿರುವ ದೊರೆ ಜಾರ್ಜ್‌ರಿಗೆ ನಿರಂತರವಾಗಿ ಸುದ್ದಿ ಮುಟ್ಟಿಸಲಾಗುತ್ತಿದೆ''. ಇದೇ ಪ್ರಕಾರವಾಗಿ ಪ್ರತೀವರ್ಷ ಬ್ರಾಡ್‌ಮನ್‌ರ ದಾಖಲೆಯನ್ನು ಕ್ರಿಕೆಟ್ ಆಟದ ಬೈಬಲ್ ಎಂದೇ ಪ್ರಸಿದ್ಧವಾಗಿರುವ ವಿಸ್ಡನ್ ನಿಯತಕಾಲಿಕೆಯಲ್ಲಿ ಹೊಸದಾಗಿ ನಮೂದಿಸಲಾಗುತ್ತಿತ್ತು. ಆ ದಾಖಲೆಯ ಹೊಳಪು ಮಾಸಬಾರದೆಂಬುದೇ ಕ್ರಿಕೆಟ್ ಪ್ರೇಮಿಗಳ ಅಭಿಲಾಷೆಯಾಗಿತ್ತು. ೯೦ರ ದಶಕದಲ್ಲಿ ತಮ್ಮ ಸುದೀರ್ಘವಾದ ಸೆರೆಮನೆವಾಸದಿಂದ ಹೊರಬಂದ ನೆಲ್ಸನ್ ಮಂಡೆಲಾ ಅವರು ಕೇಳಿದ ಪ್ರಮುಖ ಪ್ರಶ್ನೆಗಳಲ್ಲಿ

ಒಂದೆಂದರೆ "ಡಾನ್ ಬ್ರಾಡ್‌ಮನ್ ಇನ್ನೂ ಬದುಕಿದ್ದಾರೇನು ?" ಎಂಬುದು.

ಬ್ರಾಡ್‌ಮನ್‌ರ ನಿಧನದಿಂದ ಅನೇಕ ಆಸ್ಟ್ರೇಲಿಯನ್ನರ ಮನೆಯಲ್ಲಿ ಯಾರೋ ನಿಧನರಾದಂಥ ಆಘಾತವಾಗಿದೆ. ಅವರೊಬ್ಬ ಮಾದರಿ ವ್ಯಕ್ತಿಯಾಗಿದ್ದರು. ಒಬ್ಬ ನಿಜವಾದ ನಾಯಕನಾಗಿದ್ದರು. ಕವಿ, ಗಾಯಕ ಆರ್.ಸಿ. ರಾಬರ್ಟ್‌ಸನ್ ಹೇಳುತ್ತಾರೆ: "ಕಾವ್ಯ ಮತ್ತು ಹತ್ಯೆಯ ಗುಣ ಎರಡೂ ಒಟ್ಟಿಗೇ ಅವರಲ್ಲಿ ವಾಸವಾಗಿದ್ದವು. ಬೌಲಿಂಗನ್ನು ಅವರು ಚಿಂದಿ ಮಾಡುತ್ತಿದ್ದರು, ಹಾಗೆಯೇ ನಿರ್ದಯವಾಗಿ ಹೆಣದ ಮೇಲೆ ನರ್ತಿಸುತ್ತಿದ್ದರು."

ಅನೇಕರ ದೃಷ್ಟಿಯಲ್ಲಿ ಬ್ರಾಡ್‌ಮನ್‌ರ ನಂತರದ ಆಸ್ಟ್ರೇಲಿಯಾ ಮೊದಲಿನ ಹಾಗೆ ಇರುವುದಿಲ್ಲ. "ಅವರ ಧೋರಣೆಯಲ್ಲಿ ನ್ಯಾಯ -ನೀತಿ ಎಂಬುದು ಎದ್ದು ಕಾಣುತ್ತಿತ್ತು. ಅಂಥ ನಡವಳಿಕೆ ಈಗ ಮಾಯವಾಗುತ್ತಿದೆ, ಆಸ್ಟ್ರೇಲಿಯಾ ಈಗ ಬದಲಾಗುತ್ತಿದೆ. ಸರ್ ಡಾನ್ ಅಂಥವರ ಕಡೆ ನಾವು ಹಿಂತಿರುಗಿ ನೋಡಿ ಅವರ ಉತ್ತಮ ಗುಣಗಳನ್ನು ಅಂತಸ್ಥ ಮಾಡಿಕೊಳ್ಳಬೇಕು" ಎಂದು ಹಲವರು ಹೇಳುತ್ತಿದ್ದಾರೆ. ಸರ್ ಡಾನ್ ಬ್ರಾಡ್‌ಮನ್ ಹೇಗೆ ತಮ್ಮ ಸಮಕಾಲೀನರ ಹೃದಯವನ್ನು ಗೆಲ್ಲುವುದರ ಜೊತೆಗೆ ತಾವು ನಿವೃತ್ತರಾದ ಮೇಲೆ ಹುಟ್ಟಿದ ತಲೆಮಾರಿನವರ ಹೃದಯವನ್ನೂ ಗೆದ್ದರು ಎಂಬುದನ್ನು ತಿಳಿಯಲು ಲೇಖಕರು, ಕವಿಗಳು, ಗೀತ ರಚನಕಾರರು ಕಳೆದ ೫೦ ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ.

ತಮ್ಮ ಸಾಧನೆಯಿಂದ, ಸ್ವಭಾವದಿಂದ ಅಪರೂಪದ ವ್ಯಕ್ತಿಯಾಗಿ ಮಾದರಿ ಮನುಷ್ಯನಾಗಿ ತುಂಬು ಜೀವನ ಮಾಡಿದ ಸರ್ ಡಾನ್ ಬ್ರಾಡ್‌ಮನ್ ಕಾಲವಾದ ಸಂದರ್ಭದಲ್ಲಿ ಅವರಿಗೆ ಅಶ್ರುಧಾರೆಯ ವಿದಾಯ ಹೇಳುವುದು ಕರ್ತವ್ಯವಾಗಿದೆ.



ಲಾಭಕ್ಕಿಂತ ಕರ್ತವ್ಯ ಮುಖ್ಯ. ಜಯಕ್ಕಿಂತ ಸಾಧನೆ ಮುಖ್ಯ.
ಫಲಕ್ಕಿಂತ ಪ್ರಯತ್ನ ಮುಖ್ಯ. ಮಾತಿಗಿಂತ ಕೃತಿ ಮುಖ್ಯ.
-ವೇದ

ಮುನಿದು ಪೊಡವಿ ನುಂಗುವಡೆ

ಡಾ. ದಯಾನಂದ
ಭೂಗೋಳ ಶಾಸ್ತ್ರ ಉಪನ್ಯಾಸಕ
ಮಹಾರಾಣಿ ಸರ್ಕಾರಿ ಪದವಿ
ಪೂರ್ವ ಕಾಲೇಜು ಎನ್.ಎಸ್. ರಸ್ತೆ
ಮೈಸೂರು-೫೭೦ ೦೦೫

ಜನವರಿ ೨೬, ೨೦೦೧ ರ ಭೂಕಂಪನದ ಬಗ್ಗೆ, ವ್ಯಾಪಕವಾಗಿ ಭೂಕಂಪನ ವಿಜ್ಞಾನದ ಬಗ್ಗೆ, ಬೆಳಕು ಚೆಲ್ಲುವ ಲೇಖನ.ಕವಿ ರಾಘವಾಂಕ ಬರೆದಿದ್ದಾನೆ: ''ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ? ಮುನಿದು ಪೊಡವಿ ನುಂಗುವಡೆ ಮನೆ ತಾಂಗುವುದೆ? ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವೊಡೆ ಮೆಳೆಗಳಡ್ಡ ಬಹವೇ?'' ಗುಜರಾತಿನಲ್ಲಿ ಪೊಡವಿ ಮುನಿಯಿತು, ಆ ಮೊದಲು ಒರಿಸ್ಸಾದಲ್ಲಿ ಹೆಗ್ಗಡಲುಕ್ಕಿ ಮೊಗೆಯಿತು, ''ಧರೆಗಗನವಡಸಿ ಕಾದುವಡೆಡೆಯಲಿಹ ಚರಾಚರವೆಲ್ಲಿ ಹೊಗಲಿ?''

ತನ್ನ ಮಕ್ಕಳು ತನ್ನೊಡನೆ ಸರಿಯಾಗಿ ಹೊಂದಿಕೊಳ್ಳುತ್ತಿಲ್ಲ ಎಂಬುದನ್ನು ಭೂಮಿ ತಾಯಿ ಇತ್ತೀಚಗೆ ತನ್ನ ಗುಜರಾತ್, ಎಸ್. ಸಾಲ್ವಡಾರ್ ಮತ್ತು ಇತರ ಭಾಗಗಳನ್ನು ನಡುಗಿಸಿಕೊಳ್ಳುವುದರ ಮೂಲಕ ತನ್ನ ಮುನಿಸನ್ನು ಘೋರವಾಗಿ ಪ್ರಕಟಗೊಳಿಸಿದ್ದಾಳೆ. ನಮ್ಮ ರಾಷ್ಟ್ರದ ಇತರ ಹಲವು ಭಾಗಗಳಲ್ಲಿ ಧರೆ ಈಗಲೂ ಕಂಪಿಸುತ್ತಿದೆ. ಏಕೆ ಹೀಗೆ ? ಇದರಲ್ಲಿ ನಮ್ಮ ಪಾತ್ರವೇನು ? ಯಾರು ಹೊಣೆ ?

ಭೂಮಿಯ ಕಂಪನ ಅದರ ಉಗಮ ದಿನಗಳಿಂದಲೂ ಆಗುತ್ತಿರುವ ಒಂದು ಸಹಜ ಸ್ವಾಭಾವಿಕ ಕ್ರಿಯೆ. ಮಾತನಾಡುವ ನಿರಂತರ ಚಲನಾತ್ಮಕವಾದ ಪೃಥ್ವಿ ನಡುಗುತ್ತದೆ ಮತ್ತು ಗುಡುಗುತ್ತದೆ. ಆದರೆ, ಇದರ ಪರಿಣಾಮ ಮಾತ್ರ ಮಾರಕವಾದುದು.

ಭೂಮಿ ಹಲವು ಕಾರಣಗಳಿಗಾಗಿ ನಡುಗುತ್ತದೆ. ಅದರ ಆಂತರಿಕ ಚಲನೆ ಮಾನವನ ಅತಿರೇಕ ಈ ಕಂಪನ ಉಂಟಾಗಲು ಮುಖ್ಯ ಕಾರಣ. ಭೂಮಿಯ ಯಾವುದೇ ಭಾಗದಲ್ಲಿ ಜ್ವಾಲಾಮುಖಿ ಕಾರ್ಯಾಚರಣೆ ಮಾಡುವಾಗ, ಭೂ ಭಾಗಗಳು ಕುಸಿದು ಬೀಳುವಾಗ, ಆಂತರಿಕ ಶಿಲಾಸ್ತರಗಳ ಸ್ಥಾನ ಪಲ್ಲಟವಾದಾಗ ಮತ್ತು ಭೂಖಂಡಗಳ ವಲಸೆಯಿಂದ ಭೂಮಿ ನಡುಕಕ್ಕೆ ಒಳಗಾಗುತ್ತದೆ. ಆಂತರಿಕ ಸ್ಥಾನ ಪಲ್ಲಟ ಮತ್ತು ಖಂಡಗಳ ವಲಸೆಯಿಂದಾಗುವ ನಡುಕ ಅತ್ಯಂತ ವಿನಾಶಕಾರಿಯಾದುದು. ಈ ಕಾರಣಗಳಿಂದಲೇ ಗುಜರಾತಿನಲ್ಲಿ ಕಂಪನವಾಗಿದೆ. ಇದರ ಪರಿಣಾಮ ಅಪಾರ ಸಾವು-ನೋವು ಮತ್ತು ಆಸ್ತಿ-ಪಾಸ್ತಿಯ ನಷ್ಟ.

ಭೂಕಂಪನಗಳಿಗೆ ಮಾನವನೂ ಪರೋಕ್ಷವಾಗಿ ಕಾರಣನಾಗುತ್ತಿದ್ದಾನೆ. ಪರಿಸರದ ಸಮತೋಲನೆಯನ್ನು ಆತ ಹಾಳುಗೆಡವಿದ್ದಾನೆ. ಅವನ ಆಸೆಗೆ ಮಿತಿಯಿಲ್ಲ. ಕೊನೆಯಿಲ್ಲ. ತನಗೆ ಉಪಯುಕ್ತವಾದ ಖನಿಜ, ತೈಲ, ಅನಿಲ, ನೀರು ಮತ್ತು ಇತರ ನಿಕ್ಷೇಪಗಳಿಗಾಗಿ ಅವು ಎಲ್ಲೇ ಇರಲಿ ಗಣಿಗಾರಿಕೆ ಚಟುವಟಿಕೆಗಳಿಂದ ಇಡೀ ಪೃಥ್ವಿಯ ಉದರವನ್ನು ಶೋಧನೆ ಮಾಡಿ, ಅತಿ ಆಳವಾಗಿ ಕೊರೆದು, ಆಂತರಿಕ ಶಿಲಾ ರಚನೆಯ ವ್ಯವಸ್ಥೆಗೆ ಗಾಸಿ ಮಾಡಿದ್ದಾನೆ. ಶಿಲೆಗಳಿಗಾಗಿ ಭೂಮಿಯನ್ನು ಸಿಡಿಸಿದ್ದಾನೆ. ಮಾನವನ ಈ ಅಬ್ಬರದ ಆರ್ಭಟವನ್ನು ಪೃಥ್ವಿ ಹೇಗೆ ಸಹಿಸಿಕೊಂಡಾಳು ?

ಬಲು ಹಿಂದಿನಿಂದಲೂ ಭೂಕಂಪನವಾಗುತ್ತಾ ಬಂದಿದೆ. ಆದರೆ, ಜನರ ಸಾವು-ನೋವು, ಆಸ್ತಿನಾಶದ ಪ್ರಮಾಣ ಬರುಬರುತ್ತ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ನಮ್ಮ ಜೀವನ ಶೈಲಿಯಲ್ಲಿ ಆದ ಬದಲಾವಣೆಗಳು ಮತ್ತು ಬಹುಮಹಡಿ ಕಟ್ಟಡಗಳು . ಒಂದು ಬಹು

ಮಹಡಿ ಕಟ್ಟಡ ಕುಸಿದರೆ ಸಾವಿರಾರು ಜನರು ಸಾಯುತ್ತಾರೆ, ನಿರಾಶ್ರಿತರಾಗುತ್ತಾರೆ. ಅದೇ ನಮ್ಮ ನಾಡು ಹೆಂಚಿನ ಮನೆ ಇಲ್ಲವೆ ಗುಡಿಸಲು, ಇಲ್ಲವೆ ಕೇವಲ ನೆಲಮಹಡಿಯ ಆಧುನಿಕ ಕಟ್ಟಡ ಕುಸಿದರೂ ಹಾನಿಯ ಪ್ರಮಾಣ ಬಹಳ ಕಡಿಮೆ. ಕಟ್ಟಡಗಳ ಕಳಪೆ ಕಾಮಗಾರಿ ಸಹ ಹೊಸಕಟ್ಟಡಗಳೇ ಉದುರಲು ಕಾರಣವಾಗಿದೆ. ಈಗ ಅಹಮದಾಬಾದ್‌ನಲ್ಲಿ ಕಂಪನದ ನೋವಿನಿಂದ ಬಳಲುತ್ತಿರುವ ಜನರ ಆರೋಪವೂ ಇದೇ.

ವಿಶ್ವದ ಎಲ್ಲೆಡೆಯೂ ಭೂಕಂಪನವಾಗುತ್ತಿದೆ. ಆದರೆ ಮುಂದುವರೆದ ರಾಷ್ಟ್ರಗಳಲ್ಲಿ ಆಗುವ ಅನಾಹುತಕ್ಕೆ, ಸಾವು-ನೋವುಗಳ ಪ್ರಮಾಣ ನಮ್ಮ ಗುಜರಾತಿಗೆ ಹೋಲಿಸಿದರೆ ಬಲು ಕಡಿಮೆ. ಮೂರನೇ ವಿಶ್ವದ ನಮ್ಮಂಥ ರಾಷ್ಟ್ರಗಳಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಅತ್ಯಂತ ಕಳಪೆಯಿರುವುದೇ ಭಾರಿ ಪ್ರಮಾಣದ ಅನಾಹುತಕ್ಕೆ ಕಾರಣ ಎಂದು ತಜ್ಞರ ಅಭಿಮತ. ಇಲ್ಲಿಯ ಜನರ ಜೀವಕ್ಕೆ ಬೆಲೆಯಿಲ್ಲ ನಮ್ಮ ಈ ವ್ಯವಸ್ಥೆ ವಿಪ್ಲವಕಾರಿಯಾದುದು.

ಭೂಕಂಪನದ ತೀವ್ರತೆ ಕಂಪನದ ಅಲೆಗಳ ತೀವ್ರತೆಯನ್ನು ಅವಲಂಭಿಸಿರುತ್ತದೆ. ಕಂಪನದ ಮೇಲ್ಮೈ ಅಲೆಗಳು ವಿನಾಶಕಾರಿಯಾದುವು. ಇವು ಭೂಭಾಗಗಳನ್ನು ವ್ಯಾಪಕವಾಗಿ ಅಲುಗಾಡಿಸುತ್ತವೆ. ಸಾಮಾನ್ಯವಾಗಿ ರಿಕ್ಟರ್ ಮಾಪಕದಲ್ಲಿ ೬ಕ್ಕೂ ಹೆಚ್ಚು ಪ್ರಮಾಣವಿರುವ ಕಂಪನ ಭೀಕರವಾಗಿರುತ್ತದೆ. ದೇಶದ ಇತಿಹಾಸದಲ್ಲಿಯೆ ಕಂಡು ಕೇಳಿರದ ಗುಜರಾತಿನ ಭುಜ್‌ನಲ್ಲಿ ರಿಕ್ಟರ್ ಮಾಪಕದಲ್ಲಿ ಸುಮಾರು ೭ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಭೂಕಂಪನವಾಗಿದೆ. ಈಗ ಇಡೀ ಭುಜ್‌ನಗರ ಬಹುತೇಕ ನಾಶವಾಗಿದೆ.

ಪೃಥ್ವಿಯಲ್ಲಿ ಸಾಮಾನ್ಯವಾಗಿ ಭದ್ರ ಮತ್ತು ಅಭದ್ರವೆಂಬ ನೆಲೆಗಳಿವೆ. ಪೆಸಿಫಿಕ್ ಸಾಗರ ಮತ್ತು ಮೆಡಿಟರೇನಿಯನ್ ತೀರಗಳು, ಆಫ್ರಿಕಾದ ಸೀಳು ಕಣಿವೆ ಹಾಗೂ ಪ್ರಪಂಚದ ಕಿರಿಯ ಮಡಿಕೆ ಪರ್ವತ ಶ್ರೇಣಿಗಳ ಭಾಗಗಳು ಅಭದ್ರ ನೆಲೆಗಳು. ಇಲ್ಲಿ ಇಟಲಿ ಮತ್ತು ಜಪಾನ್ ನೆಲಸಿವೆ. ಇಟಲಿಯಲ್ಲಿ ಭೂಮಿ ವರ್ಷದಲ್ಲಿ ಸುಮಾರು ೪೫೦ ಸಲ ನಡುಗಿದರೆ, ಜಪಾನಿನಲ್ಲಿ ಲೆಕ್ಕವಿಲ್ಲ. ಜಪಾನಿಯರು ಅಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿಯೂ ಎಂಥ ಪ್ರಗತಿಯನ್ನು ಸಾಧಿಸಿದ್ದಾರೆ! ಅವರ ಜೀವನ ತಂತ್ರಗಾರಿಕೆ ನಮಗೂ ಮಾದರಿಯಾಗಲಿ.

ವಾಸ್ತವವಾಗಿ ನಮ್ಮ ಉತ್ತರ ಭಾರತ ಭದ್ರವಲ್ಲದ ಫಲವತ್ತಾದ ಬಯಲು ಪ್ರದೇಶ. ಇದರ ಉತ್ತರದಲ್ಲಿ ಅಭದ್ರ ಮಡಿಕೆ ಪರ್ವತ ಶ್ರೇಣಿಯಾದ ಹಿಮಾಲಯ ಹಬ್ಬಿದೆ. ಇಲ್ಲಿ ಭೂಕಂಪನಗಳು ಸರ್ವೆಸಾಮಾನ್ಯ. ಆದರೆ, ಪುರಾತನ ಗಟ್ಟಿಶಿಲೆಗಳಿಂದ ಕೂಡಿರುವ ದಕ್ಷಿಣಭಾರತ, ದಖನ್ ಪ್ರಸ್ಥಭೂಮಿಯೆಂದೇ ಪ್ರಖ್ಯಾತವಾಗಿದೆ. ಇದು ಸಮೃದ್ಧ ಖನಿಜಗಳ ಉಗ್ರಾಣ ತಾಣ. ವಯಸ್ಸಿನಲ್ಲಿ ಹಿಮಾಲಯಗಳಿಗಿಂತ ಹಿರಿಯ ಶ್ರೇಣಿಗಳಾದ ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಂದ, ಭದ್ರಕೋಟೆಯಂತೆ ಸುತ್ತುವರಿದಿದೆ. ಆದರೆ, ಈ ಭದ್ರಕೋಟೆಯೂ ನಡುಗುತ್ತಿದೆ ! (೧೯೯೩ರ ಲಾಥೂರ್ ಭೂಕಂಪನ ಮತ್ತು ಈವರೆಗಿನ ಕಂಪನಗಳು) ಇದು ನಾವು ನಿಸರ್ಗದ ಜೊತೆಗೆ ವ್ಯವಹರಿಸುವುದರಲ್ಲಿ ಸೋತಿರುವುದನ್ನು ತೋರಿಸುತ್ತದೆ.

ಗುಜರಾತ್‌ನಲ್ಲಿ ಪ್ರಮುಖವಾಗಿ, ಇಡೀ ದೇಶದಲ್ಲಿ ಸಾಮಾನ್ಯವಾಗಿ ಭೂಮಿ ಈಗ ಕಂಪಿಸುತ್ತಿದೆ. ಕಳೆದ ೧೮೦ ವರ್ಷಗಳಿಂದೀಚಗೆ

ಗುಜರಾತ್‌ನಲ್ಲಿ ಈಗ ಆಗಿರುವ ಕಂಪನ ಅತ್ಯಂತ ವಿನಾಶಕಾರಿಯಾದುದು. ಸುಮಾರು ೫೦ಸಾವಿರಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. ಲಕ್ಷಾಂತರ ಜನರು ಕಟ್ಟಡಗಳ ಕೆಳಗೆ ಹುಗಿದು ಹೋಗಿದ್ದಾರೆ, ಗಾಯಗೊಂಡಿದ್ದಾರೆ ಮತ್ತು ನಿರಾಶ್ರಿತರಾಗಿದ್ದಾರೆ. ೨೫ ಸಾವಿರ ಕೋಟಿ ರೂ ಮೌಲ್ಯದ ಆಸ್ತಿ-ಪಾಸ್ತಿ, ಮನೆ-ಮಠಗಳು ನಾಶವಾಗಿವೆ ಎಂದು ಅಂದಾಜು ಮಾಡಲಾಗಿದೆ.

ಭೂಕಂಪನ ಯಾವಾಗ, ಎಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಆಗುತ್ತದೆ ಎಂದು ಮೊದಲೇ ನಿಖರವಾಗಿ ಮುನ್ಸೂಚನೆ ನೀಡುವಷ್ಟರ ಮಟ್ಟಿಗೆ 'ಭೂಕಂಪನ ವಿಜ್ಞಾನ' ಬೆಳವಣಿಗೆಯೊಂದಿಲ್ಲದಿರುವುದು, ದುರದೃಷ್ಟ. ಆದರೆ, ಭೂಕಂಪನ ಮಾಪಕವು ಕಂಪನ ಸಂಭವಿಸಿದ ಮೇಲೆ ಕಂಪನದ ತೀವ್ರತೆಯನ್ನು ನಿಖರವಾಗಿ ತಿಳಿಸುತ್ತಿದೆ. ಇಷ್ಟರ ಮಟ್ಟಿಗಾದರೂ ತೃಪ್ತಿ ಪಟ್ಟುಕೊಳ್ಳಬೇಕು.

ಪ್ರಸ್ತುತ ಲಭ್ಯವಿರುವ ವೈಜ್ಞಾನಿಕ ತಂತ್ರಗಳ ಸಹಾಯದಿಂದಲಾದರೂ ಸಂಭವನೀಯ ಕಂಪನಗಳ ಬಗೆಗೆ ಮುನ್ಸೂಚನೆ ತಿಳಿಯುವಲ್ಲಿ ಯಶ ಸಾಧಿಸಬೇಕಾಗಿದೆ. ಇದರಿಂದ ದೊಡ್ಡ ದೊಡ್ಡ ನಗರಗಳನ್ನಾದರೂ ರಕ್ಷಿಸಬಹುದು. ನಗರಗಳ ನಿರ್ಮಾಣದಲ್ಲಿ ಕೇವಲ ಕಟ್ಟಡ ಶಿಲ್ಪಶಾಸ್ತ್ರಜ್ಞರ, ಸಿವಿಲ್ ಎಂಜನಿಯರಿಂಗ್ ತಜ್ಞರ ಸಲಹೆ ಜೊತೆಗೆ ಭೂವಿಜ್ಞಾನ ಮತ್ತು ಪರಿಸರ ಶಾಸ್ತ್ರಜ್ಞರ ಸಲಹೆಯನ್ನೂ ಪಡೆಯುವುದು ಸೂಕ್ತ. ಸರಳ ಜೀವನದ ಹಂಚಿನ, ಹುಲ್ಲಿನ , ರಟ್ಟಿನ ಹಾಗೂ ಬಿದಿರಿನ ಮನೆಗಳಿಂದ ಎಲ್ಲವೂ ಮಿತವ್ಯಯವಾಗುತ್ತದೆ. ಜಪಾನಿಯರ ಗೃಹ ನಿರ್ಮಾಣ ಶೈಲಿ ನಮಗೆ ಮಾದರಿಯಾಗಬಹುದು.



ಯಾರೂ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೊ
ಅಂಥವರಿಗೆ ದೇವರೂ ಸಹಾಯ ಮಾಡುತ್ತಾನೆ

-ಎಸ್.ರಾಧಾಕೃಷ್ಣನ್

ನೀವು ಎಂದಿಗೂ ಮರೆಯಲಾರದಂಥ ನೆನಪಿನ ಸೂತ್ರಗಳು

ಸತ್ಯವತಿ
W/O ಡಾ|| ಹರಿಕೃಷ್ಣ
ಸರ್ಜನ್ ಡೆಂಟಿಸ್ಟ್
ಸುರತ್ಕಲ್-೫೭೫೦೧೪

ನನ್ನ ಪತಿ ಟೆಡ್ ಯಾವಾಗ ನಮ್ಮ ಕಾರನ್ನು 'ಕಳೆದುಕೊಳ್ಳ' ತೊಡಗಿದರೋ ಆಗ ನನಗೆ ಚಿಂತೆ ಶುರುವಾಯಿತು. ತನ್ನ ಮೂವತ್ತರ-ನಲವತ್ತರ ಹರೆಯದಲ್ಲಿ ಅವರು ಅಂಗಡಿಯಿಂದಾಗಲೀ, ಸಿನೇಮಾ ಮಂದಿರದಿಂದಾಗಲೀ ನೇರವಾಗಿ ನಮ್ಮ ವಾಹನವಿದ್ದಲ್ಲಿಗೇ ಬಂದು ಸೇರುತ್ತಿದ್ದರಿಂದ, ಯಾವ ರೀತಿಯ ತೊಂದರೆಗಳೂ ಉದ್ಭವಿಸಿರಲಿಲ್ಲ. ಆದರೆ ಅವರ ಐವತ್ತರ ಜನ್ಮದಿನದ ಅನಂತರ, ಒಮ್ಮೆ ಟೆಡ್ ಕಾರುಗಳನ್ನು ನಿಲ್ಲಿಸಿರುವ ಸ್ಥಳದ ಬಳಿಸಾರಿ, ಸ್ವಲ್ಪ ಹೊತ್ತು ನಿಂತು, ತಲೆಕೆರೆಯುತ್ತಾ ''ನಮ್ಮ ಕಾರನ್ನು ಎಲ್ಲಿ ನಿಲ್ಲಿಸಿದ್ದೇವೆ?'' ಎಂದು ಕೇಳಿದರು.

ಅಲ್ಲಿಂದ ಮುಂದೆ ಕೆಲವು ತಿಂಗಳುಗಳಲ್ಲಿ ಟೆಡ್ ತನ್ನ ಕನ್ನಡಕ, ಕೈಚೀಲ, ಬೀಗದ ಕೈ ಇತ್ಯಾದಿಗಳನ್ನು ಎಲ್ಲಿ ಇಟ್ಟರೆಂಬುದನ್ನೇ ಮರೆತುಬಿಡುತ್ತಿದ್ದರು. ಒಮ್ಮೆ ಒಂದು ರೆಸ್ಟೋರೆಂಟ್ ಬಳಿ ಬರುವಾಗ, ''ಇಲ್ಲಿ ನಾವು ತೆಗೆದುಕೊಂಡ ವಿಶೇಷ ಊಟದ ನೆನಪಿದೆ ತಾನೆ?'' ಎಂದು ನೆನಪಿಸಿದರು. ಆದರೆ ನಾನೆಂದೂ ಆ ರೆಸ್ಟೋರೆಂಟ್‌ಗೆ ಹೋಗಿರಲಿಲ್ಲವಾಗಿ, ಅದನ್ನೇ ತಿಳಿಸಿದೆ. ಆದರೆ ಅವರು ತಾನಲ್ಲಿ ಚಟ್ಟೆಮೀನಿನ ಮಾಂಸವನ್ನೂ, ನಾನು ಉದ್ದದ ಸಲ್‌ಮಾನ್ ಮೀನಿನ ಮಾಂಸವನ್ನೂ ತರಿಸಿ, ನಾವಿಬ್ಬರೂ ನಾವು ಹೋಗಿದ್ದ ಎಲ್ಲಾ ರೆಸ್ಟೋರೆಂಟ್‌ಗಳಿಗಿಂತ ಈ ರೆಸ್ಟೋರೆಂಟ್ ಉತ್ತಮವಾದದ್ದೆಂದು ಒಪ್ಪಿಕೊಂಡಿದ್ದಾಗಿ ಒತ್ತಿ ಒತ್ತಿ ಹೇಳಿದರು.

ನನಗೆ ಟೆಡ್‌ನ ಮರೆಗುಳಿತನದಿಂದ ತೊಂದರೆಗಳು ತಲೆದೋರಬಹುದೆಂದು ತೋರಿತಾದರೂ, ಹೆಚ್ಚಿನ ಪರಿಣಿತರು ಇಂಥಾ 'ಸಾದಾ ಮರೆವು' ತೊಡಕಿನ ಸಂಕೇತ ಅಲ್ಲವೆಂದೇ ಅಭಿಪ್ರಾಯಪಟ್ಟರು.

''ಅತಿಯಾದ ಮರೆವಿನಿಂದ ತನ್ನ ಕೆಲಸಗಳನ್ನು ಮಾಡಿಕೊಳ್ಳಲು ಆಗುವುದೇ ಇಲ್ಲ ಎಂಬ ಸ್ಥಿತಿ ಬರುವವರೆಗೂ ಇದರ ಬಗ್ಗೆ ಚಿಂತಿಸಬೇಕಾಗಿಲ್ಲ,'' ಎನ್ನುತ್ತಾರೆ ಹಾರ್ವರ್ಡ್ ಯೂನಿವರ್ಸಿಟಿಯ ಮನೋವಿಜ್ಞಾನಿ ಡೇನಿಯಲ್ ಎಲ್. ಶಾಕ್ಟರ್. ಆದ್ದರಿಂದ ಮರೆವು ತೀರಾ ವಿಕೋಪಕ್ಕೆ ಹೋದಾಗ ಮಾತ್ರ ವೈದ್ಯರನ್ನು ಸಂಪರ್ಕಿಸಬೇಕು.

ಹೆಚ್ಚಿನ ಜನರಿಗೆ, ಈ ರೀತಿಯ ಮರೆವು ಸರ್ವೇಸಾಧಾರಣ . ಅಷ್ಟು ಮಾತ್ರವಲ್ಲ, ಆಶ್ಚರ್ಯವೆಂಬಂತೆ ಅದು ಅವರ ಜೀವನದ ಒಂದು ಅಂಗವೇ ಆಗಿರುತ್ತದೆ. ನಲವತ್ತು, ಐವತ್ತನೇ ವರ್ಷಗಳಲ್ಲಿ ಪ್ರಾರಂಭವಾದ 'ನೆನಪಿಲ್ಲದಿರುವಿಕೆ' ಮುಂಬರುವ ವರುಷಗಳಲ್ಲಿ ಉಲ್ಬಣಗೊಳ್ಳುತ್ತದೆ. ಒತ್ತಡ, ಆಯಾಸ ಮತ್ತು ಗಮನಕೊಡದಿರುವಿಕೆಗಳು ವಯೋವೃದ್ಧರ ಮರೆವನ್ನು ತಾತ್ಕಾಲಿಕವಾಗಿ ಹೆಚ್ಚಿಸುವಲ್ಲಿ ಸಹಾಯಮಾಡುತ್ತವೆ.

ಮರೆವಿನ ತೊಂದರೆಗಳನ್ನು ಕಡಿಮೆಗೊಳಿಸಲು ಇಲ್ಲಿ ಹೇಳಿದ ಕೆಲವು ತಂತ್ರಗಳನ್ನು ಬಳಸಿಕೊಳ್ಳಬಹುದು.

'ಇದು ನನ್ನ ನಾಲಿಗೆಯ ತುದಿಯಲ್ಲೇ ಇದೆ'

ಎಷ್ಟೋ ಸಲ ನಮ್ಮ ನೆನಪಿನಾಳದಲ್ಲಿ ಹಳೆಯ ಗೆಳೆಯನ ಹೆಸರು ಬೇರೂರಿದ್ದರೂ, ಆತನನ್ನು ಪರಿಚಯಿಸುವಾಗ ಕೂಡಲೇ ನೆನಪಿಗೆ ಬರುವುದಿಲ್ಲ. ಅಥವಾ ಆಗಷ್ಟೇ ನೋಡಿ ಬಂದ ಸಿನೇಮಾದ ಹೆಸರು ಗಂಟಲಲ್ಲೇ ಇದ್ದರೂ,

ಜುಲೈ ೨೦೦೦ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಫಿಲ್ಲಿಸ್ ಶನೀಡರ್‌ರ ''ಮೆಮೊರಿ ಟಿಪ್ಸ್ ಯೂ ವಿಲ್ ನೆವರ್ ಫರ್ಗೆಟ್'' ಎಂಬ ಲೇಖನದ ಕನ್ನಡಾನುವಾದ

ಬಾಯಿಗೆ ಬರುವುದಿಲ್ಲ. ವಿಷಯ ನಾಲಿಗೆ ತುದಿಯಲ್ಲೇ ಕುಳಿತಿದ್ದರೂ, ಹೊರಬರದ ತೊಂದರೆ ಕೊಡುವ ಇಂಥ ಮರೆಗುಳಿತನದ ಪ್ರಸಂಗ ಹೆಚ್ಚೂ ಕಡಿಮೆ ಪ್ರತಿಯೊಬ್ಬನ ಜೀವನದಲ್ಲೂ ಬಂದೇ ಇರುತ್ತದೆ ಎನ್ನುತ್ತಾರೆ ಡಿಬೋರ್ ಬರ್ಕ್ ಎನ್ನುವ ಮನಶ್ಶಾಸ್ತ್ರಜ್ಞ.

ಇಂಥ ಮರೆವುಗಳು ಆ ಶಬ್ದದ ಅರ್ಥದೊಂದಿಗೆ ಬೆಸೆದಂಥವುಗಳಲ್ಲ ; ಕೇವಲ ಉಚ್ಚಾರಣೆಗೆ ಮಾತ್ರ ಸಂಬಂಧ ಪಟ್ಟಂಥವು. ಬರ್ಕನ ಪ್ರಕಾರ, ''ಹೆಚ್ಚಾಗಿ ಇಂಥಾ ಶಬ್ದಗಳು ಅರ್ಥವಿಲ್ಲದ ಒಟ್ಟಾರೊಟ್ಟಿ ಪದಗಳಾಗಿರುತ್ತವೆ''. ಈ ಕೇವಲ ಒಟ್ಟಾರೊಟ್ಟಿ ತನವೇ ಪದಗಳನ್ನು ನೆನಪಿಟ್ಟು ಕೊಳ್ಳುವ ವಿಷಯದಲ್ಲಿ ಸವಾಲನ್ನೊಡ್ಡುತ್ತದೆ.

ಈ ತೊಂದರೆಯನ್ನು ತಡೆಯುವ ಉತ್ತಮ ಮಾರ್ಗ ಯಾವುದೆಂದರೆ, ಪದೇ ಪದೇ ಆ ಮನುಷ್ಯ ಅಥವಾ ವಸ್ತುವಿನ ಹೆಸರನ್ನು ಉಪಯೋಗಿಸುವುದು. ''ಮಾರಾಟಗಾರರು ಮಾಡುವಂತೆ ಜನರನ್ನು ಭೇಟಿಯಾಗುವ ಮುನ್ನ ಅವರ ಹೆಸರನ್ನು ಹಲವಾರು ಬಾರಿ ಹೇಳಿಕೊಳ್ಳುವುದು ಒಳ್ಳೆಯದೆಂದು ನನ್ನಲ್ಲಿಗೆ ಬರುವ ಮಂದಿಗೆ ಸಲಹೆ ನೀಡುತ್ತೇನೆ,'' ಎನ್ನುತ್ತಾರೆ ಲಿಜ್ ಜೆಲಿನ್‌ಸ್ಕಿ ಎಂಬ ಮನಶ್ಶಾಸ್ತ್ರಜ್ಞೆ.

ಹೋಲಿಕೆ ಇರುವ, ಆದರೆ ತಪ್ಪಾದ ಪದಗಳು ತಲೆಯನ್ನು ಹೊಕ್ಕು ಅಲ್ಲೇ ತಳಊರಿಬಿಟ್ಟಾಗ, ಒಳಗಿದ್ದು, ಹೊರಬರದ ಪದಗಳ ಕಾಟ ಮಿತಿಮೀರುವುದು. ಒಮ್ಮೆ ಒಬ್ಬಳು ವಿದ್ಯಾರ್ಥಿನಿಗೆ ಒಂದು ವಿಶಿಷ್ಟವಾದ ಆರಾಮದಾಯಕ ವಾಹನದ ಹೆಸರಾದ 'ವಿನ್ನೆಬ್ಯಾಗೋ' ಎನ್ನುವ ಪದವನ್ನು ನೆನಪಿಸಿ ಕೊಳ್ಳಲು ಪ್ರಯತ್ನಿಸುವಾಗಲೆಲ್ಲಾ, ಅದರ ಬದಲು 'ರೂಟಬ್ಯಾಗೋ' ಎನ್ನುವ ಪದವೇ ನೆನಪಾಗಿ ತೊಂದರೆ ಕೊಟ್ಟ ಕತೆಯನ್ನು ನಿರೂಪಿಸುತ್ತ ಬರ್ಕರವರು ಇಂಥ ಸಂದರ್ಭ ದಲ್ಲಿ ನಿಮ್ಮ ಗಮನವನ್ನು ಬೇರೆಡೆಗೆ ಹರಿಸಿ ಎನ್ನುತ್ತಾರೆ. ''ಅದರ ಬಗ್ಗೆಯೇ ಚಿಂತಿಸುವು ದನ್ನು ಬಿಟ್ಟು ಬಿಟ್ಟರೆ, ತಾನಾಗಿ ಸರಿಯಾದ ಪದ ನೆನಪಿಗೆ ಬರುತ್ತದೆ,'' ಎನ್ನುತ್ತಾರವರು.

''ಬೀಗದ ಕೈಗಳನ್ನು ಎಲ್ಲಿ ಇಟ್ಟೆ?''

ಹಾರ್ವರ್ಡ್‌ನ ಶಾಟ್ಕರ್ ಪ್ರಕಾರ, ''ಯಾವು ದಾದರೂ ವಸ್ತುವನ್ನು ಎಲ್ಲಿ ಇಟ್ಟೆ?'' ಅಥವಾ ''ಈ ಕೋಣೆಗೆ ಏಕೆ ಬಂದೆ?'' ಮುಂತಾದ ಮರೆವು ಉಂಟಾಗಲು ಕಾರಣ, ಆ ಕೆಲಸದ ಬಗ್ಗೆ ಸಾಕಷ್ಟು ಗಮನ ಇಲ್ಲದಿರುವಿಕೆ. ''ನೀವು ಯಾವುದನ್ನೋ ನೆನಪಿಸಿಕೊಳ್ಳಬೇಕು, ಆದರೆ ಅದನ್ನು ನೀವು ಆಳವಾಗಿ ಗಮನಿಸಿಲ್ಲ,'' ಎನ್ನುತ್ತಾ ಈ 'ಸಂಕೇತನ' ಎನ್ನುವ ಪದವನ್ನು ಮತ್ತಷ್ಟು ವಿವರಿಸುತ್ತಾರೆ. ಸರಿಯಾಗಿ ಗಮನಿಸಿದ ಘಟನೆಗಳು ಮಾತ್ರ ನೆನಪಿಸುವಲ್ಲಿ ವಿಶೇಷ ಪಾತ್ರ ವಹಿಸುತ್ತದೆ. ಗಮನವಿಡದೆ ಮಾಡಿದ ಕೆಲಸಗಳು ತೊಂದರೆ ಗಳನ್ನು ಸೃಷ್ಟಿಸುತ್ತವೆ. ಉದಾಹರಣೆಗೆ, ಸಂಭಾಷಣೆ ಯಲ್ಲಿ ಮಗ್ನರಾದ ನೀವು, ನೀವೇನು ಮಾಡುತ್ತಿದ್ದೀರೆಂಬ ಅರಿವಿಲ್ಲದೆ, ನಿಮ್ಮ ಸೆಲ್ ಫೋನನ್ನು ನಿಮ್ಮ ಕಿಸೆಯಲ್ಲಿಟ್ಟರಾದರೆ, ಮತ್ತೆ ಕಪಾಟಿನಲ್ಲಿಟ್ಟ ಆ ಅಂಗಿಯ ಕಿಸೆಯಲ್ಲಿರುವ ನಿಮ್ಮ ಫೋನಿನ ಬಗ್ಗೆ ಬಹುಶಃ ಮರೆತೇ ಬಿಡುವಿರಿ. ''ಇಲ್ಲಿ ನಿಮ್ಮ ನೆನಪಿನ ಬುತ್ತಿ ನಿಮಗೆ ಕೈಕೊಟ್ಟದ್ದಲ್ಲ. ಆದರೆ ನೀವು ನಿಮ್ಮ ನೆನಪಿನ ವ್ಯವಸ್ಥೆಗೆ , ಸರಿಯಾದ ರೀತಿಯಲ್ಲಿ ಮಾಹಿತಿ ಯನ್ನು ಒದಗಿಸಿಲ್ಲ, '' ಎಂದು ಶಾಟ್ಕರ್ ವರ್ಣಿಸುತ್ತಾರೆ.

'ಅನಾಸಕ್ತಿ'ಯ ಕಾರಣದಿಂದ 'ಅರಳು-ಮರುಳು' ಉಂಟಾಗಬಹುದು. ''ಮೂವತ್ತು ವರ್ಷಗಳ ಹಿಂದಿನ ಬೇಸ್‌ಬಾಲ್ ಆಟದ ಗೆಲ್ಲಂಕವನ್ನು ತಪ್ಪಿಲ್ಲದೆ ಹೇಳುವ ಮನುಷ್ಯ, ಒಂದು ಕಾಗದವನ್ನು ಅಂಚೆಪೆಟ್ಟಿಗೆಗೆ ಹಾಕಲು ಮರೆಯಬಹುದು'', ಎನ್ನುತ್ತಾರೆ ಜೆಲಿನ್‌ಸ್ಕಿ. ತಮ್ಮ ಪರಿಸರದ ಬಗ್ಗೆ ಹೆಚ್ಚಿನ ಗಮನ ಕೊಡುವ ಕಾರಣದಿಂದಲೋ ಏನೋ,

ಗಂಡಸರಿಗಿಂತ ಹೆಂಗಸರ ನೆನಪು ಎಷ್ಟೋ ರೀತಿಯಲ್ಲಿ ಉತ್ತಮವಾಗಿರುತ್ತದೆ.

ದರ್ಶನಾದಿ ಸೂಚನೆಗಳಿಂದ (ಅಂದರೆ ಚಿತ್ರಕಲ್ಪನೆ) ಈ ರೀತಿಯ ಮರೆವನ್ನು ತಡೆಗಟ್ಟಬಹುದಾದರೂ , ಮೊದಲು ನಾವು ನೋಡಬೇಕಾದ ವಸ್ತು ಸ್ಪಷ್ಟವಾಗಿ ಕಾಣುವಂತೆ ಸರಿಯಾದ ಸ್ಥಳದಲ್ಲಿ ಇರಬೇಕಾದ್ದು ಅತ್ಯಗತ್ಯ ಎನ್ನುತ್ತಾರೆ ಶಾಕ್ಟರ್, ಉದಾಹರಣೆಗೆ ನೀವು ಊಟದ ಜೊತೆಗೆ ಔಷಧಿಯನ್ನು ತೆಗೆದುಕೊಳ್ಳ ಬೇಕಾಗಿದ್ದಲ್ಲಿ, ಆ ಮಾತ್ರೆಯ ಡಬ್ಬ ಊಟದ ಮೇಜಿನ ಮೇಲೇ ಇರಬೇಕು. ಅದನ್ನು ಔಷಧಿಗಳನ್ನಿರಿಸುವ ಪೆಟ್ಟಿಗೆಯಲ್ಲೇ ಇಟ್ಟರೆ ಅಥವಾ ಮದ್ದು ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಕಾಗದದ ಸುರುಳಿಯಲ್ಲಿ ಬರೆದು ಕಿಸೆಯಲ್ಲಿಟ್ಟುಕೊಂಡರೆ ಖಂಡಿತ ಪ್ರಯೋಜನಕ್ಕೆ ಬಾರದು.

ಇನ್ನೊಂದು ಮಾಮೂಲು ರೀತಿಯ ವಿಸ್ಮರಣೆ ಯಾವುದೆಂದರೆ, ಕೋಣೆಯೊಂದ ರೊಳಗೆ ಬಂದು ಏಕೆ ಬಂದೆನೆಂದು ಸೋಜಿಗ ಗೊಳ್ಳುವುದು. ಹೆಚ್ಚಿನಂಶ ಬೇರೇನೋ ಆಲೋಚನೆ ಬಂದ ಕಾರಣ, ಇದು ಮರೆತು ಹೋಗುತ್ತದೆ. ''ಎಲ್ಲರೂ ಇದನ್ನು ಆಗಾಗ್ಗೆ ಮಾಡುತ್ತಾರೆ. ಈ ಕೋಣೆಗೆ ಬಂದ ಕಾರಣ ವನ್ನರಿಯಬೇಕಾದರೆ, ಪುನಃ ನೀವು ಎಲ್ಲಿಂದ ಹೊರಟು ಈ ಕೋಣೆಗೆ ಬಂದಿರೋ, ಆ ಸ್ಥಳಕ್ಕೇ ಪುನಃ ಹೋಗಬೇಕು. ಆಗ ಬಹುಶಃ ನಿಮಗೆ ನೆನಪಾಗುವುದು'', ಎನ್ನುತ್ತಾರೆ ಜಲಿನ್‌ಸ್ಕಿ

'ನನಗೆ ಹಾಗೆ ನೆನಪಾಗುವುದಿಲ್ಲ'

ಎಷ್ಟೋ ಬಾರಿ ದೋಷಪೂರಿತ ನೆನಪಿ ನಿಂದಾಗಿ 'ಬದಲು ಆರೋಪಣೆ'ಗಳು ಘಟಿಸುತ್ತವೆ. ನೀವು ನಡೆದ ಘಟನೆಯನ್ನು ಚೆನ್ನಾಗಿ ನೆನಪಿಟ್ಟುಕೊಂಡಿದ್ದರೂ, ಅದರ ಆರೋಪಣೆ ಮಾತ್ರ 'ತಪ್ಪಾದ ಮೂಲ'ದ ಮೇಲೆ ಆಗುತ್ತದೆ. ಉದಾಹರಣೆಗೆ, ನಿಮ್ಮ ಗೆಳೆಯನೊಂದಿಗೆ ನೀವು ಅನು[illegible] ರಸಘಳಿಗೆಯು ಜಾನ್‌ನೊಂದಿಗೆ ಆದದ್ದಾ ದರೂ, ಅದು ಜಿಮ್‌ನೊಂದಿಗೆ ಆದದ್ದೆಂಬ ದೃಢ ಅಭಿಪ್ರಾಯವನ್ನು ನೀವು ಹೊಂದು ವಂಥಾದ್ದು.

ಇದೇ ರೀತಿಯಲ್ಲಿ ಜನರು ಪೂರ್ವೋದ್ದೇಶ ವೇನೂ ಇಲ್ಲದೆ ಇತರರ ವಿಷಯವನ್ನು ತಮ್ಮದೇ ಎಂಬಂತೆ ಬಳಸುವುದನ್ನೂ ಕಾಣಬಹು[illegible] ಇದಕ್ಕೆ 'ಅನ್‌ಇನ್‌ಟೆನ್‌ಶನಲ್ ಪ್ಲೇಗಿಯಾ ರಿಸಮ್' (ಅನುದ್ದೇಶಿತ ಕೃತಿ ಚೌರ್ಯ) ಎನ್ನುತ್ತಾರೆ. ಇದಕ್ಕೆ ಒಂದು ಉದಾಹರಣೆ ಹೀಗಿದೆ . ರಾತ್ರಿಯ ಭೋಜನಕೂಟವೊಂದ ರಲ್ಲಿ ಒಬ್ಬ ಗೆಳತಿ ತನಗೆ ಇತ್ತೀಚೆಗೆ ಅಂಗಡಿ ಯೊಂದರಲ್ಲಿ ಆದ ಅನುಭವವನ್ನು ಇಂತು ವರ್ಣಿಸುತ್ತಿದ್ದಳು, ''ತಾಯಿಯೊಬ್ಬಳು ಬೆನ್ನ ಚೀಲದಲ್ಲಿ ಮಗುವನ್ನೆತ್ತಿಕೊಂಡು ಹೋಗು ತ್ತಿದ್ದಳು. ಆ ಮಗುವಿನ ಕೈಯ್ಯ ಮುಷ್ಟಿಯಲ್ಲಿ ಒಂದು ಚೆಂದದ ಆಟಿಕೆ ಇತ್ತು. ಅದು ಖಂಡಿತ ಆ ಮಗುವಿನದಲ್ಲ; ಅದನ್ನು ಆ ಮಗು ಅಂಗಡಿಯ ಸಾಮಾನಿನ ಹಲಗೆಯಿಂದ ಎಳೆದುಕೊಂಡಿತ್ತೆಂದು ತೋರುತ್ತದೆ.''

ಅಷ್ಟರಲ್ಲಿ ಆಕೆಯ ಮಗಳು, ತಾಯಿಯ ವಿವರಣೆಯನ್ನು ತಡೆಯುತ್ತಾ, ''ಅಮ್ಮಾ ಇದು ನನಗೆ ಆದ ಅನುಭವ! ಈ ವಿಷಯವನ್ನು ಕಳೆದ ತಿಂಗಳು ನಾನು ನಿನಗೆ ತಿಳಿಸಿದ್ದೆ,'' ಎಂದು ತಿದ್ದಿದಳು.

ಮಿಥ್ಯಾ ನೆನಪು ಎಂಬುದು ಮನಸ್ಸು ಆಡುವ ಇನ್ನೊಂದು ರೀತಿಯ ಆಟ. ಈ ಮೊದಲು ತಿಳಿಸಿದ 'ಬದಲು ಆರೋಪಣೆ'ಯ ಜಾತಿಗೇ ಇದೂ ಸೇರುವುದು, ತಂದೆಯೊಂದಿಗೆ ಮೀನು ಹಿಡಿಯಲು ಹೋದಾಗ, ತಾನು ಕಂಬದ ಮೇಲಿನಿಂದ ಬಿದ್ದ 'ನೆನಪು' ನಿಮಗೆ ಇದ್ದರೂ, ನಿಜವಾಗಿ ಬಿದ್ದವರು ನೀವಾಗಿರದೆ, ಅಂಥ ಒಂದು ಸನ್ನಿವೇಶವನ್ನು ಸಿನೇಮಾದಲ್ಲಿ ಎಷ್ಟೋ ವರ್ಷಗಳ ಕೆಳಗೆ ನೋಡಿದ ವ್ಯಕ್ತಿ ಮಾತ್ರ

ನೀವಾಗಿರುತ್ತೀರಿ.

ಈ ಮರೆಗುಳಿತನದಿಂದ ತೊಂದರೆಗಳು ಇರುವಂತೆ , ಉಪಕಾರವೂ ಇದೆ. ನಾವು ಕಂಡಿದ್ದು, ಕೇಳಿದ್ದು, ಓದಿದ್ದು ಎಂದು ಎಲ್ಲ ವನ್ನೂ ನೆನಪಿಟ್ಟುಕೊಳ್ಳತೊಡಗಿದರೆ, ಅದರ ಅತಿಯಾದ ಸಂದಣಿಯಿಂದ, ಭಾರದಿಂದ ನಮ್ಮ ಮಿದುಳು ಒದ್ದಾಡಬೇಕಾಗುತ್ತದೆ. ಆರೋಗ್ಯವಂತ ವಿವೇಚನೆಗೆ ಬೇಕಾಗಿರು ವುದು, ಅಗತ್ಯವಾದದ್ದನ್ನು ಮಾತ್ರ ನೆನಪಿಟ್ಟು ಕೊಂಡು, ಬೇಡದ ವಿಷಯಗಳನ್ನು ಹೊರ ಹಾಕುವ ನಮ್ಮ ಸಾಮರ್ಥ್ಯ.

ಈ ವಾದವೇ ನನಗೆ ಧೈರ್ಯನೀಡಿ ದಂತಹುದು. ಈಗ ನನ್ನ ಪತಿ, ನಮ್ಮ ಕಾರು ಎಲ್ಲಿದೆ ಎಂಬುದನ್ನು ಮರೆತರೆ, ಕ್ಷುಲ್ಲಕವಾದ ವಿಷಯಗಳನ್ನು ಬದಿಗೊತ್ತಿ ಅವರಿಗೆ ಅತ್ಯಂತ ಅಗತ್ಯವಾದ ವಿಷಯಗಳನ್ನು ಮಾತ್ರ ಶೇಖರಿಸಿಟ್ಟು ಕೊಳ್ಳುವುದರಲ್ಲಿ ಅವರು ಮಗ್ನರಾಗಿರು ವರೆಂದು ನನಗೆ ನಾನೇ ಹೇಳಿಕೊಳ್ಳುತ್ತೇನೆ. ಎಷ್ಟೋ ವರುಷಗಳ ಕೆಳಗೆ ನಾವು ಇಲ್ಲಿ ಊಟ ಮಾಡಿಯೇ ಇದ್ದೇವೆಂದು ಅವರು ಸಾಧಿಸುವ ರೆಸ್ಟೋರೆಂಟ್ ಮುಂದೆ ಬಂದಾಗ, ನಾನು ಕೇವಲ ಮುಗುಳ್ನಕ್ಕು ಅವರು ಆ ಅಮೋಘ ವಾದ, ಮರೆಯಲಾಗದ ಔತಣದ ನೆನಪಿನಲ್ಲೇ ವಿಹರಿಸಲು ಅನುವು ಮಾಡಿಕೊಡುತ್ತೇನೆ.

ನೆನಪಿನುಗ್ರಾಣದಲಿ ಕಸವೆಷ್ಟು ರಸವೆಷ್ಟೋ!
ಅನುನಯದಿ ಸ್ಮೃತಿಗೆ ಬರದಾಗ ಹಳೆ ಚಿತ್ರ, ನಿ-
ನ್ನಿನ ಘಟನೆ, ಚಿಂತೆ ತಳೆಯದಿರು; ರಕ್ಷಿಸೆ ನಿ-
ನ್ನನು ಮಿದುಳು ಹೂಡುವಾ ತಂತ್ರವದು ಅತ್ರಿಸೂನು

ಸ್ಮರಣ ಶಕ್ತಿಯ ಉತ್ತೇಜಕಗಳು

ಜಿನ್ಕ್‌ಗೋ ಬಿಲೋಬಾ :- 'ಈ ಔಷಧೀಯ ಸಸ್ಯ ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತದೆ ಎಂಬುದಕ್ಕೆ ಹಲವಾರು ಪುರಾವೆಗಳಿವೆ' ಎನ್ನುತ್ತಾರೆ ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಲಿಜ್ ಜಿ ಲೆನ್‌ಸ್ಕಿ. ಇದರ ಉಪಯೋಗ ದಿಂದಾಗಿ ದೇಹದಲ್ಲಿ ಶಕ್ತಿ ಬಂದಂತೆನಿಸಿ, ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡಲು ಸಾಧ್ಯವಾಗುವುದು.

ಕೆಫೈನ್ :-ನೆನಪಿಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಕೊಂಡಿರುವಾಗ ಒಂದೆರಡು ಕಪ್ ಕಾಫಿ ಸೇವಿಸುವುದರಿಂದ, ಅದು ಪೂರಕವಾಗುವುದು.

ನಿದ್ದೆ :- ಬೇಕಾದಷ್ಟು ನಿದ್ದೆ ಇಲ್ಲದೆ ದಣಿವಾದಾಗಲೂ ಮರೆವು ಸಹಜ, ಎನ್ನುತ್ತಾರೆ ಜಲಿನ್‌ಸ್ಕಿ. ಹಾಗೆಯೇ ನಿದ್ದೆಗಾಗಿ ಮದ್ದು ತೆಗೆದುಕೊಂಡ ಮರುದಿನವೂ ನಿತ್ರಾಣ ಮತ್ತು ಮರೆವು ಕಂಡು ಬರುತ್ತವೆ ಎಂದು ಎಚ್ಚರಿಸುತ್ತಾರೆ.

ವ್ಯಾಯಾಮ :- ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರಯೋಗ ಶಾಲೆಯಲ್ಲಿ ನಡೆಸಿದ ಸಂಶೋಧನೆಯಿಂದ ತಿಳಿದು ಬಂದ ಅಂಶ ಟ್ರೆಡ್ ಮಿಲ್‌ನಲ್ಲಿ ಚುರುಕಾಗಿ ನಡೆದು ವ್ಯಾಯಾಮ ಮಾಡುವ ಪ್ರಾಣಿಗಳ ಸ್ಮರಣಶಕ್ತಿ ಉತ್ತಮ. ''ನಿತ್ಯವೂ ಕ್ರಮವಾಗಿ ವ್ಯಾಯಾಮ ಮಾಡುವವರು ಚೆನ್ನಾಗಿ ಚಿಂತಿಸಬಲ್ಲರು, ಹಾಗೆಯೇ ವರ್ಷಗಳ ಪರ್ಯಂತ ಒಳ್ಳೆಯ ಸ್ಮರಣ ಶಕ್ತಿಯನ್ನು ಹೊಂದಬಲ್ಲರು'' ಎನ್ನುತ್ತಾರೆ ಸಂಶೋಧಕ ಕಾರ್ಲ್ ಕಾಟ್‌ಮ್ಯಾನ್.

ವಸಂತ ಋತುವಿನ ದಿವಸ...

ವಸಂತ ಬಂದ ಋತುಗಳ ರಾಜ ತಾ ಬಂದ!

ಶೋಭಾ ಪ್ರಮೋದ್
ಮಹಾಲಕ್ಷ್ಮೀ ಏಜೆನ್ಸೀಸ್
ಮಹಂಗಾಂವ್
ಮಹಾರಾಷ್ಟ್ರ-೪೦೨೧೦೪

ಮಾರ್ಚ್ ತಿಂಗಳ ದಿನ. ಕಥೆಯ ಪ್ರಾರಂಭವನ್ನು ಹೇಗೆ ಮಾಡಬಾರದು. ಆದರೆ, ಈ ಕಥೆಯೇ ಹೀಗಿದೆ. ಸಾರಾಳು ಬಿಲ್ಲನ್ನು ನೋಡಿ ಅಳುತ್ತಿದ್ದಳು. ನ್ಯೂಯಾರ್ಕಿನ ಈ ಹುಡುಗಿ ಶ್ರೀಮಂತಳಲ್ಲ; ಕಾಲೇಜಿನಲ್ಲಿ ಕಲಿತವಳೂ ಅಲ್ಲ. ಆಕೆ ಶಾರ್ಟ್‌ಹ್ಯಾಂಡ್ ಕೂಡ ಕಲಿತಿರದ ಕಾರಣಕ್ಕಾಗಿ, ದೊಡ್ಡ ಕಂಪನಿಯಲ್ಲಿ ನೌಕರಿ ಸಿಕ್ಕಿರಲಿಲ್ಲ. ಹಾಗಾಗಿ, ತನ್ನ ಗಲ್ಲಿಯಲ್ಲಿದ್ದ, ಜರ್ಮನ್ ರೆಸ್ಟೋರೆಂಟ್ ಒಂದರಲ್ಲಿ, ಟೈಪಿಸ್ಟ್ ಆಗಿ, ಕೆಲಸಕ್ಕೆ ಸೇರಿಕೊಂಡಳು. ಕಾರಣ, ಅದೊಂದೇ ಕೆಲಸವನ್ನು ಆಕೆ ಮಾಡಬಲ್ಲವಳಾಗಿದ್ದಳು.

ಆ ಜರ್ಮನ್ ರೆಸ್ಟೋರೆಂಟ್‌ದಲ್ಲಿ, ಟೈಪಿಸ್ಟ್ ನೌಕರಿ ದೊರಕಿಸುವುದೆಂದರೆ, ಯಶಸ್ಸೇ ಆಗಿತ್ತು. ಅವಳ ಮನೆಯ ಸಮೀಪವೇ ಇತ್ತು. ಮೆನುಕಾರ್ಡ್, ಬಿಲ್‌ಗಳನ್ನು ಕಂಡರೆ ಗಿರಾಕಿಗಳಿಗೆ ಓದಲಿಕ್ಕೆ ಆಗದಷ್ಟು, ಅಂಕು-ಡೊಂಕು ಅಕ್ಷರಗಳಿಂದ ಅವನ್ನು ಬರೆಯುತ್ತಿದ್ದರು. ಇದರಿಂದ ಗಿರಾಕಿಗಳಿಗೆ ಗೊಂದಲವಾಗುತ್ತಿತ್ತು. ಆದರೆ ಸಾರಾ, ಕೆಲಸ ವಹಿಸಿಕೊಂಡ ಬಳಿಕ, ಟೈಪ್‌ರೈಟರ್‌ನಿಂದ ಸುಂದರವಾಗಿ, ಟೈಪ್ ಮಾಡುತ್ತಿದ್ದಳು. ಗಿರಾಕಿಗಳಿಗೆ ಇದರಿಂದ ಸಂತೋಷವಾಗಿ, ಆ ರೆಸ್ಟೋರೆಂಟ್‌ದಲ್ಲಿ ಬರುವವರ ಸಂಖ್ಯೆ ಹೆಚ್ಚಾಗಿ, ಮಾಲೀಕರಿಗೂ ಸಂತೋಷವಾಗಿ, ಆಕೆಯ ನೌಕರಿಯು ಖಾಯಂ ಆಯಿತು.

ದಿನಾಲೂ ಬದಲಾಗುತ್ತಿರುವ ತಿಂಡಿ-ತಿನಿಸುಗಳ ಕಾರ್ಡ್‌ನ್ನು ಆಕೆ ಆಕರ್ಷಕವಾಗಿ, ಟೈಪ್ ಮಾಡಿಡುತ್ತಿದ್ದಳು. ಒಂದು ವೇಳೆ ಏನು ತಿಂದರೋ ಅದು ತಿಳಿಯದೆ ಹೋಗಬಹುದು. ಆದರೆ, ಆ ಕಾರ್ಡ್ ನೋಡಿ, ತಾವೇನು ತಿಂದಿರಬೇಕೆಂದು ಗಿರಾಕಿಗಳು ತಿಳಿಯುವಷ್ಟು ಸುಂದರವಾಗಿ, ಆಕೆ ಟೈಪ್ ಮಾಡುತ್ತಿದ್ದಳು. ''ಓವರ್‌ಕೋಟ್ ಹಾಗೂ ಛತ್ರಿಗಳನ್ನೂ ಗಿರಾಕಿಗಳೇ ಕಾದಿಡಬೇಕು'' ಎಂಬ ಸಂದೇಶವನ್ನೂ ಟೈಪ್ ಮಾಡುತ್ತಿದ್ದಳು. ಇಪ್ಪತ್ತೊಂದು ಟೇಬಲಿನ ಮೇಲಿರುವ, ಬೇರೆ ಬೇರೆ ತಿಂಡಿ, ತಿನಿಸುಗಳ ಕಾರ್ಡ್ ಹಾಗೂ ಬಿಲ್‌ನ್ನು ಆಕೆ ಕೂಡಲೇ ತಯಾರು ಮಾಡುತ್ತಿದ್ದ ಕಾರಣ, ಆ ಜರ್ಮನ್ ರೆಸ್ಟೋರೆಂಟ್ ಎಲ್ಲರಿಗೆ ಪ್ರಿಯವಾದ ಸ್ಥಳವಾಯಿತು.

ತಿಂಡಿ-ತಿನಿಸುಗಳಲ್ಲಿ ಬದಲಾವಣೆಯಾದಾಗ ಸಾರಾಳು, ಹೊಸದಾಗಿ ಟೈಪ್ ಮಾಡುತ್ತಿದ್ದಳು. ಆಕೆಗೆ, ದಿನಕ್ಕೆ ಮೂರುಸಲ ಊಟ ಕೊಡುತ್ತಿದ್ದರು. ರಾತ್ರಿಯ ಊಟ, ನಾಳೆ ಬೆಳಿಗ್ಗೆ ತಿಂಡಿಗಳಲ್ಲಿ ಸೂಚನೆ ಕೊಡಲಾಗುತ್ತಿತ್ತು. ಮರುದಿನ ಆರಂಭವಾದ ಕೂಡಲೇ, ಪ್ರತ್ಯೇಕ ಟೇಬಲಿನ ಮೇಲೆ, ತಿಂಡಿಗಳ ಕಾರ್ಡ್ ಹಾಜರ್ ಇರುತ್ತಿತ್ತು. ಹೀಗೆ, ಸಾರಾಳ ನೌಕರಿಯು , ಉತ್ತಮ ರೀತಿಯಿಂದ ಸಾಗಿತ್ತು.

ವಸಂತ ಮಾಸವು ಪ್ರಾರಂಭವಾಯಿತು. ಆದರೆ ಇನ್ನೂ ಚಳಿಗಾಲವು ಹೋಗಿರಲಿಲ್ಲ. ಜನರು ವಸಂತ ಮಾಸದ ಸ್ವಾಗತಕ್ಕೆ ಸಿದ್ಧತೆಯನ್ನು ನಡೆಸುತ್ತಿದ್ದರು.

ಒಂದು ದಿನ, ಸಾರಾಳು, ತನ್ನ ಮನೆಯ ಕಿಟಕಿಯಲ್ಲಿ ಕುಳಿತುಕೊಂಡು, ಕ್ಯಾಲೆಂಡರ್ ನೋಡಿದಳು. ಚಳಿ ಇನ್ನೂ ಹೋಗಿರಲಿಲ್ಲ- ''ನೀನು ಉದಾಸೀನಳಾಗಿ, ಹೀಗೆ ಕುಳಿತು

* ಓ ಹೆನ್ರಿ ಕಥೆಯ ಭಾವಾನುವಾದ

ಕೊಳ್ಳದಿರು. ಮುಂದೆ, ನಿನ್ನ ಬಾಳಿನಲ್ಲಿಯೂ, ವಸಂತಮಾಸವು ಬರುತ್ತದೆ'' ಎಂದು, ಆ ಕ್ಯಾಲೆಂಡರ್ (ಆಕೆಗೆ) ಹೇಳುವಂತೆ ಆಕೆಗೆ ಭಾಸವಾಯಿತು.

ಕಳೆದ ವರ್ಷ, ಇದೇ ದಿನ, ಆಕೆ, ತನ್ನೂರಿಗೆ ಹೋಗಿದ್ದಳು. ಎರಡು ವಾರ, ''ಸನೀಬುರ್'' ಎಂಬ ಫಾರ್ಮ್‌ದಲ್ಲಿ, ಫ್ರಾಂಕ್ಲಿನ್‌ನ ಜಮೀನು ನೋಡಲು ಹೋಗಿದ್ದಳು. ಆತನ ಮಗ, ವಾಲ್ಟೆರ್‌ನ ಪ್ರೇಮದ ಪಾಶಕ್ಕೆ ಸಿಲುಕಿದಳು! ವಾಲ್ಟೆರನು, ಆಕೆಯ ತುರುಬಿನಲ್ಲಿ ''ಡೆಕೆಲಿಯನ್'' ಎಂಬ ಹೂವಿನ ಗುಚ್ಛವನ್ನು ಮುಡಿಸಿದ್ದನು. ವಸಂತಮಾಸದಲ್ಲಿ, ಅವರಿಬ್ಬರೂ, ವಿವಾಹವಾಗುವವರಿದ್ದರು. ಎರಡು ವಾರಗಳ ಬಳಿಕ, ಸಾರಾಳು ತನ್ನ ನೌಕರಿಗೆ ಹಿಂತಿರುಗಿದಳು. ವಾಲ್ಟೆರನು ಆಧುನಿಕ ಕೃಷಿಕನಾಗಿದ್ದ. ಆತನ ಜಮೀನಿನ ಬಳಿಯಿರುವ ಹಾಲಿನ ಡೈರಿಯಲ್ಲಿ, ಟೆಲಿಫೋನ್ ವ್ಯವಸ್ಥೆಯಿತ್ತು. ಒಂದು ಬೆಳೆಯನ್ನು ತೆಗೆದಾದ ಬಳಿಕ, ಅದೇ ಜಮೀನಿನಲ್ಲಿ ಯಾವ ಬೆಳೆಯನ್ನು ಬೆಳೆಸಬೇಕು? ಎಂದು ಆತನು, ಕೆನಡದ ಜಮೀನಿನ ಬಗ್ಗೆ ಪೂರ್ಣ ಜ್ಞಾನವನ್ನು ಹೊಂದಿದ್ದು, ಎಲ್ಲರಿಗೂ ಸರಾಗವಾಗಿ ಹೇಳುವಷ್ಟು ಅವನಲ್ಲಿ ಅನುಭವವಿತ್ತು.

ಸಾರಾ ಇದೆಲ್ಲ ನೆನಪಿನಿಂದ ತಲ್ಲೀನಳಾಗಿರುವಾಗ, ಬಾಗಿಲ ಕರೆಗಂಟೆ ಬಾರಿಸಿದ್ದರಿಂದ, ಬಾಗಿಲು ತೆರೆದಳು. ಅಲ್ಲಿ ವೇಟರ್‌ನು ನಿಂತಿದ್ದು, ನಾಳೆ, ಯಾವ ತಿಂಡಿಗಳ ಕಾರ್ಡ್ ತಯಾರಿಸಬೇಕೆಂದು ತಿಳಿಸಿ ಹೋದ. ಸಾರಾಳು, ತಿಂಡಿ-ತಿನಿಸುಗಳ ಕಾರ್ಡ್‌ನ್ನು ಟೈಪ್ ಮಾಡತೊಡಗಿದಳು. ಇಪ್ಪತ್ತೊಂದು ಟೇಬಲಿನ ಮೇಲೆ, ಕಾರ್ಡ್ ತಯಾರಿಸಲು, ಒಂದೂವರೆ ತಾಸು ಹಿಡಿಯಿತು. ಇಂದು ಬಂದಿರುವ, ಆ ಲಿಸ್ಟಿನಲ್ಲಿ, ನಾಳೆಯ, ತಿಂಡಿಗಳ ಬದಲಾವಣೆಯು ವೈವಿಧ್ಯಮಯವಾಗಿದ್ದರಿಂದ, ಆಕೆಯ ಬೆರಳುಗಳು, ಯಂತ್ರದಂತೆ, ಪ್ರತ್ಯೇಕ ತಿಂಡಿಯನ್ನು ಯೋಗ್ಯ ಕಾಲಂನಲ್ಲಿಯೇ ಟೈಪ್ ಮಾಡುತ್ತಿದ್ದುವು. ಆ ಕಾರ್ಡ್ ಆಕರ್ಷಕವಾಯಿತಾದರೂ, ಆಕೆಯ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯಲಾರಂಭಿಸಿತು.

ತನ್ನ ತಲೆಯನ್ನು, ಕೆಲ ಕ್ಷಣ, ಟೈಪ್‌ರೈಟರ್ ಮೇಲಿಟ್ಟು ಕಣ್ಮುಚ್ಚಿ, ವಾಲ್ಟರ್‌ನ ನೆನಪಿನ ಗಣಿಯೊಳಗೆ ಜಾರಿಕೊಂಡಳು. ಎರಡು ವಾರಗಳಿಂದ ಆತನ ಪತ್ರವಿರಲಿಲ್ಲ. ಆಕೆ ತನ್ನ ಹೊಸ ವಿಳಾಸವನ್ನು, ಅದರಲ್ಲಿ ಬರೆದಿದ್ದಳು. ತಿಂಡಿಗಳ ಕಾರ್ಡ್‌ನಲ್ಲಿ, ''ಡಂಡೇಲೀಯನ್'' ಹೂವಿನ ಪದಾರ್ಥದ ಉಲ್ಲೇಖವಿತ್ತು. ಜೊತೆಗೆ ಮೊಟ್ಟೆಗಳ ವಿವಿಧ ಪ್ರಕಾರದ ತಿನಿಸುಗಳನ್ನೂ ಬರೆಯಲಾಗಿತ್ತು. ಈ ಹೂವು, ವಾಲ್ಟರ್‌ನಿಗೆ ಬಹು ಪ್ರಿಯವಾಗಿತ್ತು. ಆಕೆ, ಆತನೊಂದಿಗೆ ಕಳೆದ ದಿನಗಳ ನೆನಪುಗಳನ್ನೇ ಹೊತ್ತು ತಂದಿತು. ವೇಟರ್‌ನು ಪುನಃ ಬಂದು, ಬೇರೆ ತಿನಿಸುಗಳ ಹೆಸರನ್ನು ಬರೆಯುವಂತೆ ಹೇಳಿ ಹೋದ. ವಸಂತ ಋತು, ಬಹಳ ವಿಚಿತ್ರವಾದುದು! ಅದು, ಪ್ರೇಮಿಗಳನ್ನು ವ್ಯಾಕುಲಗೊಳಿಸುತ್ತದೆ. ವಾಲ್ಟರ್‌ನಿಗೆ, ಸಂದೇಶವೊಂದನ್ನು, ಕಳುಹಿಸಬೇಕೆಂದು, ಆಕೆ ಬಯಸಿದಳು. ಕಣ್ಣೀರನ್ನು ಒರೆಸಿಕೊಂಡು ತನ್ನದೇ ಗುಂಗಿನಲ್ಲಿದ್ದು, ಟೈಪ್ ಮಾಡಿದಳು.

ಕೆಲದಿನಗಳ ಹಿಂದೆ, ಕೊರಿಯರ್‌ನಲ್ಲಿ ಸಾರಾಳು, ವಾಲ್ಟರ್‌ನಿಗೆ ತನ್ನ ಮನೆ ವಿಳಾಸವನ್ನು ಕಳುಹಿಸಿದ್ದಳು. ಆತನಿಂದ ಪತ್ರಬಾರದಾದಾಗ, ಬಹಳ ವ್ಯಾಕುಲಗೊಂಡಳು. ತಿಂಡಿ-ತಿನಿಸುಗಳ ಆ ಕಾರ್ಡಿನಲ್ಲಿ ಆಕೆಗೆ ಪ್ರಿಯವಾದ ''ಡಂಡೇಲಿಯನ್'' ಪಲ್ಯವನ್ನು ಓದಿ, ಇನ್ನಷ್ಟು ದುಃಖಿತಳಾಗಿ, ವಾಲ್ಟರ್‌ನು, ಆಕೆಗೆ ಮುಡಿಸಿದ ಹಾಗೂ ಕೈಗೆ ನೀಡಿದ ಆ ಹೂವಿನ ಗುಚ್ಛದ ನೆನಪು, ಪುನಃ ಪುನಃ ಒತ್ತರಿಸಿ ಬಂತು.

ಆ ಕಟ್ಟಡದ ಮುಖ್ಯ ಬಾಗಿಲಿನ ಕರೆ ಗಂಟೆಯು ಬಾರಿಸಿತು. ಯಾರಿರಬಹುದೆಂದು ಅಳುಕುತ್ತ ಆಕೆ ಬಾಗಿಲು ತೆರೆದಳು. ಆಶ್ಚರ್ಯ ಕಾದಿತ್ತು!! ಆಕೆಯ ಪ್ರಿಯತಮ ವಾಲ್ಟರ್‌ನು ಬಂದಿದ್ದನು!! -''ಅರೆ! ನೀನು ನನಗೆ ಒಂದು ಪತ್ರ ಕೂಡ ಬರೆಯದೆ ಹೇಗೆ ಬಂದೆ? ಎಷ್ಟೋ ದಿನಗಳಿಂದ, ನಾನು, ನಿನ್ನ ಪತ್ರದ ದಾರಿಯನ್ನೇ ಕಾಯುತ್ತಿದ್ದೇನೆ'' ಎಂದಳಾಕೆ.

-''ನ್ಯೂಯಾರ್ಕ್ ದೊಡ್ಡ ಶಹರವೇ ಸರಿ. ನಾನು ಹಿಂದಿನ ವಾರದಲ್ಲಿ ಬಂದಾಗ, ನಿನ್ನ ಹಳೆಯ ವಿಳಾಸದಲ್ಲಿ ನಿನ್ನನ್ನು ಹುಡುಕಿದೆ. ಆದರೇನೂ ತಿಳಿಯಲಿಲ್ಲ. ನಿನ್ನ ಹೊಸ ವಿಳಾಸ ತಿಳಿಯದ ಕಾರಣ, ನಿನ್ನನ್ನು ಬಹಳ ಹುಡುಕುತ್ತಿದ್ದೆ'' ಎಂದ ವಾಲ್ಟರ್.

-''ನಾನು ಕೆಲ ದಿನಗಳ ಹಿಂದೆ, ಹೊಸ ವಿಳಾಸವನ್ನು ಪತ್ರದಲ್ಲಿ ಬರೆದಿದ್ದೇನೆ''.

-''ಆ ಪತ್ರ ನನಗೆ ಇನ್ನೂ ತಲುಪಿಯೇ ಇಲ್ಲ'' ! ''ಹಾಗಾದರೆ, ಈಗ ಹೇಗೆ ನನ್ನ ವಿಳಾಸ ದೊರೆಯಿತು''? ಎಂದಳಾಕೆ.

''ನಿನ್ನೆ ಸಂಜೆ, ಇಲ್ಲಿಯ ಶುಲೇನಬರ್ಗ್ ರೆಸ್ಟೋರೆಂಟ್‌ದಲ್ಲಿ ತಿಂಡಿ ತಿನ್ನಲು ಹೋಗಿದ್ದೆ. ತಿಂಡಿ-ತಿನಿಸುಗಳ ಹಾಗೂ ನನ್ನ ಬಿಲ್ಲಿನ ಕಾರ್ಡ್ ಕಂಡೆ. ಕೂಡಲೇ, ಆ ಮಾಲೀಕರನ್ನು ಭೇಟಿಯಾಗಿ, ನಿನ್ನ ವಿಳಾಸ ಗೊತ್ತು ಮಾಡಿಕೊಂಡೆ''.

''ನನಗೆ ನೆನಪಿದೆ. ಕ್ಯಾಬೇಜ್ ಸಲಾಡ್ ಕೆಳಗೆ, ಡಂಡೇಲಿಯನ್ ತಿಂಡಿಯ ಉಲ್ಲೇಖ ಬರೆದಿದ್ದೆ'' ಎಂದಳು ಸಾರಾ.

''ನೀನು ಟೈಪ್ ಮಾಡುವಾಗ, ದೊಡ್ಡ ''W'' ನಿನ್ನ ಲೇಖನದಲ್ಲಿ, ಯಾವಾಗಲೂ ಇರುತ್ತೆ ಹಾಗೂ ಡೆಂಡೆಲಿಯನ್‌ದ ಉಲ್ಲೇಖವೂ ಇರುತ್ತದೆ ಇದು ನನಗೆ ಚೆನ್ನಾಗಿ ಗೊತ್ತು'' ಎಂದನು ವಾಲ್ಟರ್.

''ಆದರೆ ವಾಲ್ಟರ್, ನಾನು ಡೆಂಡೆಲಿಯನ್ ಖಾದ್ಯ ಪದಾರ್ಥದ ಟೈಪ್ ಮಾಡುವಾಗ, ''W'' ಬರೆದಿದ್ದು, ನೆನಪಾಗುತ್ತಿಲ್ಲವಲ್ಲ''?

ಕೂಡಲೇ ವಾಲ್ಟರನು, ತನ್ನ ಜೇಬಿನಲ್ಲಿದ್ದ ಕಾರ್ಡ್ ತೋರಿಸಿದನು. -''ಇಲ್ಲಿ ನೋಡು'' ಡಂಡೇಲಿಯನ್ಸ್ ವಿಥ್ ಬೋಯ್ಲ್ಡ್ ರಾಗ'' ಎಂದು ಟೈಪ್ ಮಾಡುವಾಗ, ನೀನು ಹೀಗೆ ಟೈಪ್ ಮಾಡಿರುವೆ. ''ಡಿಯರೆಸ್ಟ್ ವಾಲ್ಟರ್, ವಿಥ್ ಹಾರ್ಡ್ ಬೋಯ್ಲ್ಡ್ ರಾಗ'' !!



ವೈದ್ಯಕೀಯ ವಿದ್ಯಾಮಾನಗಳು

ಮುದ್ದಿನ ಪ್ರಾಣಿಗಳಿಗೆ ಅತಿ ಮುದ್ದು ಮಾಡದಿರಿ

ಗೀತಾನಾಸತ್ಯ
೨೯,೫ನೇ ಮುಖ್ಯ ರಸ್ತೆ ಕೊನೆ
ಸಂಜಯನಗರ
ಬೆಂಗಳೂರು-೫೬೦ ೦೯೪

ಆಸ್ಟ್ರೇಲಿಯಾದ ಸಂಶೋಧನಕಾರರ ಊಹೆಯಂತೆ ಬೆಕ್ಕಿನ ಸಂಗಡ ಅತಿ ಮುದ್ದು, ಜತೆಯಾಗಿ ಮಲಗುವಿಕೆಯ ದೆಸೆಯಿಂದ ಅಂಥ ಮಕ್ಕಳಲ್ಲಿ ಮುಂದೆ ರುಮಾಟಾಯಿಡ್ ಆರ್ತ್ರೈಟಿಸ್ ಅಥವಾ ಕೀಲು ಸಂದಿಗಳ ಉರಿಯೂತ ಬರುವ ಸಂಭವವಿದೆ. ಈ ಉರಿಯೂತಕ್ಕೆ ಸೋಂಕು ಕಾರಣ. ಈ ಕಾಯಿಲೆಯ ೧೨೨ ರೋಗಿಗಳನ್ನು ರಾಯಲ್ ಅಡಿಲೇಡ್ ಆಸ್ಪತ್ರೆಯ ರುಮಾಟಾಲಜಿ ವಿಭಾಗ ನಿರ್ದೇಶಕ ಪ್ರೊ. ಲಿಸ್ ಕ್ಲೀ ಲ್ಯಾಂಡ್ ಹಾಗೂ ಎಪಿಡೆಮಿಯಾಲಜಿ ವಿಭಾಗ ಮುಖ್ಯಸ್ಥ ಕೊಲಿನ್ ಬಾಂಡ್‌ರವರು ಪರೀಕ್ಷೆಗೊಳಪಡಿಸಿದರು. ಬಂದ ಫಲಿತಾಂಶದ ವರದಿ ಪ್ರಕಾರ ಬೆಕ್ಕುಗಳು ಕೀಲುರಿಯೂತ ಸೋಂಕುಕಾರಕಗಳ ವಾಹಕವಾಗುತ್ತವಂತೆ. ಸುಮಾರು ೧೦ ರಿಂದ ೧೫ ವಯೋಮಾನದಲ್ಲಿ ಬೆಕ್ಕಿನ ಸಹವಾಸದಲ್ಲಿದ್ದವರಲ್ಲಿ ಉಳಿದ ಮೂಳೆ ಸವಕಳಿ ಕೀಲು ನೋವಿನವರಿಗಿಂತ (ಆಸ್ಟಿಯೋ ಆರ್ತ್ರೈಟಿಸ್) ಇಮ್ಮಡಿಯಾಗಿ ರೋಗ ಸಂಭವತೆ ಪತ್ತೆ ಮಾಡಲಾಗಿದೆ.

ಕಶೇರುಕಾಘಾತವಾದವರಿಗೊಂದು ಆಶಾಕಿರಣ

ಅರ್ಬುದ ವಿರುದ್ಧ ಬಳಕೆಯಾಗುವ ಮದ್ದೊಂದು ಪಕ್ಷಾಘಾತ(ಪ್ಯಾರಾಲಿಸಿಸ್) ರೋಗಿಗಳಲ್ಲಿ ಪರಿಣಾಮಕಾರಿ ಎಂಬ ಸಂಗತಿ ಬೆಳಕಿಗೆ ಬಂದಿದೆ. ಒಂದು ವೈಜ್ಞಾನಿಕ ಪತ್ರಿಕೆ ವರದಿ ಪ್ರಕಾರ ೨೬ ಇಲಿಗಳಿಗೆ ನಡೆಯಲಾಗದಂತೆ ಮಾಡಿದರೂ ೨೪ ಇಲಿಗಳು ಮದ್ದಿನ ಪ್ರಯೋಗಾನಂತರ ನಡೆದಾಡುವ ಚೈತನ್ಯವನ್ನು ಕೇವಲ ೧೨ ದಿವಸಗಳಲ್ಲಿ ಪಡೆದವು. ಈ ಮದ್ದಿನ ಹೆಸರು CM ೧೦೧. ಉಳಿದ ೨ ಇಲಿಗಳು ಸತ್ತವು. ೧೪ ಇಲಿಗಳಿಗೆ ಅಂಥ ತೊಂದರೆ ಉಂಟುಮಾಡಿ ಮದ್ದು ಕೊಡದೇ ನಿರೀಕ್ಷಿಸಲಾಗಿ ಅವುಗಳ ಪೈಕಿ ೧೧ ಸತ್ತವು. ಉಳಿದ ೩ ತಮ್ಮ ತೊಂದರೆಯಿಂದ ಹೊರ ಬರಲಿಲ್ಲ. 'ಈ ಸಂಶೋಧನೆ ಉತ್ತೇಜನಕಾರಿಯಾಗಿದೆ' ಎನ್ನುತ್ತಾರೆ ಅಮೆರಿಕ ಕಶೇರು ಕಾಘಾತ ಸಂಘದ ಮುಖ್ಯಸ್ಥ ಥೋಮಸ್ ಕೌಂಟಿ(ಜೂ). ಆದಾಗ್ಯೂ ಈ ಮದ್ದು ಬಳಕೆಗೆ ಪೂರ್ವದಲ್ಲಿ ಅನೇಕ ಕೆಲಸ ಬಾಕಿ ಇದೆ ಎಂದವರು ಒಪ್ಪಿಕೊಂಡರು. ಮದ್ದಿನ ಪ್ರಯೋಗ ಈಗಾಗಲೇ ಆರಂಭಗೊಂಡಿದೆ.

ದೊಡ್ಡ ಕೀಲಿನ ನೋವಿಗುಂಟು ಪರಿಹಾರ

ಸಣ್ಣಕೀಲುಗಂಟಿನ ನೋವು ಬರುತ್ತದೆ, ಹೋಗುತ್ತದೆ. ಆದರೆ ದೊಡ್ಡ ಕೀಲುಸಂದಿನ ನೋವು ಸದಾ ಉಳಿದು ಕೊಳ್ಳುತ್ತದೆ. ಭುಜ ಕೀಲು, ಮೊಣಕ್ಕೈ, ನಡುಕೀಲು, ಮಂಡಿಯು ಇಂಥ ತ್ರಾಸಕ್ಕೆ ಒಳಪಡುತ್ತದೆ. ಕೀಲು ಕೆಲಸ ಮಾಡಲಿ, ಬಿಡಲಿ, ಸದಾ ನೋವು ಕಾಡುತ್ತದೆ. ಈ ದೊಡ್ಡ ಕೀಲುಗಳಲ್ಲಿ ಕೀಲೆಣ್ಣೆ ಯಂಥ ದ್ರವ ಶೇಖರಗೊಳ್ಳುವ ಚೀಲಗಳಿಗೆ ಆಘಾತ, ಸೋಂಕು ತಗಲಿದರೆ ಉರಿಯೂತಕ್ಕೊಳಗಾಗುತ್ತದೆ. ಅಂಥ ನೋವು ಬಂದ ಪ್ರಥಮದಲ್ಲಿ ಚಿಕಿತ್ಸೆಗೊಳಪಡಿಸಿದರೆ ಚಿಕಿತ್ಸೆ ಸಫಲ. ಅಮೆರಿಕದ ಕ್ರೀಡಾ ವೈದ್ಯತಜ್ಞ ವಾಡೆ ಎ. ಲಿಲ್ಲೆ

ಮೇ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ನ್ಯೂಸ್ ಫ್ರಂ ದಿ ವರ್ಲ್ಡ್ ಆಫ್ ಮೆಡಿಸಿನ್" ಎಂಬ ಲೇಖನದ ಅನುವಾದ

ಗಾರ್ಡ್ ಪ್ರಕಾರ ಅಂಥ ತೊಂದರೆಗೀಡಾದ ಕೀಲಿನ ಚಿಕಿತ್ಸೆಗೆ ಸೋಂಕು ನಿವಾರಕ, ಉರಿಯೂತ ಶಾಮಕ ಹಾಗೂ ಒರ್ಫಾ ಉಪಚಾರ ಶೀಘ್ರದಲ್ಲಿ ಒದಗಿಸಬೇಕು. ಒಂದುವೇಳೆ ಅಂಥ ಚಿಕಿತ್ಸೆಗೆ ಬಗ್ಗದಿದ್ದರೆ ಈ ನೋವು ಶಾಶ್ವತವಾಗಿ ಉಳಿದು ಬಿಡುವ ಅಪಾಯವಿದೆ.

ವಸಡುಗಳಿಗೆ ಸವಿಸುದ್ದಿ

ವಯಸ್ಕರಲ್ಲಿ ಕಾಡುವ ವಸಡು ಬಾಧೆ ಮತ್ತು ಉದುರುವ ಹಲ್ಲು ತಡೆಗೆ ಹೊಸಗುಳಿಗೆಯೊಂದನ್ನು ನುಂಗಿದರಾಯಿತು. ರೋಗಕಾರಿ ಬ್ಯಾಕ್ಟಿರಿಯಾದೊಂದಿಗೆ ಬಾಯಿಯು ಸದಾ ಕಾಲ ಹೋರಾಡುತ್ತದೆ. ಫಲಸ್ವರೂಪವಾಗಿ ವಸಡು, ಹಲ್ಲಿನ ಬೇರು ಶಿಥಿಲ. ಅಂಥ ಶಿಥಿಲತೆ ನಿರೋಧಕ ಪೆರಿಯೋಸ್ಟಾಟ್ ಮದ್ದು ಇತ್ತೀಚೆಗೆ ಅಮೆರಿಕದ ಸರಕಾರದಿಂದ ಅಂಗೀಕೃತವಾಗಿದೆ. ದಿನವೂ ೨೦ಮಿ.ಗ್ರಾಂ. ಮದ್ದು ಸೇವನೆ ಸಾಕು. ಬಾಯೊಳಗಣ ಶಿಥಿಲತೆ ಪ್ರಕ್ರಿಯೆಗೆ ಕಡಿವಾಣ. ಇದರಿಂದ ವಸಡುಬಾಧೆ, ರೋಗ ನಿಯಂತ್ರಣ. ನ್ಯೂಯಾರ್ಕ್ ಸರಕಾರಿ ವಿಶ್ವವಿದ್ಯಾಲಯದ ಡಾ. ಲಾರ್ನೆ ಗೋಲುಬ್ ಪ್ರಕಾರ ನಿತ್ಯ ಹಲ್ಲು ಶುಚಿಯ ಅಭ್ಯಾಸ ಮತ್ತು ಮಾತ್ರೆ ಸೇವನೆಯಿಂದ ಹಲ್ಲುದುರುವಿಕೆ ತಡೆ ಖಂಡಿತ ಸಾಧ್ಯ.

ಹೃದಯಾಘಾತ ಮುನ್ನೆಚ್ಚರಿಕೆ ಸಾಧ್ಯ

ಗುಂಡಿಗೆ ಬೇನೆ ಉಳ್ಳ ರೋಗಿಗಳನ್ನು ಆಗಾಗ ತಪಾಸಣೆಗೊಳಪಡಿಸಿದಾಗ ಈ ವಿಷಯ ಬಹಿರಂಗವಾಯಿತು. ಗುಂಡಿಗೆಯ ರಕ್ತಪರಿಚಲನೆ ಸೋಲುವ ಹಂತದಲ್ಲಿದ್ದರೆ ಅಂತಹವರು ಸಂವತ್ಸರದೊಳಗೆ ಸಾಯುವ ಸನ್ನಿವೇಶವಿದೆ. ಹೃದಯ, ಅಷ್ಟೇ ಮುಖ್ಯ ಇತರ ಅವಯವದಲ್ಲಿ ರಕ್ತ ಪರಿಚಲನೆ ನಿಂತರೆ ಈ ಸಂದಿಗ್ಧ ಒದಗುತ್ತದೆ. ಹೃದಯಗತಿ ಪರಿಶೀಲಕ ಎಂಬ ಪರೀಕ್ಷೆಯಲ್ಲಿ ಹೃದಯದ ಯಾವ ಬಡಿತವು ೨೪ ತಾಸುಗಳಲ್ಲಿ ಏರುಪೇರುಗೊಳ್ಳುತ್ತದೆ ಎಂಬ ಸಂಗತಿ ಸಾಬೀತಾಗುತ್ತದೆ. ಅಂತಹ ಏರಿಳಿತ ಪತ್ತೆ ಮಾಡಿದ ರೋಗಿಗಳಲ್ಲಿ ಸಾವಿನ ಸಾಮೀಪ್ಯ ನಿಗದಿಪಡಿಸಬಹುದಾಗಿದ್ದು ಸೂಕ್ತೋಪಚಾರಕ್ಕೆ ಆಸ್ಪದವಿದೆ. ಜೇಮ್ಸ್ ನೋಲನ್ ಎಂಬಾತ ಈ ಪರೀಕ್ಷೆ ಕೈಗೊಂಡಿದ್ದು ಏರಿಳಿತದ ಕರಾರುವಾಕ್ಕು ನಿರ್ಧಾರಕ್ಕೆ ಅವರು ಬಂದಿದ್ದಾರೆ. ಬೀಟಾ ಬ್ಲಾಕರ್ಸ್, ಡಿಗೋಕ್ಸಿನ್ ಮತ್ತು ಹಿತಮಿತದ ವ್ಯಾಯಾಮದಿಂದ ಹೃದಯಗತಿ ಪರಾಮರ್ಶೆಯ ಮೂಲಕ ಪತ್ತೆಯಾದ ಏರಿಳಿತ ರೋಗಿಗಳನ್ನು ಸಾವಿನ ದವಡೆಯಿಂದ ಪಾರು ಮಾಡಲು ಸಾಧ್ಯ.

ಅಜ್ಞಾನ, ಅಶಿಸ್ತು, ಮನುಷ್ಯನ ತೊಂದರೆಗಳಿಗೆ ಮುಖ್ಯ ಕಾರಣ.

-ಕೌಟಿಲ್ಯ

ಪೂಜಾರಿ ಸಿದ್ದಪ್ಪ

ಡಾ. ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ. ಸಂಘ, ಬಾಗಲಕೋಟೆ-೫೮೭ ೧೦೧

ನಾನು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿ ಇದ್ದಾಗ ನನಗೊಬ್ಬ ಸ್ನೇಹಿತ ಸಿಕ್ಕಿದ್ದ. ಅವನ ಹೆಸರು ಹಿರೇ ಕುರುಬರ. ಹುಟ್ಟಿದಾಗಲೇ ಅವನ ಪಾದಗಳು ಸೊಟ್ಟಾಗಿದ್ದ ಕಾರಣ ನಡೆಯುವುದು ಅಷ್ಟು ಸುಲಭವಿದ್ದಿಲ್ಲ. ಎತ್ತರವೂ ಅಷ್ಟಕಷ್ಟೇ. ಮೀಸೆ ಬಿಟ್ಟಿದ್ದ. ಅವನ ಉಡಿಗೆ ತೊಡಿಗೆ ಆಕರ್ಷಕ. ಒಳ್ಳೆಯ ಪ್ಯಾಂಟು, ಶರ್ಟು, ನೆಕ್‌ಟೈ. ಸಮಾರಂಭಗಳಲ್ಲಿ ಫುಲ್ ಸೂಟು ಇರುತ್ತಿದ್ದುವು. ನಾವೆಲ್ಲ ಅವನ ಎದುರು ಬಹಳ ಚಿಲ್ಲರೆ ಕಾಣುತ್ತಿದ್ದೆವು. ಯಾಕಂದರೆ ಅಂಥ ದುಬಾರಿ ಬಟ್ಟೆಗಳು ನಮಗೆ ಅಸಾಧ್ಯ. ಬಟ್ಟೆಗಳು ದುಬಾರಿಯಾದರೂ ಪ್ರತಿ ವರ್ಷ ಪಾಸಾಗುವುದು ಅವನ ನಿಯಮ.

ಈ ನನ್ನ ಸ್ನೇಹಿತ ನಿಜವಾಗಿ ನಮಗಿಂತ ಒಂದೆರಡು ವರ್ಷ ಮೊದಲೇ ಕಾಲೇಜು ಸೇರಿಕೊಂಡಿದ್ದ. ನಡುವೆ ಅವನ ಆರೋಗ್ಯ ಕೆಟ್ಟು ಮುಂಬೈ ಆಸ್ಪತ್ರೆಯಲ್ಲಿ ದಾಖಲಾಗಿ, ಉಪಚಾರ ಪಡೆದುಕೊಂಡು ಮರಳುವಷ್ಟರಲ್ಲಿ ತನ್ನ ಕ್ಲಾಸಿನವರಿಗಿಂತ ಹಿಂದೆ ಬಿದ್ದಿದ್ದ. ನಿತ್ಯ ಸಿಗರೇಟು, ಆಗೀಗ ಮದ್ಯಪಾನ ರೂಢಿಯಾಗಿದ್ದುವು. ಇವನ ತಂದೆಯ ಹೆಸರೇ ಪೂಜಾರಿ ಸಿದ್ದಪ್ಪ. ನನ್ನ ಸ್ನೇಹಿತನಿಗೆ ತಂದೆ ಎಂದರೆ ಎಲ್ಲಿಲ್ಲದ ಗೌರವ ಹಾಗೂ ಭಯ. ತಂದೆ ಮಗನನ್ನು ನೋಡಲು ಬಂದರೆ ತೀರಿತು. ನನ್ನ ಸ್ನೇಹಿತ ನಮ್ಮಂತೆಯೇ ಸಾದಾ ವಿದ್ಯಾರ್ಥಿ ಆಗುತ್ತಿದ್ದ. ತಂದೆ ಊರಲ್ಲಿ ಇರುವವರೆಗೆ ಇವನು ಹೊಟೇಲುಗಳಲ್ಲಿ ಕಾಲಿಡುತ್ತಿರಲಿಲ್ಲ. ಚಹಾ ಕುಡಿಯುತ್ತಿರಲಿಲ್ಲ.

ಪೂಜಾರಿ ಸಿದ್ದಪ್ಪನ ಅಡ್ಡ ಹೆಸರು ಕೂಡ ಹಿರೇ ಕುರುಬರ ಎಂದಿತ್ತು. ಆದರೆ ಅವರು ಮಾಳಿಂಗ ರಾಯನ ಪೂಜೆ ಮಾಡುತ್ತಿದ್ದರಾದುದರಿಂದ ಜನರು ಅವರನ್ನು ಪೂಜಾರಿ ಎಂದು ಕರೆಯುತ್ತಿದ್ದರು. ಅವರಿಗೆ ಮೂರುನೂರು ಎಕರೆ ಜಮೀನು ಇತ್ತು. ಹೊಲಗಳಿಂದ ಉತ್ಪನ್ನ ಸಾಕಷ್ಟು ಬರುತ್ತಿತ್ತು. ಕೈಯಲ್ಲಿ ಸಂಪತ್ತು ಕೂಡಿತ್ತು. ಜನರಿಗೆ ಅಡಚಣೆ ಬಂದರೆ ಕೈಗಡವೆಂದು ಸಾವಿರಾರು ರೂಪಾಯಿ ಕೊಡುತ್ತಿದ್ದರು. ಶಾಲಾ ಮಾಸ್ತರರ ಮಗಳ ಮದುವೆ, ಬಡವನ ಮಗ ಕಾಲೇಜಿಗೆ ಹೋಗಲು, ಮತ್ತೆ ಬೇರೆ ಅಡಚಣೆಗಳಿಗೆ ಜನರು ಪೂಜಾರಿ ಸಿದ್ದಪ್ಪನವರ ಹತ್ತಿರ ಬಂದರೆ ಅವರನ್ನು ಬರಿಗೈಯಿಂದ ಕಳಿಸುತ್ತಿರಲಿಲ್ಲ. ಹಣ ಇವರಿಂದ ಪಡೆದವರು ಬಹಳ ಶ್ರದ್ಧೆಯಿಂದ ಮರಳಿ ಕೊಡುತ್ತಿದ್ದರು. ಆದರೆ ಆಗೊಮ್ಮೆ ಈಗೊಮ್ಮೆ ಕೆಲವರಿಗೆ ತೆಗೆದುಕೊಂಡ ಹಣ ಮರಳಿಸುವುದು ಸಾಧ್ಯವಾಗುತ್ತಿರಲಿಲ್ಲ. ಅದನ್ನು ಮನೆಯವರಾಗಲೀ ನೆನಪಿಸಿದರೆ ಪೂಜಾರಿ ಸಿದ್ದಪ್ಪ ಹೇಳುತ್ತಿದ್ದರು, ''ನೋಡ್ರಿ, ನಾಯೇನು ಅವರಿಗೆ ಕೊಟ್ಟಿಲ್ಲ, ಆ ದೇವ್ರು ನನ್ನ ಕೈಯಿಂದ ಕೊಡಿಸಿರುವನು. ದೇವ್ರನ ಆ ಹಣವನ್ನು ನಮಗೆ ಮರಳಿ ಬರುವಂಗ ಮಾಡತಾನು. ನಾಯಾಕ ಹೋಗಿ ನಮ್ಮ ಹಣ ಕೊಡ್ರಿ ಅನ್ನಬೇಕು?''

ಬೇರೆಯವರು ''ಅಲ್ರಿ ಸಿದ್ದಪ್ಪಣ್ಣಾರ, ಹಿಂಗ ನೀವು ಅಂದ್ರ ಜನ ಹಣ ಮುಳುಗಿಸುತ್ತಾರ್ರಿ''

ಸಿದ್ದಪ್ಪ ನಗುತ್ತ '' ಈ ಜನ್ಮದಲ್ಲಿ ಅವ

ಕೊಡದಿದ್ದರ ಮುಂದಿನ ಜನ್ಮದಾಗಾದ್ರು ದೇವರಿಗೆ ಅವ ಕೊಡಬೇಕಲ್ಲ'' ಅಂತಿದ್ದ.

ಇಡೀ ಊರೇ ಅವನನ್ನು ಗೌರವಿಸುತ್ತಿತ್ತು. ಅವನ ನೀತಿಗೆ ನಡೆಗೆ ತಲೆ ಬಾಗುತ್ತಿತ್ತು. ನಮ್ಮ ಸ್ನೇಹಿತ ಪೂಜಾರಿ ಸಿದ್ದಪ್ಪನವರ ಚೊಚ್ಚಲ ಮಗ. ಶಾಲೆಯಲ್ಲಿ ಬಲು ಚುರುಕು ಎಂದು ಗೊತ್ತಾಯಿತು. ಮನೆಯಲ್ಲಿ ಓದಲು ಬರುವವರು ಯಾರೂ ಇದ್ದಿಲ್ಲ. ಒಂದು ಓಲೆ ಬರಲಿ, ಸರಕಾರದಿಂದ ಪತ್ರ ಬರಲಿ ಊರಿನ ಕುಲಕರ್ಣಿ ಮನೆಗೆ ಹೋಗಿ ಅವರಿಂದ ಓದಿ ಕೇಳುವಂಥ ಮನೆ ಅವರದು. ಪತ್ರಗಳ ಮಾತು ಬಲು ದೂರ. ಅವು ವರ್ಷಕ್ಕೆ ಒಂದೆರಡು ಮಾತ್ರ ಬರುತ್ತಿದ್ದುವು. ಅದಕ್ಕಿಂತ ಗೊಂದಲ ವೆಂದರೆ ಬೇರೆಯವರ ತಂಬಿಗೆ, ತಾಟು, ಗಂಗಾಳಗಳು ಇವರ ಮನೆಗೆ ಬಂದರೆ ಗಲಿಬಿಲಿ ಪ್ರಾರಂಭ. ಆ ಪಾತ್ರೆಗಳು ಸ್ವಂತದ್ದೊ ಅಲ್ಲವೋ ಎಂಬುದು ಗೊತ್ತಾಗಬೇಕಾದರೆ ಆ ಪಾತ್ರೆಗಳ ಮೇಲಿನ ಹೆಸರು ಓದಿಸಲು ಊರಿನ ಕುಲಕರ್ಣಿ ಬೇಕು. ಕಾರಣ ಪೂಜಾರಿ ಸಿದ್ದಪ್ಪ ಮಗನು ಓದು ಕಲಿಯಲೆಂದು ಆಶೆ ಪಟ್ಟಿದ್ದ. ಆಗಿನ ಮುಲ್ಕಿ ಪರೀಕ್ಷೆಯಲ್ಲಿ ಮಗನು ಪಾಸಾದಾಗ ಸಿದ್ದಪ್ಪನವರು ಸಂತೋಷ ಪಟ್ಟಿದ್ದರು. ಸುಮ್ಮನೆ ಪಾಸಲ್ಲ. ಒಳ್ಳೆಯ ಮೇಲ್ವರ್ಗದಲ್ಲಿ ಪಾಸಾಗಿತ್ತು. ಪ್ರಾರಂಭದಲ್ಲಿ ಹುಡುಗ ನಪಾಸೆಂದೇ ಸುದ್ದಿ ಬಂದಿತು. ಅದು ಸಾಧ್ಯವಿಲ್ಲ ಎಂಬುದು ಮಗನವಾದ. ಆದರೆ ಅವರ ಮನೆತನಕ್ಕೆ 'ನಪಾಸು' ಹೊಸ ವಿಷಯವೇನೂ ಅಲ್ಲ, ಒಂದು ಲೆಕ್ಕದಲ್ಲಿ ಅದು ಎಲ್ಲರ ಸ್ನೇಹ ಸಂಪಾದಿಸಿತ್ತು. ಯಾರೂ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ. ಫಲಿತಾಂಶ ಬಂದ ಮರುದಿನ ಯಾರೋ ಓಡುತ್ತ ಸಿದ್ದಪ್ಪನವರ ಮನೆಗೆ ಬಂದು ''ಸಿದ್ರಪ್ಪಜ್ಜರ, ನಿಮ್ಮ ಮಗ ಮೇಲ್ವರ್ಗದಲ್ಲಿ ಪಾಸಾಗುವದಲ್ಲದೆ ತಾಲೂಕಿಗೇ ಮೊದಲ ಸ್ಥಾನ ಪಡೆದಿರುವನು. ಅವನ ಹೆಸರು ಎಲ್ಲಕ್ಕಿಂತ ಮೇಲಿದೆ. ಅದನ್ನು ಯಾರೂ ನೋಡಿಲ್ಲ'' ಎಂದರು. ಮಗನು ಮನಸ್ಸಿಗೆ ದುಃಖ ಮಾಡಿಕೊಂಡಾನೆಂದು ಅವನಿಗೆ ಫಲಿತಾಂಶ ಪ್ರಕಟವಾದ ಪತ್ರಿಕೆಯನ್ನೂ ಕೊಟ್ಟಿರಲಿಲ್ಲ. ಈಗ ಆದ ಸಂತೋಷ ಅಪಾರ.

ಮುಂದಿನ ಓದಿಗೆ ಅವನನ್ನು ಇಳಕಲ್ಲ ಹೈಸ್ಕೂಲಿಗೆ ಸೇರಿಸಿದರು. ಅಲ್ಲಿ ಅವನಿಗೆ ವಿದ್ಯಾರ್ಥಿವೇತನ ಬಂದಿತು. ಅವನ ಕಲಿಕೆ ಸುಗಮವಾಯಿತು. ಮೊದಲ ಸಲ ಹಣ ಬಂದಾಗ ನನ್ನ ಸ್ನೇಹಿತನಿಗೆ ಹೆಮ್ಮೆಯೇ ಹೆಮ್ಮೆ. ಹಣವನ್ನು ಕಿಸೆಯಲ್ಲಿ ಟ್ಟುಕೊಂಡು ತಮ್ಮ ಹಳ್ಳಿಗೆ ಹೋಗಿ ತಂದೆಗೆ ಕೊಟ್ಟನು. ಸಿದ್ದಪ್ಪನವರಿಗೆ ಖುಷಿ ಆಯಿತು. ಅವರು ಮಗನ ಕಡೆಯಿದ್ದ ಹಣವನ್ನೆಲ್ಲ ಇಸಿಕೊಂಡರು. ಮಗನು ಶಾಲೆಗೆ ಹೋಗುವಾಗ ಅವರೂ ಅವನ ಸಂಗಡ ಇಳಕಲ್ಲ ಶಾಲೆಗೆ ಹೋದರು. ಮುಖ್ಯ ಗುರುಗಳನ್ನು ಕಂಡು ಮಾತಾಡಿದರು. ಮಗನ ನಡತೆಯ ಬಗ್ಗೆ ವಿಚಾರಿಸಿದರು. ಎಲ್ಲವೂ ಸರಿ ಎಂದು ತಿಳಿದ ಮೇಲೆ ವಿದ್ಯಾರ್ಥಿವೇತನ ಹಣವನ್ನು ಮಾಸ್ತರರ ಟೇಬಲ್ ಮೇಲೆ ಇಟ್ಟು ''ಮಾಸ್ತ ಈ ಹಣ ನಮ್ಮದು ಅಲ್ರಿ. ಇದು ಬಡವರಿಗೆ ಹೋಗ ಬೇಕು. ದೇವ್ರು ನನಗೆ ಸಾಕಷ್ಟು ಕೊಟ್ಟಾನ್ರಿ. ನಮ್ಮ ಹುಡುಗ ನನ್ನ ಖರ್ಚಿನಾಗ ವಿದ್ಯಾ ಕಲಿಬೇಕಲ್ರಿ'' ಮಾಸ್ತರರಿಗೆ ವಿಚಿತ್ರ ಎನಿಸಿತು. ಬಂದ ಹಣವನ್ನು ತಿರುಗಿಸುವ ವ್ಯಕ್ತಿಯನ್ನು ಕಂಡು ಬೆರಗಾದರು.

ಮಾಸ್ತರರು : ''ಸಿದ್ದಪ್ಪನವರೇ, ಇದು ನಿಮ್ಮ ಮಗನ ಜಾಣತನಕ್ಕೆಂದು ಬಂದ ಹಣ. ಅವನಿಗೆ ಸರಕಾರ ಪ್ರತಿ ತಿಂಗಳು ಕೊಡುತ್ತದೆ.

ಕಾರಣ ಈ ಹಣವೂ ತಮ್ಮದೇ.''

ಸಿದ್ದಪ್ಪ : ''ಇಲ್ರಿ ಗುರುಗಳ ಅದು ನನಗೂ ಗೊತ್ತು ಆಗಿದೆ. ಸರಕಾರದವರದು ಒಳ್ಳೆ ವಿಚಾರ. ಜಾಣ ಹುಡುಗರ ವಿದ್ಯಾಭ್ಯಾಸ ನಿಲ್ಲಬಾರದು ಎಂದು ಸರಕಾರ ಕೊಡುದು ಒಳ್ಳೆಯ ಕಾರ್ಯ. ಆದರ ನಾವು ಅದನ್ನ ತಗೊಂಡ್ರ ನಮ್ಮದು ತಪ್ಪು ಆಗತ್ತೈತಿ. ಬೇಕಂದ್ರ ದೇವ್ರು ನಮಗ ಸಾಕಷ್ಟ ಕೊಟ್ರೊ. ಇಂಥ ಹಣ ತೊಗೊಂಡ್ರ ತಪ್ಪಾಗತ್ತೈತಿ. ಇದನ್ನು ಬೇರೆ ಬಡ ಹುಡುಗರಿಗೆ ಕೊಡಲಿಕ್ಕೆ ಶಿಫಾರಸ್ಸು ಮಾಡಿರಿ.

ಮಾಸ್ತರರು ಏನು ಹೇಳಿದರೂ ಸಿದ್ದಪ್ಪ ಒಪ್ಪಲಿಲ್ಲ. ಹಣವನ್ನು ಮರಳಿ ಕಳಿಸಿದರು. ಸಿದ್ದಪ್ಪನವರ ಮಗ ಸ್ವಂತ ಖರ್ಚಿನ ಮೇಲೆ ಕಲಿತನು.

ನಮ್ಮ ಸ್ನೇಹಿತ ಮೆಡಿಕಲ್ ಕಾಲೇಜಿಗೆ ಬಂದಾಗಲೂ ಅವನಿಗೆ ಮತ್ತೆ ಸ್ಕಾಲರ್‌ಶಿಪ್ ಹಣ ಬರಹತ್ತಿತು. ಈ ಸಲ ಮಗನು ಈ ಸುದ್ದಿಯನ್ನು ತಂದೆಗೆ ತಿಳಿಸಲೇ ಇಲ್ಲ. ಬಂದ ಹಣವನ್ನು ಗುಪ್ತವಾಗಿಟ್ಟುಕೊಂಡ. ಈ ಹಣವನ್ನು ಹೇಗೆ ಖರ್ಚು ಮಾಡಬೇಕೆಂಬುದು ಇವನ ಸಮಸ್ಯೆ. ಆಗ ಹೊಟೇಲು, ಸಿಗರೇಟು, ಮದ್ಯಪಾನ ಒಂದೊಂದಾಗಿ ಕಾಲಿಟ್ಟವು ನಡುನಡುವೆ ನಮ್ಮ ಸ್ನೇಹಿತ ಬೇರೆ ಊರುಗಳಿಗೆ ಚೈನಿಗೆಂದು ಹೋಗಿ ಬರಲು ಪ್ರಾರಂಭಿಸಿದನು.

ಸಿದ್ದಪ್ಪ ಪೂಜಾರಿ ಹೇಳುತ್ತಿದ್ದ ಮಾತು ನನಗೆ ನೆನಪಾಗುತ್ತಿತ್ತು. ''ನಮ್ಮ ಹಣ ಅಲ್ಲದ್ದು ನಮಗೆ ಬಂದರೆ ಅದು ನಮ್ಮನ್ನು ದಾರಿ ತಪ್ಪಿಸುತ್ತದೆ. ದೇವರಿಂದ ನಮ್ಮನ್ನು ದೂರ ಮಾಡುತ್ತದೆ.''

ವಿಚಾರಿಸಿದರೆ, ಸಿದ್ದಪ್ಪನವರು ಕುರುಬರು. ಅಶಿಕ್ಷಿತರು. ಯಾವ ಪುಸ್ತಕ ಓದಿದವರಲ್ಲ. ಆದರೆ ಅವರ ನೀತಿ ಎಂಥದು ! ನಿಯಮ ಎಷ್ಟು ಆದರ್ಶ.

ನನ್ನ ಸ್ನೇಹಿತ ತನ್ನ ತಪ್ಪನ್ನು ಬೇಗನೇ ಅರಿತು, ಸ್ಕಾಲರ್‌ಶಿಪ್ ಹಣ ಬಿಟ್ಟ. ತಂದೆಯ ಮಾರ್ಗದಲ್ಲಿ ನಡೆದ ಈಗ ಅವನು ದೊಡ್ಡ ವೈದ್ಯಾಧಿಕಾರಿ. ತಂದೆಯ ಮಾರ್ಗದಲ್ಲಿ ನಡೆದಿರುವನು.

ಕೊಟ್ಟದ್ದು ಬೆಳೆಯುವುದು ನೆಟ್ಟದ್ದು ಚಿಗುರುವುದು
ಇಟ್ಟದ್ದು ಕೊಳೆಯುವುದು ಕದ್ದದ್ದು ನಾರುವುದು
ಕೊಟ್ಟಾತ ನಡೆಯುವನು ದಿಟ್ಟತನದಲಿ ಮುಂದೆ
ಇಟ್ಟಾತ ಕುಸಿಯುವನು ಭಯದಿಂದ ಅತ್ರಿಸೂನು



ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.
-ವಿಲಿಯಮ್ ಬ್ಲ್ಯಾಕ್

ಹರಕೆ ತೀರಿತು

ಸುಮತಿ ಪಾಂಗಾಳ
೨೦೨, ಮಾನಸ ಅಪಾರ್ಟ್‌ಮೆಂಟ್
ಲೋಬೋಲೇನ್, ಬೆಂದೂರು
ಮಂಗಳೂರು-೫೭೫ ೦೦೨

ನಮ್ಮ ಮನೆತನದ ದೈವ ಅಣ್ಣಪ್ಪಂಜುರ್ಲಿ. ಅಜ್ಜ ಪಿಜ್ಜರ ಕಾಲದಿಂದಲೂ ನಂಬಿಕೊಂಡು ಬಂದ ದೈವವದು. ಮನೆಯ ಹತ್ತಿರದ ಉತ್ತರ ಬದಿಯ ಚಬುಕಿನ ಹಾಡಿಯಲ್ಲಿಯೇ ಅದರ ವಾಸ್ತವ್ಯದ ಕೊಟ್ಟಿಗೆ. ವರ್ಷಂಪ್ರತಿ ನಡೆಯುವ ಕೋಲದ ಸಮಯದಲ್ಲಿ ನಾನೂ ಅಮ್ಮನೊಂದಿಗೆ ಊರಿಗೆ ಹೋಗುತ್ತಿದ್ದೆ.

ನನ್ನ ತಂದೆಯವರಿಗೆ ಭೂತ, ನೇಮ, ಕೋಲಗಳಲ್ಲಿ ಎಳ್ಳಷ್ಟೂ ನಂಬಿಕೆಯಿರಲಿಲ್ಲ. ಆದರೂ ಅಮ್ಮನ ಮನಸ್ಸಿನ ಸಂತೋಷಕ್ಕೋಸ್ಕರ ಹಲವಾರು ಸಾವಿರ ರುಪಾಯಿ ಖರ್ಚು ಮಾಡಿ ಅಮೆರಿಕದಿಂದ ನಮ್ಮ ಹಳ್ಳಿಗೆ ಹೋಗುತ್ತಿದ್ದೆವು. ಉಡುಪಿ ಜಿಲ್ಲೆಯಲ್ಲಿರುವ ಚಿಕ್ಕ ಹಳ್ಳಿಯದು. ಅಮ್ಮ ಊರಿಗೆ ಹೋಗುವ ದಿನಗಳಲ್ಲಿ ಆಕೆಯ ಗೆಳತಿಯರೆಲ್ಲರೂ ನಮ್ಮಜ್ಜ ಮನೆಯ ಕೋಲದಲ್ಲಿ ಒಂದಾಗುತ್ತಿದ್ದರು.

ನನಗೆ ಇನ್ನು ನೆನಪಿದೆ. ನಾನಾಗ ಸಾಧಾರಣ ಐದು ವರ್ಷದ ಹುಡುಗಿ . ದೊಡ್ಡಮ್ಮ , ''ಭೂತದ ಗರ್ಜನೆಗೆ ನೀನು ಹೆದರುತ್ತಿಯಾ... ಕೋಲಕ್ಕೆ ಬರಬೇಡ'' ವೆಂದರೂ ಹಠ ಹಿಡಿದು ಹೋಗಿದ್ದೆ.

''ಜ್ವರ ಗಿರ ಬಂದರೆ ನಿನ್ನ ಅಮ್ಮನ 'ಫೋನು' ಬಂದಾಗ ಏನೆಂದು ಉತ್ತರಿಸಲಿ?'' ಎಂದಾಗ ನಾನು, ''ಏನೂ ಆಗೋಲ್ಲ, ನಾನೂ ನಿಮ್ಮೊಂದಿಗೆ ಬಂದೇ ಬರುತ್ತೇನೆ,'' ಎಂದು ಹೋಗಿದ್ದೆ.

ಅಮೆರಿಕದ ಲೋಸ್ ಏಂಜಲೀಸ್‌ನಿಂದ ವಾರಕ್ಕೊಮ್ಮೆ ತಪ್ಪದೆ ಅಮ್ಮನ ಫೋನು ಬರುತ್ತಿತ್ತು. ದೊಡ್ಡಮ್ಮ, ಅಜ್ಜ ನಮ್ಮೂರಿಗೆ ಬಂದು ಮೂರು ತಿಂಗಳು ಇದ್ದು ಹಿಂದೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗಿದ್ದರು.

ನನ್ನ ಹೆತ್ತವರಿಬ್ಬರೂ ಡಾಕ್ಟರುಗಳು. ಬೆಳಗ್ಗೆ ಎಂಟು ಗಂಟೆಗೆ ಮನೆ ಬಿಟ್ಟರೆ ಸಾಯಂಕಾಲ ಆರು ಗಂಟೆಯ ಅನಂತರವೇ ಮನೆ ಸೇರುತ್ತಿದ್ದರು. ಬೇಬಿ ಸಿಟ್ಟಿಂಗಿಗೆ ಸೇರಿದಾಗಿನಿಂದ ನನಗೆ ಆಗಾಗ ಏನಾದರೂ ಒಂದು ಕಾಯಿಲೆ ಬರುತ್ತಿತ್ತಂತೆ. ಆದ್ದರಿಂದ ದೊಡ್ಡಮ್ಮ ''ಮಗು ನಮ್ಮೊಂದಿಗೆ ಊರಿಗೆ ಬರಲಿ'', ಎಂದಾಗ ಅಮ್ಮ ಒಪ್ಪಿ ಕಳುಹಿಸಿದಳು. ಊರಿಗೆ ಹೋಗಿದ್ದ ಚಿಕ್ಕಮ್ಮ ಹಿಂದೆ ಬರುವಾಗ ಕರೆದುಕೊಂಡು ಬರಲು ಹೇಳಿದರಾಯ್ತೆಂದು.

ನಮ್ಮಜ್ಜನ ಮನೆಯ ಹಾದಿಯಲ್ಲಿರುವ ಗೇರುಮರ, ಮನೆಯಂಗಳದ ಮಾವು, ಹಲಸಿನ ಮರಗಳ ನೆನಪು ಹಸಿರು ಹಸಿರಾಗಿ ನನ್ನನ್ನು ಊರಿನತ್ತ ಆಹ್ವಾನಿಸುತ್ತಿದ್ದುವು. ಹಿತ್ತಲ ಬದಿಯಲ್ಲಿದ್ದ ಕೆರೆಯಲ್ಲಿ ಪಳಪಳನೆ ಬೆಳ್ಳಿಯ ಸರಿಗೆಗಳಂತೆ ಕಾಣುವ ಮೀನುಗಳು, ತೋಟದ ಹೂಗಳ ಮೇಲೆರಗುವ ವರ್ಣವರ್ಣದ ಪತಂಗಗಳು , ಪೇರಳೆಯ ಮರದಲ್ಲಿದ್ದ ದೋರೆಗಾಯಿಯನ್ನು ಹುಡುಕಿಕೊಂಡು ಬರುವ ಗಿಳಿಗಳು.. ಒಂದೇ ಎರಡೇ ಎಲ್ಲವೂ ಅಪ್ಯಾಯಮಾನ ! ನನ್ನ ಎಳೆಯ ಮನಸ್ಸಿಗೆ ವಿಸ್ಮಯ !

ಮನೆಯಲ್ಲಿ ಒಬ್ಬಂಟಿಗಳಾಗಿಯೇ ಇದ್ದು ಚಿತ್ರಗಳಿರುವ 'ಕೋಮಿಕ್ಸ್' ಪುಸ್ತಕಗಳನ್ನು ನೋಡಿ ನೋಡಿ ಬೇಸರ ಬಂದಿತ್ತು.

ಊರಲ್ಲಾದ ನೆರೆಮನೆಯ ಹುಡುಗಿಯರೆಲ್ಲ ಸೇರಿ ಗಜ್ಜುಗೆ, ಚೆನ್ನೆಮಣೆ , ಜಿಬುಲಿ ಆಡುತ್ತಿದ್ದರು. ಒಬ್ಬರ ಮನೆಗೆ ಇನ್ನೊಬ್ಬರು ಹೋಗಲು ಮುಂದಾಗಿ ಆಮಂತ್ರಣವೇನೂ ಬೇಕಿಲ್ಲ. ನನಗಾಗ ಆ ಆಟಗಳನ್ನಾಡಲು ಸರಿಯಾಗಿ ಬರುತ್ತಿರಲಿಲ್ಲವಾದರೂ ಒಂದೇ ಒಂದು ತಿಂಗಳೊಳಗೆ ಸರಿಯಾಗಿ ಆಡಲು ಕಲಿಯುವಷ್ಟಾಯಿತು.

ನಮ್ಮ ಮನೆಯಲ್ಲಿಯೂ ಹೀಗೆಯೇ ಹಲವು ಮಕ್ಕಳು ಆಟವಾಡಲು ಬಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತಲ್ಲವೆ? ದೊಡ್ಡಮ್ಮನ ಹತ್ತಿರ ಕೇಳಿಯೂ ಇದ್ದೆ.

''ದೊಡ್ಡನಮ್ಮ ಮನೆಯಲ್ಲಿ ಬೇರೆ ಪಾಪ ಯಾಕಿಲ್ಲ ?'' ಎಂದಾಗ ''ಮಗೂ ಸುಮ್ಮೀ ನೀನೇ ನಿನ್ನಮ್ಮನ ಹತ್ತಿರ ಕೇಳು'', ಎಂದರು. ನಮ್ಮ ಬೇಬಿ ಸಿಟ್ಟಿಂಗಿಗೆ ಬರುವ ಎಲ್ಲ ಮಕ್ಕಳಿಗೂ ತಮ್ಮನೋ, ತಂಗಿಯೋ ಇದ್ದಾರೆ. ಪ್ರತಿಯೊಬ್ಬರ ಅಮ್ಮಂದಿರೂ ಆಸ್ಪತ್ರೆಗೆ ಹೋಗಿ ಒಂದೊಂದು ಪಾಪೂನ ತರುತ್ತಾರೆ. ಒಬ್ಬಳ ಅಮ್ಮನಂತೂ ಒಂದೇ ಸಾರಿಗೆ ಎರಡು ಪಾಪುಗಳನ್ನು ತಂದಿದ್ದರು. ನನ್ನಮ್ಮ ಎರಡು ಬೇಡ. ಒಂದನ್ನಾದರೂ ತರಬಹುದಲ್ಲ. ದಿನಾ ಆಸ್ಪತ್ರೆ ಹೋಗುವವರಿಗೆ ಅದೇನು ಕಷ್ಟವೊ?

ಮನಸ್ಸಿನಲ್ಲಿಯೇ ನಿರ್ಧರಿಸಿದೆ. ಈ ಸಾರಿ ಮನೆಗೆ ಹೋದ ಮೇಲೆ ಅಮ್ಮನ ಹತ್ತಿರ ಕೇಳಲೇ ಬೇಕು, ಎಂಬುದಾಗಿ ಮರುದಿನವೇ ಭೂತದ ಕೋಲದ ದಿನ. ಮನೆಯ ಚಾವಡಿಯ ಬಲಬದಿಯಲ್ಲಿಯೇ ಭೂತದ ಆಭರಣಗಳನ್ನಿಡುವ ಕೋಣೆ. ತೇಗದಮರದ, ಕುಸುರಿನ ಕೆಲಸದ ದಪ್ಪವಾದ ಬಾಗಿಲನ್ನು ದೊಡ್ಡದಾದ ಬೀಗ ಅಲಂಕರಿಸಿತ್ತು. ಕೋಲದ ಹಿಂದಿನ ದಿನವೇ ಆಭರಣಗಳನ್ನು ನಾಲ್ಕಾರು ಹಿರಿಯರ ಸಮಕ್ಷಮದಲ್ಲಿ ತೆಗೆದಿರಿಸುತ್ತಿದ್ದರು.

ದೊಡ್ಡದಾದ ಕಬ್ಬಿಣದ ಪೆಟ್ಟಿಗೆಯನ್ನು ಇಬ್ಬರು ಆಳುಗಳ ಸಹಾಯದಿಂದ ಚಾವಡಿಯ ಉಯ್ಯಾಲೆಯಲ್ಲಿ ಇರಿಸಿದರು. ಒಂದೊಂದಾಗಿ ಜಾಗರೂಕತೆಯಿಂದ ಎಲ್ಲವನ್ನು ಪೆಟ್ಟಿಗೆಯಿಂದ ಹೊರಗಿರಿಸಿದರು. ಕೋಲದ ದಿನ ಭೂತದ ಆವೇಶವನ್ನು ಪಡೆಯುವ ಪೂಜಾರಿಗೆ ಧರಿಸಲು, ಕೈಗಳಿಗೆ ಚಿನ್ನದ ಕಡಗ, ಕಾಲಿಗೆ ಗಗ್ಗರ, ಸೊಂಟಕ್ಕೆ ಪಟ್ಟಿ, ಹಿಡಿದುಕೊಳ್ಳುವ ಖಡ್ಗ, ಎಲ್ಲವನ್ನೂ ಜಾಗ್ರತೆಯಿಂದಲೂ ಭಕ್ತಿಯಿಂದಲೂ ತೆಗೆದಿರಿಸಿ, ಕುತ್ತಿಗೆಯ ಮಣಿಸರ ಕಾಣದಾಗಲು, ಪುನಃ ಪುನಃ ಪೆಟ್ಟಿಗೆಯನ್ನು ಜಾಲಾಡಿಸಿ ಹುಡುಕಿದರು. ಹಲವಾರು ವರ್ಷಗಳಾದರೂ ತನಗೆ ಸಂತಾನ ಭಾಗ್ಯ ಲಭಿಸದಿದ್ದಾಗ, ಅಜ್ಜ ಭೂತಕ್ಕೆ ಮಣಿಸರದ ಹರಕೆ ಹೊತ್ತು ನನ್ನ ಅಪ್ಪ ಹುಟ್ಟಿದ ಮೇಲೆ ಹರಕೆ ತೀರಿಸಿದ್ದರಂತೆ. ಅಂಥ ಅಮೂಲ್ಯ ಸರ ಕಾಣೆಯಾದಾಗ ಅವರಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಬೀಗವಂತೂ ಕಳೆದ ವರ್ಷ ಹಾಕುವಾಗ ಹೇಗಿತ್ತೋ ಹಾಗೆಯೇ ಇದ್ದಿತ್ತು... ಚಿಂತೆ ಮಾಡುತ್ತಾ ಕುಳಿತುಕೊಳ್ಳಲು ಇದು ಸಮಯ ವಲ್ಲ. ನಾಳೆಯೇ ಭೂತದ ಕೋಲ. ಆದ್ದರಿಂದ ಕೈಮುಗಿದು, ''ಹಿರಿಯರೇ ಈ ಅಚಾತುರ್ಯಕ್ಕೆ ಪೂರ್ಣ ಜವಾಬ್ದಾರಿ ನಾನೇ. ಆದ್ದರಿಂದ ನನ್ನ ಸ್ವಂತ ಖರ್ಚಿನಿಂದಲೇ ಮಣಿ ಸರವನ್ನು ಮಾಡಿಸಿ ಕೊಡುವೆ. ಆದರೆ ಅಷ್ಟರವರೆಗೆ ಯಾರಿಗೂ ಹೇಳದಿರಿ'' ಎಂದು ಬಿನ್ನವಿಸಿ ಕೊಂಡರು. ಆ ದಿನಗಳಲ್ಲಿ ಅಜ್ಜನ ಮಾತೆಂದರೆ ವೇದ ವಾಕ್ಯ. ದಿನವಿಡೀ ಅವರು ಮಾನಸಿಕ ಯಾತನೆಯನ್ನು ಅನುಭವಿಸುತ್ತಿದ್ದರು. ಅಮ್ಮ , ಅಪ್ಪ ಹತ್ತಿರವಿಲ್ಲದ ಮಗುವೆಂದು ನನ್ನೊಂದಿಗೆ ಸದಾಕಾಲ ಹರಟುತ್ತಿದ್ದ ಅಜ್ಜ ಅಂದು ಮೂಕರೇ ಆಗಿದ್ದರು.

ಮರುದಿನ ಬೆಳಗ್ಗೆ ಹಿರಿಯರೆಲ್ಲ ಕೆಲಸ ಬೊಗಸೆಗಳನ್ನು ಮುಗಿಯಿಸಿ ಮಕ್ಕಳೆಲ್ಲ ಕೋಲಕ್ಕೆ

ಬರುವುದು ಬೇಡವೆಂದಾಗ, ''ಅಜ್ಜ ನಾನು ಖಂಡಿತಾ ಹೆದರೋಲ್ಲ... ಭೂತದ ಹತ್ತಿರ ನನಗೂ ....'' ಎಂದು ಅಜ್ಜಿಯ ಮುಖ ನೋಡಿದೆ.

''ಸರಿ ಬಿಡಿ ಅವಳೂ ಬರಲಿ. ಈ ವಿದೇಶ ದಲ್ಲಿರುವ ಮಕ್ಕಳಿಗೆ ನಮ್ಮ ರೀತಿ, ರಿವಾಜು, ಒಂದೂ ಗೊತ್ತಿಲ್ಲ. ನಮ್ಮ ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿಯನ್ನು ಸ್ವಲ್ಪವಾದರೂ ತಿಳಿದುಕೊಳ್ಳಲಿ. ನಾನು ಅವಳನ್ನು ನೋಡಿ ಕೊಳ್ಳುವೆ'' ಎಂದು ನನ್ನ ಪರವಾಗಿ ನುಡಿದಾಗ ಹೋಗಲು ಒಪ್ಪಿಗೆ ಸಿಕ್ಕಿತು. ಇವೆಲ್ಲವೂ ನನ್ನ ಬಾಲ್ಯಜೀವನದ ಸವಿನೆನಪುಗಳು.

ಭೂತದ ಗುಡಿಯ ಆವರಣದಲ್ಲಿ ಊರ ಜನರೆಲ್ಲ ಸೇರಿದ್ದರು. ದೈವದ ಪಾತ್ರಿ ನಮ್ಮ ತೋಟದ ಒಕ್ಕಲು ಆಗಿದ್ದ ತುಕ್ರ ಪೂಜಾರಿಯೇ. ಆತ ತನ್ನ ಕಡುಕೆಂಪು ಉಡುಪಿನ ಮೇಲೆ 'ಸಿರಿಗರಿ' (ಹಸಿ ತೆಂಗಿನ ಗರಿ) ಯ ಆಕರ್ಷಕ ಕುಸುರಿನ ತೊಡುಗೆ ಧರಿಸಿ, ಒಂದು ಕೈಯಲ್ಲಿ ಖಡ್ಗ ಝಳಪಿಸುತ್ತಿದ್ದ. ಇನ್ನೊಂದು ಕೈಯಲ್ಲಿ ದೊಡ್ಡ ಘಂಟಾಮಣಿ. ಮುಖಕ್ಕೆ ಅರಿಸಿನ ಬಣ್ಣ ಬಳಿದುಕೊಂಡದ್ದರಿಂದ ಕಣ್ಣುಗಳು ಇನ್ನೂ ಕೆಂಪಗೆ ಭಯಾನಕವಾಗಿ ತೋರು ತ್ತಿತ್ತು. ಗುಡಿಯ ಗುಂಡದ ಎದುರಿನಲ್ಲಿ ಪೂಜಾರಿ ತುಕ್ರ ದರ್ಪದಿಂದ ನಿಂತಿದ್ದ. ಭೂತದ ಸಮರ್ಪಣೆಗಾಗಿ ಸ್ಟೀಲಿನ ಹರಿವಾಣ ಗಳಲ್ಲಿ ಚರು(ಅನ್ನ) ಅರಳು, ತೆಂಗಿನ ಕಾಯಿ, ಬಾಳೆ ಹಣ್ಣು ಹಾಗೂ ಇತರ ನಾನಾ ವಸ್ತು ಗಳನ್ನು ಇರಿಸಲಾಗಿತ್ತು. ನಾನಾಗ ಬರೀ ಚಿಕ್ಕವಳಾಗಿದ್ದುದರಿಂದ ವಿವರವಾಗಿ ನೆನಪಿಸಿ ಕೊಳ್ಳಲಾಗುತ್ತಿಲ್ಲ. ಪೂಜಾರಿ ತುಕ್ರ ಕಾಲಿನ ಗಗ್ಗರಗಳ, ಕೈಯ್ಯಲ್ಲಿ ಹಿಡಿದಿರುವ ಘಂಟಾ ಮಣಿಯ ಭಯಾನಕ ಶಬ್ದದೊಂದಿಗೇ ದೊಡ್ಡ ಆರ್ಭಟ ಕೊಟ್ಟ. ಅಜ್ಜಿಯ ಸೆರಗಿನ ಹಿಂದೆ ಮುಖ ಮಾಡಿ ಆಕೆಯನ್ನು ಅಪ್ಪಿ ಹಿಡಿದು ಮುಖಮರೆ ಮಾಡಿದ್ದರಿಂದ ಲಂಗ ಒದ್ದೆಯಾಗ ದಿದ್ದುದು ನನ್ನ ಪುಣ್ಯ!

ಭೂತದ ಕೋಲದ ಕಾರ್ಯಕರ್ತರ ಲ್ಲೊಬ್ಬರು ಮುಂದೆ ಬಂದು, ''ಹೆಂಗಸರು ಮಕ್ಕಳೆಲ್ಲ ಗುಡಿಯ ಸುತ್ತಿನ ಅಂಗಣದಲ್ಲಿ ಕಾಲುಗಳನ್ನು ನೆಲಕ್ಕೆ ತಾಗಿಸದೆ ಭಕ್ತಿಯಿಂದ ಕುಳಿತಿರಿ'' ಎಂದ. ಪೂಜಾರಿ ಘರ್ಜಿಸುತ್ತಾ, ಚೀನೀವಾಲಗ, ಚೆಂಡೆ, ಪರಿವಾರಗಳೊಂದಿಗೆ ಗುಡಿಗೆ ಮೂರು ಸುತ್ತು ಹಾಕಿ, ಗುಡಿಯ ಎದುರಿನಲ್ಲಿ ಇನ್ನು ಗಟ್ಟಿಯಾಗಿ, ಭಯಾನಕ ವಾಗಿ ಬೊಬ್ಬಿಟ್ಟು, ಖಡ್ಗ ಝಳಪಿಸುತ್ತಾ ''ಯಾರೆಲ್ಲ ಬಂದಿದ್ದೀರಿ ?... ಡಾಕ್ಟರು, ಜಮೀನ್ದಾರು, ಹೋಟೆಲು ಮಾಲೀಕರು... ಬಾರಿನವರು... ಎಲ್ಲರೂ ಬಂದಾಯಿತೇ'' ಎಂದ. ನಮ್ಮ ಅಜ್ಜ ಹಾಗೂ ಇತರ ಮುಖಂಡರು ಭೂತದ ಎದುರು ಹೋಗಿ ಭಯಭಕ್ತಿಯಿಂದ ಕೈಮುಗಿದು ನಿಂತರು. ಯಾಕೆಂದರೆ ಅಣ್ಣಪ್ಪಂ ಜುರ್ಲಿ ನಮ್ಮ ಅಜ್ಜ, ಪಿಜ್ಜರ ಕಾಲದಿಂದಲೂ ನಮ್ಮ ಮನೆಯನ್ನು ರಕ್ಷಿಸಿಕೊಂಡು ಬಂದ ದೈವವಂತೆ. ಅಲ್ಲದೆ ಭಾರೀ ಜೋರಿನದು ಕೂಡಾ. ಊರಲ್ಲಿ ಯಾವ ಮನೆಯಲ್ಲಾದರೂ ಸಮಸ್ಯೆಗಳಿದ್ದರೆ ವರ್ಷಾವಧಿ ಕೋಲದ ಸಮಯ ದಲ್ಲಿ ಇತ್ಯರ್ಥವಾಗಿ ಬಿಡುತ್ತಿತ್ತು. ಶರೀರದಲ್ಲಿ ಭೂತದ ಆವೇಶವಾಗುತ್ತಿದ್ದಂತೆಯೇ...

''ನನ್ನ ಭಕ್ತರೆಲ್ಲ ಬಂದರಷ್ಟೆ?... ಈ ವರ್ಷ ಮಳೆ, ಬೆಳೆ, ಎಲ್ಲ ಸರಿಯಾಗಿತ್ತು ತಾನೇ ? ದನ, ಕರು, ಆಡು, ಕೋಳಿಗಳು ಎಲ್ಲವೂ ಚೆನ್ನಾಗಿವೆ. ಆದರೂ ನನಗೆ ಕೊಡುವ ಮರ್ಯಾದೆ ಯಾಕೆ ಕಡಿಮೆ ಮಾಡಿದಿರಿ ? ಕಳೆದ ವರ್ಷ ಹತ್ತು ಕೋಳಿಗಳ ಪೂಜೆ ಕೊಟ್ಟಿದ್ದರೆ ಈ ಸಾರಿ ಬರೀ ಐದು ಕೋಳಿಗಳು ಯಾಕೆ? ನಿಮಗೇನು ಅಷ್ಟು ಬಡತನ ಬಂದು ಬಿಟ್ಟಿತೇ ... ನನಗೇನು ಅರೆ

ಹೊಟ್ಟೆ ಬಡಿಸಬೇಕೆಂದಿರುವಿರಾ?... ಎನ್ನುತ್ತಿದ್ದಂತೆಯೇ ಭಕ್ತ ಜನರು ಗೆಂದಾಳೆ ಸೀಯಾಳವನ್ನು ಕೆತ್ತಿ ಕೆತ್ತಿ ಕೊಡಲು ಪ್ರಾರಂಭಿಸಿ ದರು. ಸಾಧಾರಣ ಹತ್ತಿಪ್ಪತ್ತು ಸೀಯಾಳಗಳನ್ನು ಗಟಗಟನೆ ಕುಡಿಯುತ್ತಿದ್ದಾಗ ಇಡೀ ಶರೀರಕ್ಕೂ ನಾರೀಕೇಳ ಜಲದ ಅಭಿಷೇಕವಾಯಿತು. ಕುಡುದಾದ ಮೇಲೆ, ... ಇರಲಿ, ಇರಲಿ, ನನ್ನ ಮಕ್ಕಳನ್ನು ನಾನೇ ದಂಡಿಸುವುದಿಲ್ಲ. .... ಹೂಂ... ಹೂ.....ನನ್ನ ಕುತ್ತಿಗೆಯಲ್ಲಿನ ಮಣಿಸರ ಎಲ್ಲಿಗೆ ಹೋಯಿತು ? ಹೇಳಿ... ಹೇಳಿ... ತೆಗೆದವರನ್ನು ನಾನು ಬಿಡಲಾರೆ. ಬರುವ ವರ್ಷದ ಕೋಲದೊಳಗೆ ಕೊಡದಿದ್ದರೆ... ಆತ ನಾಶ... ನಾಶ... ನಾಶಾ...''

ಉತ್ತರವಾಗಿ ಅಜ್ಜ ಕೈಮುಗಿದು ''ನಿಮ್ಮ ನುಡಿಯನ್ನು ನಾವು ಒಪ್ಪುತ್ತೇವೆ,'' ಎನ್ನುತ್ತಿದ್ದಂತೆ ನಾನು ಅಜ್ಜಯ ಹತ್ತಿರ ಮಾತನಾಡುತ್ತಿರುವುದನ್ನು ಭೂತ ನೋಡಿತು.

''ನೋಡಿ ಪುಟ್ಟಮ್ಮನವರು ಏನೋ ಕೇಳಬೇಕೆಂದಿದ್ದಾರೆ. ನಾನಿರುವುದೇ ನಿಮಗಾಗಿ ತಾನೇ ? ಮಗೂ ಹೇಳಪ್ಪ'', ಎಂದು ನನ್ನನ್ನು ದೃಷ್ಟಿಸಿ ಹೇಳಿತು. ಆಗ ಅಜ್ಜನವರು,

''ಮಗು ನಿನ್ನೆಯಿಂದ ಹೇಳುತ್ತಾ ಇದೆ... ಏನೆಂದರೆ.. ಅದೂ.. ಅದೂ..''

ಅರ್ಥವಾಯಿತು... ಅರ್ಥವಾಯಿತು... ಆಕೆಗೆ ಒಬ್ಬ ತಮ್ಮ ಬೇಕು. ಬರುವ ಕೋಲದೊಳೊಗೆ ನಿಮಗೊಬ್ಬ ಮೊಮ್ಮಗ! ಆತ ದೊಡ್ಡವನಾಗಿ ನನಗೆ ವರ್ಷಂಪ್ರತಿ ಸಂಭ್ರಮದ ಕೋಲ ಕೊಡಬೇಕಲ್ಲ ? '' ನನಗಂತೂ ಆದ ಸಂತಸ ವರ್ಣಿಸಲಸಾಧ್ಯ. ತಮ್ಮ ಹುಟ್ಟಿದಂತೆ, ಅಂಬೆಗಾಲಿಕ್ಕಿ, ನಡೆದು ಬಿದ್ದಂತೆ, ನಾನು ಆಡಿಸುತ್ತಿದ್ದಂತೆ, ಹೆಚ್ಚೇಕೆ ಆತನೊಂದಿಗೆ ಜಗಳ ಕಾಯುವಂತೆಯೂ ಕನಸು ಕಂಡೆ.... ಅಮ್ಮ ಅವನನ್ನೇ ಹೆಚ್ಚು ಪ್ರೀತಿಸಿದರೆ... ಎಂಬ ಮತ್ಸರದ ಹೊಗೆಯೂ ಏಳದೆ ಇರಲಿಲ್ಲ. ಆದರೆ ಅದು ಕ್ಷಣಿಕ. ತಮ್ಮನ ಆಗಮನವೇ ಹೆಚ್ಚಿನ ಸಂತಸ ತಂದಿತು.

''ದೊಡ್ಡ ದೊಡ್ಡ ಭೂತಕ್ಕೆ ನಾವು ಮಾತನಾಡಿದ್ದು ಹೇಗೆ ಗೊತ್ತಾಯಿತು'', ಎಂದಾಗ... ''ಹಾಗೆಲ್ಲ ಮಾತನಾಡಬಾರದು ಪುಟ್ಟಿ . ಏನಾಗುವುದೋ ನೋಡೋಣ. ಹಾಗೂ ನಿನ್ನ ಅಮ್ಮ ಅಪ್ಪ ಬರುವ ವರ್ಷವಾದರೂ ಊರಿಗೆ ಬರುತ್ತಾರಲ್ಲ? ಈ ವರ್ಷವಂತೂ ತಪ್ಪಿಹೊದರು. ಇನ್ನು ಅದೆಂತಾ ಪರೀಕ್ಷೆಗೆ ಬರೆಯುವುದು''? ಎಂದು ಗೊಣಗಿದರು.

ಅಣ್ಣಪ್ಪಂಜುರ್ಲಿಯ ಭಕ್ತರಲ್ಲಿ ಹಲವಾರು ಜನರು ತಂತಮ್ಮ ಕಷ್ಟಗಳನ್ನು ನಿವೇದಿಸಿಕೊಂಡರು. ಭೂತ ಅಭಯ ಪ್ರದಾನವನ್ನು ಮಾಡಿತು. ಜನರೆಲ್ಲ ಭೂತಕ್ಕೆ ಅಡ್ಡ ಬಿದ್ದ ನಂತರ ಒಬ್ಬೊಬ್ಬರಾಗಿ ತೆರಳಿದರು. ಆವೇಶ ಕಡಿಮೆಯಾಗುತ್ತಿದ್ದಂತೆ ಪೂಜಾರಿಯ ಮೈ ನಡುಕವೂ ಕಡಿಮೆಯಾಯಿತು. ಮುಖದ ಮೇಲಿನ ಭಯಾನಕ ಕಳೆ ಮಂದವಾಯಿತು. ಗಗ್ಗರ, ಘಂಟಾಮಣಿಯ ಸದ್ದೂ ಅಡಗುತ್ತಾ ಬಂದಂತೆಯೇ ಚೀನೀ ವಾದ್ಯ ಮತ್ತು ಡೋಲಿನ ಬಡಿತವೂ ನಿಧಾನವಾಯಿತು. ಭೂತದ ಪಾತ್ರಿ ಗುಡಿಯೆದುರು ಅಡ್ಡ ಬಿದ್ದ. ಬಿದ್ದ ರಭಸಕ್ಕೆ ಬೇರೆಯವರಿಗಾದರೆ ಎಲುಬು ಪುಡಿಪುಡಿಯಾಗುತ್ತಿತ್ತು. ಸುಮಾರು ಹತ್ತು ನಿಮಿಷಗಳ ಮೇಲೆ ಆತ ಎದ್ದು ನಿಂತಾಗ ತನಗೇನೂ ಆಗಲಿಲ್ಲವೋ ಎಂಬಂತಿದ್ದ. ಆತನ ಮುಖ ಮೈಗೆ ಜನರು ಗಾಳಿ ಬೀಸುತ್ತಿದ್ದರು. ಕೆಲವರು ಪಾತ್ರಿಯ ಮೈ,ಮುಖ, ಕೈಗಳನ್ನು ಒದ್ದೆ

ವಸ್ತ್ರದಿಂದ ಒರೆಸುತ್ತಿದ್ದರು. ನನಗಂತೂ ಆತನನ್ನು ನೋಡಲು ಭಯ.

★ ★ ★

ಲೋಸ್ ಏಂಜಲೀಸ್‌ಗೆ ಹೊರಡಲಿರುವ ಚಿಕ್ಕಮ್ಮನೊಂದಿಗೆ ಮನಸ್ಸಿಲ್ಲದ ಮನಸ್ಸಿನಿಂದ ಅಜ್ಜ, ಅಜ್ಜಿ ನನ್ನನ್ನು ಕಳುಹಿಸಿಕೊಟ್ಟರು. ಹೋದ ಕೂಡಲೇ ಅಮ್ಮನ ಹತ್ತಿರ ನನಗೆ ತಮ್ಮನಾಗಲಿರುವ ವಿಷಯ ಹೇಳಬೇಕೆಂದಿದ್ದೆ. ಆದರೆ ನಾವೆಣಿಸಿದಂತೆ ಒಂದೂ ನಡೆಯುವುದಿಲ್ಲವಲ್ಲ ! ವಿಮಾನ ನಿಲ್ದಾಣದಲ್ಲಿ ನನ್ನ ಅಮ್ಮನನ್ನಾಗಲೀ, ಅಪ್ಪನನ್ನಾಗಲೀ ಕಾಣದಾಗ ನನ್ನ ಆಸೆಗಳ ಬೆಲೂನಿಗೆ ಸೂಜಿ ಚುಚ್ಚಿದಂತಾಯಿತು. ಅಮ್ಮನ ಹತ್ತಿರ ಏನೆಲ್ಲ ಊರಿನ ಸುದ್ದಿಗಳನ್ನು ಹೇಳಬೇಕೆಂದಿದ್ದೆ. ಇದಕ್ಕಿಂತ ಹೆಚ್ಚಿಗೆ ಯೋಚನೆ ಮಾಡುವ ಶಕ್ತಿ ನನ್ನ ಆ ಎಳೆಯ ಪ್ರಾಯಕ್ಕಿರಲಿಲ್ಲ.

ನಮ್ಮನ್ನು ಮನೆಗೊಯ್ಯಲು ಅಪ್ಪನೊಂದಿಗೇ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಡಾಕ್ಟರ್ ಮೋಹನ್ ಅಂಕಲ್ ಬಂದಿದ್ದರು. ಚಿಕ್ಕಮ್ಮನೊಂದಿಗೆ ಗುಸ ಗುಸ, ಪಿಸ ಪಿಸ ಎಂದು ಮೆಲ್ಲನೆ ಹೇಳುತ್ತಿದ್ದರು. ಅಮ್ಮ, ಅಪ್ಪ ಯಾರೊಬ್ಬರೂ ಬಾರದಿದ್ದಾಗಲೂ ಈ ಚಿಕ್ಕಮ್ಮ ಹೇಗೆ ಸಂತೋಷದಿಂದ ಮಾತನಾಡುತ್ತಿರುವರೋ ಎಂಬ ಆಶ್ಚರ್ಯವಾಯಿತು. ನನ್ನೊಡನೆ ಯಾರೂ ಏನೂ ಅನ್ನಲಿಲ್ಲ.

ಅಂಕಲ್ ಮನೆಗೆ ಹೋಗಲು ಸುಮಾರು ಇನ್ನೂರು ಕಿಲೋಮೀಟರ್ ಪ್ರಯಾಣ ಮಾಡಲಿತ್ತು. ಅಷ್ಟರವರೆಗಿನ ನನ್ನ ಮಾನಸಿಕ ತುಮುಲವನ್ನು ಯಾರೊಬ್ಬರೂ ಅರ್ಥಮಾಡಿಕೊಳ್ಳದಾದರು. ಬೆಳಗ್ಗಿನ ಉಪಾಹಾರವನ್ನು ತೀರಿಸಿ, ಆಸ್ಪತ್ರೆಗೆ ಹೋದರೆ ಅಲ್ಲಿ ಅಮ್ಮನ ಕೈಗೆ ಏನೋ ರಬ್ಬರಿನ ಕೊಳವೆ ಚುಚ್ಚಿ ಇರಿಸಿದ್ದರು. ಇದನ್ನು ನೋಡಿದ ನಾನು ಹೆದರಿ, ಅಮ್ಮನ ಮುಖವನ್ನು ನೋಡಬಯಸದೆ ಮುಖವನ್ನು ಬೇರೆಡೆಗೆ ತಿರುಗಿಸಿದೆ. ಸುಮಾರು ಮೂರು ತಿಂಗಳು ಆಕೆಯನ್ನು ಬಿಟ್ಟು ಇದ್ದುದರಿಂದ ಒಂದು ರೀತಿಯ ಸಂಕೋಚ ಕೂಡಾ.

''ನಮ್ಮ ಸುಮಿಯ ಗುರುತೇ ಸಿಗೋಲ್ಲ. ಅಲ್ವೇನ್ರಿ ? ಎಂದು ಅಮ್ಮನೆಂದಾಗ'' ನಾನೂ ಅದನ್ನೇ ಯೋಚಿಸ್ತಾ ಇದ್ದೆ. ಊರಿನಲ್ಲಿ ಇಷ್ಟು ದಿನ ಹಲಸಿನ ಹಣ್ಣಿನ ಗಟ್ಟಿ, ಮಾವಿನ ಹಣ್ಣಿನ ರಸಾಯನ, ಹಸಿ ಗೇರುಬೀಜದ ಹುಸಲಿ ಚೆನ್ನಾಗಿ ತಿಂತಿದ್ಲೂಂತ ತೋರುತ್ತೆ'' ಎಂದು ಅಪ್ಪ ಎನ್ನುತ್ತಿದ್ದಂತೆ ಅಮ್ಮ ನನ್ನನ್ನು ತನ್ನ ಹತ್ತಿರಕ್ಕೆ ಎಳೆದುಕೊಂಡಳು.

''ಅಮ್ಮ ನೀನು ಯಾವಾಗ ಮನೆಗೆ ಬರುತ್ತಿ? ನಾನೂ ಇಲ್ಲೇ ನಿನ್ನ ಹಾಸಿಗೆಯಲ್ಲಿಯೇ ಮಲಗ್ತಾ'' ಎಂದಾಗ ಚಿಕ್ಕಮ್ಮ ಅಮ್ಮ ನಾಳೇನೇ ಮನೆಗೆ ಬರ್ತಾಳೆ ಸ್ವಲ್ಪ ದಿನ ಆಸ್ಪತ್ರೆಗೂ ಹೋಗೋಲ್ಲ. ನೀನು ಈಗ ಹಠ ಮಾಡಬಾರದು. ಗುಡ್‌ಗರ್ಲ್ ಆಗಿರಬೇಕು'' ಸರೀನಾ.. ಎಂದಳು.

ಸದ್ಯ ! ಅಮ್ಮ ಒಬ್ಬಳು ಮನೆಗೆ ಬಂದರೆ ಸಾಕು. ನಾನು ಏನು ಬೇಕಾದರೂ ಸಹಾಯ ಮಾಡಲು ಸಿದ್ಧ ಎಂಬಂತಾಗಿತ್ತು. ನನ್ನ ಎಳೆಯ ಮನಸ್ಸು. ಅಂದಿನಿಂದ ಅಮ್ಮ ಆಸ್ಪತ್ರೆಗೂ ಹೋಗುತ್ತಿರಲಿಲ್ಲ. ಅಪ್ಪನಂತೂ ಆಸ್ಪತ್ರೆಗೆ ಹೋಗುವ ಮುಂಚೆ ಎಲ್ಲ ಕೆಲಸಗಳನ್ನು ಮುಗಿಯಿಸಿ ''ಸುಮೀ ಮಮ್ಮಿಗೆ ಉಪದ್ರ ಕೊಡಬೇಡ. ಅವಳ ಹಾಸಿಗೆಯಲ್ಲಿ ಕುಳಿತೇ ಆಟ ಆಡುತ್ತಿರು''... ಎಂದು ಎಚ್ಚರಿಸಿ ಹೋಗುತ್ತಿದ್ದರು.

ಹೀಗೆ ಮೂರು, ನಾಲ್ಕು ತಿಂಗಳುಗಳ ಕಾಲ ಹೇಗೆ ಸರಿಯಿತೆಂದೇ ತಿಳಿಯಲಿಲ್ಲ. ಅಮ್ಮನ ಪ್ರೀತಿಯ ಅಮೃತ ಸಂಚನ ಎಂದೆಂದಿಗೂ ಹೀಗೆಯೇ ಸಿಗಬಾರದೇ ಎಂದು ಹಾರೈಸಿದ್ದೆ.

ಆದರೆ ಒಂದೇ ಒಂದು ಬೇಸರದ ವಿಷಯ... ಆಸ್ಪತ್ರೆಗೇ ಹೋಗದೆ ಇದ್ದರೆ ತಮ್ಮನ್ನನ್ನು ತರುವುದು ಹೇಗೆ?.. ಎಂಬುದು. ಚಾತಕ ಪಕ್ಷಿ ಮಳೆಯ ನೀರಿಗೆ ಕಾಯುವಂತೆ ಕಾಯುವ ನನಗೆ ಆ ದಿನವೂ ತನ್ನಿಂದ ತಾನೇ ಬಂದಿತು. ನೋವು, ನೋವೆಂದು ಆಸ್ಪತ್ರೆಗೆ ಹೋದ ಅಮ್ಮ ನಾಲ್ಕೇ ದಿನಗಳಲ್ಲಿ ಪುಟ್ಟ ಬೊಂಬೆಯಂತಿದ್ದ ತಮ್ಮನನ್ನು ನಯವಾದ ತಿಳಿನೀಲಿ ಬಣ್ಣದ ಉದ್ದನೆಯ ಉಡುಪಿನಲ್ಲಿ ಅಪ್ಪಿ ಹಿಡಿದುಕೊಂಡು ಬಂದರು. ಅಷ್ಟರವರೆಗೆ ನನ್ನದಾಗಿದ್ದ ಸ್ಥಾನವನ್ನು ಆಕ್ರಮಿಸಿದ ತಮ್ಮನ ಮೇಲೆ ಕ್ಷಣಿಕವಾಗಿ ಮತ್ಸರ ಉಂಟಾದರೂ ಆತ ನಿದ್ರೆಯಲ್ಲಿಯೂ ನನ್ನತ್ತ ಮುಖಮಾಡಿ ನಕ್ಕಾಗ, ಸಂತಸದಿಂದ, ''ಅಮ್ಮ ನನಗೆ ತಮ್ಮ ಬರುತ್ತಾನೆಂದು ಮೊದಲೇ ತಿಳಿದಿತ್ತು. ಕೋಲದಲ್ಲಿ ಭೂತವೇ ಹೇಳಿತ್ತು'', ಎಂದಾಗ ಅಪ್ಪ ,ಅಮ್ಮ ಒಬ್ಬರ ಮುಖ ಒಬ್ಬರು ನೋಡಿಕೊಂಡು ನಕ್ಕರು. ನಾನಂತೂ ದಿನದ ಹೆಚ್ಚಿನ ಹೊತ್ತು ತಮ್ಮನೊಂದಿಗೇ ಕಳೆಯುತ್ತಿದ್ದೆ.

★ ★ ★

ಊರಿನಿಂದ ಬಂದ ಅಜ್ಜಿಯ ಕಾಗದದಲ್ಲಿ ''ನಮಗೆ ಮೊಮ್ಮಗನಾದುದು ಎಲ್ಲರಿಗೂ ಸಂತೋಷವಾಗಿದೆ. ಈ ಸಾರಿಯ ಕೋಲಕ್ಕೆ ಬರಲೇಬೇಕು. ನನಗಂತೂ ಮಗುವಿನ ಕೈ ಮುಟ್ಟಿಸಿ ಭೂತಕ್ಕೆ ಮಣಿಸರವನ್ನು ಒಪ್ಪಿಸಲಿಕ್ಕಿದೆ. ಇನ್ನೊಂದು ದುಃಖದ ಸಂಗತಿಯೆಂದರೆ ನಮ್ಮ ತುಕ್ರನ ಮಗ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದು ಹತ್ತಿರದ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ. ನಿನಗೆ ನೆನಪಿರಬಹುದು. ಮನೆ ಗುಡಿಸಲು ಬರುತ್ತಿದ್ದನಲ್ಲ ಸಾಯುವ ಮೊದಲು ಕಾಗದವನ್ನು ಬರೆದಿರಿಸಿದ್ದ. ಭೂತದ ಸರವನ್ನು ನಾನೇ ಕದ್ದಿದ್ದೆ. ಉದ್ವಿಗ್ನ ಮನಸ್ಸಿನಿಂದ ಓದಲೂ ಆಗುತ್ತಿರಲಿಲ್ಲ. ಊರವರು ನನ್ನನ್ನು ಕ್ಷಮಿಸಬೇಕು. ಸರ ನನ್ನ ಪೆಟ್ಟಿಗೆಯ ತಳಭಾಗದಲ್ಲಿದೆ ಎಂಬುದಾಗಿ ನಿನ್ನ ಮಾವ ಮಲಗುವ ಪತ್ತಾಸಿನ ಒಳಗಿನಿಂದ ಆತ ಬೀಗದ ಕೈ ತೆಗೆದಿರಬೇಕು. ಕೆಲವೊಮ್ಮೆ ಗುಡಿಸುವಾಗ ಧೂಳು ಮುಗಿನೊಳಗೆ ಹೋಗುವುದೆಂದು ಒಳ ಬರುತ್ತಿದ್ದರು ಉಬ್ಬಸ ಜೋರಾಗುವ ಭಯದಿಂದ.

''ಪುತ್ರ ಶೋಕದಿಂದ 'ಈ ಸಲ ಕೋಲಕ್ಕೆ ಪಾತ್ರಿಯಾಗಿ ಬೇರೆ ಯಾರನ್ನಾದರೂ ಕರೆಯಿರಿ ಎಂದು ಹೇಳುತ್ತಲಿದ್ದಾನೆ ತುಕ್ರ. ಜನರ ಒತ್ತಾಯಕ್ಕೆ ಮಣಿದು ಒಪ್ಪಿದಾ ಅನ್ನು...'' ಎಂದು ಬರೆದಿದ್ದರು.

ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ, ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸವರ್ಥ್

ತಿಂದು ಕೆಟ್ಟವರಿಲ್ಲವೋ!

ಡಿ.ಎ.ಶಾಮಣ್ಣ
ನಂ.೧೮೯೧,'ಆರಭಿ',೧ನೇ ಮೇನ್,
೩ನೇ ಕ್ರಾಸ್,ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

ತಟ್ಟೆಯಲ್ಲಿ ಪೇರಿಸಿದ್ದ ಕರಿದ ತಿಂಡಿಗಳನ್ನು ಒಂದೊಂದಾಗಿ ಹಾಕಿಕೊಳ್ಳುತ್ತ, ಅದರ ರುಚಿಯನ್ನು ನಮ್ಮಮ್ಮ ನಿಧಾನವಾಗಿ ಆಸ್ವಾದಿಸುತ್ತಿದ್ದರು. "ಆಹಾರ ತಜ್ಞರು ಮತ್ತು ಸ್ವಾಸ್ಥ್ಯ ಗುರುಗಳ ಕಿವಿಮಾತುಗಳನ್ನು ನಿರ್ಲಕ್ಷಿಸಿ ಇದೇ ರೀತಿ ತಿನ್ನುತ್ತಾ ಹೋದರೆ ನೀವು ಚಿಕ್ಕ ವಯಸ್ಸಿಗೇ ತೀರಿಕೊಡೀರಿ" ಎಂದು ಅವರನ್ನು ನಾನು ಟೀಕಿಸಿದೆ. ತನ್ನ ತಾಯಿಗೇ ಇಷ್ಟೊಂದು ನಿಷ್ಠುರವಾಗಿ ಮಾತನಾಡುವ ಇವನು ಇನ್ನೆಂಥ ನಿರ್ದಯೀ ಮಗನಿರಬೇಕು ಎಂದು ನಿಮಗನಿಸಬಹುದು. ಆದರೆ ಈ ಮಾತುಗಳನ್ನು ನಾನು ನಮ್ಮಮ್ಮನಿಗೆ ಹೇಳಿದಾಗ ಅವರಿಗೆ ೯೯ ವರ್ಷ ವಯಸ್ಸಾಗಿತ್ತು!

ನಿಜವಾದ ಸಂಗತಿಯೆಂದರೆ, 'ಏನನ್ನು ತಿನ್ನುವುದು ಸರಿ' ಎಂಬುದರ ಬಗ್ಗೆ ಸ್ವಲ್ಪವೂ ಚಿಂತಿಸದೆ ನಮ್ಮಮ್ಮ ಇಪ್ಪತ್ತನೆಯ ಶತಮಾನವನ್ನು ಪೂರ್ತಿ ಕಳೆದಿದ್ದರು. ಕೆಲವು ತಿನಿಸುಗಳು ತನಗೆ ತೊಂದರೆ ಮಾಡಬಹುದೆಂದು ಆಕೆಗೆ ಎಂದೂ ಅನಿಸಿರಲಿಲ್ಲ. ಅದರ ಬಗ್ಗೆ ಕ್ಷಣಿಕ ಕಾಳಜಿಯಾಗಲೀ, ಆತಂಕವಾಗಲೀ ಅವರಿಗಿರಲಿಲ್ಲ. ಆಹಾರ ಪದಾರ್ಥಗಳು ರುಚಿಯಾಗಿದ್ದರೆ ಅವು ಆರೋಗ್ಯಕ್ಕೆ ಒಳ್ಳೆಯವೇ ಆಗಿರಬೇಕು. ಅಷ್ಟೆ.

ಆಹಾರದ ಬಗೆಗಿದ್ದ ಈ ನಿರಾತಂಕ ಮನೋಭಾವವೇ ನಮ್ಮಮ್ಮನ ಆರೋಗ್ಯದ ಗುಟ್ಟೆಂದು ನಾನು ನಂಬಿದ್ದೇನೆ. ಊಟ ಮಾಡುವಾಗ ಆರಾಮವಾಗಿರಿ. ಏನನ್ನು ತಿನ್ನುತ್ತಿದ್ದೇನೆಂಬುದರ ಬಗ್ಗೆ ಆತಂಕಪಟ್ಟುಕೊಳ್ಳಬೇಡಿ. ಆಗ, ಪಚನ ಶಕ್ತಿಯನ್ನು ಹೆಚ್ಚಿಸಿ, ಆಹಾರವನ್ನು ಚೆನ್ನಾಗಿ ಜೀರ್ಣಿಸಿಕೊಳ್ಳಲು ಸಹಾಯ ಮಾಡುವುದರ ಮೂಲಕ ನಿಮ್ಮ ನರವ್ಯೂಹ ನಿಮಗೆ ತಕ್ಕ ಪ್ರತಿಫಲ ನೀಡುತ್ತದೆ!

ಹಾಗೆ ಮಾಡದೆ, ಬರೇ ಬೇಯಿಸಿದ ಸೊಪ್ಪನ್ನು (ಆರೋಗ್ಯಕ್ಕೆ ಒಳ್ಳೆಯದೆಂದು) ತುಡಿತದಿಂದ ತಿನ್ನುತ್ತ, ಇನ್ನೊಂದು ಲೋಟ ನೀರು ಮಜ್ಜಿಗೆ ಕುಡಿದರೆ ಎಲ್ಲಿ ತೊಂದರೆಯಾಗುವುದೋ ಎಂದು ಸಂಕಟಪಟ್ಟುಕೊಂಡಲ್ಲಿ, ಸುಖಭೋಜನಕ್ಕೆ ವಿರೋಧವಾದ ಮನೋಧರ್ಮ ಸೃಷ್ಟಿಯಾಗುತ್ತದೆ. ನಿಮ್ಮ ದೇಹ ಇದನ್ನು ಖಂಡಿತ ಒಪ್ಪುವುದಿಲ್ಲ. ದಂಗೆ ಏಳುತ್ತದೆ. ಆಹಾರಸೇವನೆಯಲ್ಲಿ ನೀವು ಸಾಧಿಸಿರುವ ಸಂಯಮದಿಂದ ಸಿಕ್ಕಿರಬಹುದಾದ ಅಲ್ಪ ಸ್ವಲ್ಪ ಪ್ರಯೋಜನಕ್ಕಿಂತ ತೀವ್ರ ಮಾನಸಿಕ ಉದ್ವೇಗದಿಂದಾಗುವ ಹಾನಿಯೇ ಹೆಚ್ಚಾಗಿರುತ್ತದೆ.

ಮಿಕ್ಕವರು ಏನನ್ನು ತಿನ್ನಬೇಕು/ ತಿನ್ನಬಾರದು ಎಂಬುದನ್ನು ತಿಳಿಸುವುದು ತಮ್ಮ ಸಾಮಾಜಿಕ ಕರ್ತವ್ಯವೆಂದು ಆಧುನಿಕ ಆಹಾರ ಪುರೋಹಿತರು ಮತ್ತು ಸ್ವಾಸ್ಥ್ಯ ಗುರುಗಳು ತಿಳಿಯುತ್ತಾರೆ. ಇವರ ವಾದಗಳಲ್ಲಿ ಎರಡು ದೋಷಗಳಿವೆ. **ಒಂದು** : ತಮ್ಮ ಅಭಿಪ್ರಾಯಗಳನ್ನು ಅವರು ಬದಲಿಸುತ್ತ ಹೋಗುತ್ತಾರೆ. ತಿನ್ನಲು ಯೋಗ್ಯವೆಂದು ಕಳೆದ ವರ್ಷವಷ್ಟೇ ತೀರ್ಮಾನಿಸಲ್ಪಟ್ಟ ದೂಷಿತ ಆಹಾರ ಪದಾರ್ಥವು ನಿಮಗೆ ಒಳ್ಳೆಯದೆಂದು ಈ ವರ್ಷ ಥಟ್ಟನೆ ಗೋಚರವಾಗುತ್ತದೆ!

೨೦೦೧ರ ಫೆಬ್ರವರಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಡೆಸ್ಮಂಡ್ ಮಾರಿಸ್ ರ 'ಎ ಲಿಟಲ್ ಆಫ್ ವಾಟ್ ಯು ಫಾನ್ಸಿ' ಎಂಬ ಲೇಖನದ ಕನ್ನಡಾನುವಾದ

ಎರಡು : ಮಾನವ ಜಾತಿ ವಿಕಾಸವಾಗಿರುವುದು 'ಸರ್ವಭಕ್ಷಕ'ನಾಗಿ ಎಂಬುದನ್ನು ಇವರು ಮರೆತು ಬಿಡುತ್ತಾರೆ. ಪ್ರಾಣಲೋಕದ ಇತರ ಪ್ರತಿಸ್ಪರ್ಧಿಗಳ ಮೇಲೆ ಮಾನವನಿಗಿರುವ ಮೇಲ್ಮೆಗೆ ವಿವಿಧ ಬಗೆಯ ಆಹಾರಗಳನ್ನು ಸೇವಿಸಬಲ್ಲ ಆತನ ವ್ಯಾಪಕ ಭುಂಜನ ಸಾಮರ್ಥ್ಯವೇ ಕಾರಣ. ಹೆಚ್ಚು ಹೆಚ್ಚು ಬಗೆಯ ಆಹಾರವನ್ನು ಸೇವಿಸಿದಷ್ಟೂ ಒಳ್ಳೆಯದೇ. ಇಲ್ಲಿಗೆ ಚರ್ಚೆ ಮುಗಿಯುತ್ತದೆ. ನಮ್ಮ ಅನ್ನನಾಳ ಅಧಿಕ ಆಹಾರವನ್ನು ಸುಲಭವಾಗಿ ವಿಲೇವಾರಿ ಮಾಡಬಲ್ಲದು. ಹೆಚ್ಚು ಹೆಚ್ಚು ಆಹಾರವನ್ನು ಸೇವಿಸಿ: ಬೇಕಾದದ್ದನ್ನು ಆರಿಸಿಕೊಂಡು, ಉಳಿದದ್ದನ್ನು ತ್ಯಜಿಸಲು ಇದು ಅನ್ನನಾಳಕ್ಕೊಂದು ಅವಕಾಶವನ್ನು ನೀಡುತ್ತದೆ!

ಹಾಗಾದರೆ ಈಚಿನ ದಿನಗಳಲ್ಲಿ ಎಷ್ಟೊಂದು ಜನ ಬೊಜ್ಜು, ಅಜೀರ್ಣ ಮತ್ತು ವಿವಿಧ ಆಹಾರ ಸಂಬಂಧೀ ರೋಗಗಳಿಂದ ಏಕೆ ನರಳುತ್ತಾರೆ? ಇದಕ್ಕೆ ಉತ್ತರ ನಮ್ಮ ಜೀವನ ಶೈಲಿಯಲ್ಲಿದೆ. ಕೆಲಸದಲ್ಲಿ ಶ್ರಮ ಕಡಿಮೆಯಾದರೆ ಹಸಿವು ಕಡಿಮೆಯಾಗಿ, ನಾವು ಸೇವಿಸುವ ಆಹಾರದ ಪ್ರಮಾಣವೂ ಕಡಿಮೆಯಾಗಬೇಕು. ಆದರೆ ಕಡಿಮೆ ಶ್ರಮದ ಕೆಲಸದಲ್ಲಿ ತೊಡಗಿರುವ ನಗರವಾಸಿಗಳಾದ ಅನೇಕರಲ್ಲಿ ಆಹಾರ ಸೇವನೆಯ ಪ್ರಮಾಣ ಕಡಿಮೆಯಾಗಿರುವುದಿಲ್ಲ. ನಮ್ಮಲ್ಲಿ ಹೆಚ್ಚಿನ ಮಂದಿ ಕೆಲಸದ ಒತ್ತಡಕ್ಕೆ ಸಿಕ್ಕಿ ಆತಂಕ ಮತ್ತು ಉದ್ವೇಗದ ಮೂಟೆಗಳಾಗಿರುತ್ತೇವೆ. ಇಂಥ/ಈ ಮನಸ್ಥಿತಿಯಲ್ಲಿ ಆಹಾರವನ್ನು ಸೇವಿಸಿದಾಗ, ಪಚನಕ್ರಿಯೆಗೆ ಬೇಕಾದ ಸೂಚನೆಗಳನ್ನು ನರವ್ಯೂಹ ಅನ್ನನಾಳಕ್ಕೆ ಸರಿಯಾಗಿ ನೀಡುವುದಿಲ್ಲ. ಹಸಿವನ್ನು ಇಂಗಿಸಿ ಕೊಳ್ಳುವುದಕ್ಕಿಂತ ಹೆಚ್ಚಾಗಿ ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ನಾವು ತಿನ್ನಲಾರಂಭಿಸುತ್ತೇವೆ- ಖುಷಿಗಾಗಿ ಆಹಾರ ಸೇವನೆ ಮಾಡುತ್ತೇವೆ.

ಆಹಾರವನ್ನು ಆತುರವಿಲ್ಲದೆ, ನಿಧಾನವಾಗಿ ಸ್ವಾದಿಸಿ, ಸವಿದು, ಅನುಭವಿಸಿ ಅರಗಿಸಿಕೊಳ್ಳಬೇಕು. ವೈಯಕ್ತಿಕವಾಗಿ ನಾನು ಹತ್ತು ವರ್ಷಗಳ ಹಿಂದೆಯೇ ಸಾಯುತ್ತೇನೆಂದು ನಿರೀಕ್ಷಿಸಿದ್ದೆ (ಕೇವಲ ಅಂಕಿ ಅಂಶಗಳ ಆಧಾರದ ಮೇಲೆ) ಹೀಗಾಗಿ ನನಗಿದ್ದ ಸ್ವಲ್ಪ ಸಮಯದಲ್ಲಿ ನಾನು ತಿಳಿದಿದ್ದ ಪ್ರತಿಯೊಂದು ತಿಂಡಿ ತಿನಿಸನ್ನೂ ಒಂದು ಬಾರಿಯಾದರು ತಯಾರಿಸಬೇಕೆಂದು ನಿರ್ಧರಿಸಿದೆ. ನಾನಿನ್ನೂ ಇಲ್ಲಿಯೇ ಇದ್ದೇನೆ. ಸ್ವಾಸ್ಥ್ಯ ಪೊಲೀಸರ ಬಗ್ಗೆ ನನಗಿರುವ ಆಳವಾದ ಅಗೌರವವೇ ಇದಕ್ಕೆ ಕಾರಣವಿರಬಹುದು!

ನಮ್ಮಮ್ಮ ಇನ್ನೇನು ಕೊನೆಯುಸಿರೆಳೆಯುತ್ತಿದ್ದಾರೆ ಎನ್ನುವಾಗ ನಾನವರಿಗೆ ''ಏನಾದರೂ ಬೇಕೆ ?'', ಎಂದು ಕೇಳಿದೆ. ''ಸ್ವಲ್ಪ ಮದ್ಯ ಮತ್ತು ಮನಸ್ಸನ್ನು ಹುರಿದುಂಬಿಸುವ ಯಾವುದಾದರೊಂದು ಮದ್ದು,'' ಎಂದು ಪಿಸುಗುಟ್ಟಿದ ಅವರು '' ಈ ಪ್ರಪಂಚವನ್ನು ತೊರೆಯಲೇ ಬೇಕಾದರೆ ಖುಷಿಯಿಂದಲೇ ಹೋಗೋಣ'' ಎಂದರು. ಎಂದೇ ಅಭಿನವ ಹರಿದಾಸರ ಸಂತ ನುಡಿ :

''ತಿಂದು ಕೆಟ್ಟವರಿಲ್ಲವೋ ತಿನ್ನದೆ ಕೆಟ್ಟರೆ ಕೆಡಲಿ!''

ಗಂಡಸರ ಗರ್ಭನಿರೋಧಕ ಗುಳಿಗೆಗಳು

ಡಾ : ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಉದ್ಯಮ ಕ್ರಾಂತಿ ಹಾಗೂ ವೈಜ್ಞಾನಿಕ ಪ್ರಗತಿಯ ಫಲವಾಗಿ ಸುಖ ಜೀವನದ ಸೌಲಭ್ಯಗಳು ಹೆಚ್ಚಾದರೂ ಸಾವಿರಾರು ಸಮಸ್ಯೆಗಳನ್ನು ಜಗತ್ತು ಎದುರಿಸುತ್ತಿದೆ. ಒಂದು ಕಡೆ ವಾತಾವರಣ ಕಲುಷಿತಗೊಳ್ಳುತ್ತಿದೆ. ನೈಸರ್ಗಿಕ ಸಂಪನ್ಮೂಲಗಳು ದಿನೇ ದಿನೇ ಕ್ಷೀಣಿಸುತ್ತಿವೆ. ಶಕ್ತ ರಾಷ್ಟ್ರಗಳ ಪೈಪೋಟಿಯಿಂದಾಗಿ ಪರಮಾಣು ಸಮರ ಭೀತಿ ಹೆಚ್ಚುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಮರೆಸುವಂತೆ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಇದನ್ನು 'ಆಸ್ಫೋಟನೆ' ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಬಹಿರಂಗಪಡಿಸಿರುವ ಇತ್ತೀಚಿನ ವರದಿಯ ಪ್ರಕಾರ-ಎಲ್ಲ ರಾಷ್ಟ್ರಗಳು ಕುಟುಂಬ ಯೋಜನಾ ಕಾರ್ಯಕ್ರಮವನ್ನು ಎಷ್ಟೇ ಚುರುಕುಗೊಳಿಸಿ, ತೀವ್ರವಾಗಿ ಜಾರಿಗೊಳಿಸಿದರೂ ಪ್ರಪಂಚದ ಜನಸಂಖ್ಯೆ ಕ್ರಿ.ಶ.೨೦೦೦ನೆಯ ಇಸ್ವಿಯಲ್ಲಿ ಆರುನೂರು ಕೋಟಿಯನ್ನು ಮೀರುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆಯನ್ನು ನೋಡಿದರೆ, ಮುಂದಿನ ಪೀಳಿಗೆಯ ವಿನಾಶಕ್ಕೆ ಇಂದೇ ಭದ್ರಬುನಾದಿಯನ್ನು ಹಾಕಿದಂತಿದೆ. ಹೊಸದಾಗಿ ಹುಟ್ಟುವ ಬಾಯಿಗಳಿಗೆ ಆಹಾರವನ್ನೂ, ಕೈಗಳಿಗೆ ಕೆಲಸವನ್ನೂ, ಮೈಗೆ ಬಟ್ಟೆಯನ್ನೂ, ಮೆದುಳಿಗೆ ಶಿಕ್ಷಣವನ್ನೂ ಒದಗಿಸುವುದು ಎಂಥ ಮುಂದುವರಿದ ರಾಷ್ಟ್ರಗಳಿಗೂ ಅಸಾಧ್ಯದ ಮಾತಾಗಿದೆ.

ಭಾರತಕ್ಕೂ ಜನಸಂಖ್ಯಾ ಸ್ಫೋಟದ ಬಿಸಿ ತಟ್ಟಿದೆ. ''ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ'' ಎಂದು ಹೇಳುವ ಪುರುಷ ಪ್ರಧಾನವಾದ ನಮ್ಮ ಸಮಾಜ ಜನಸಂಖ್ಯಾ ನಿಯಂತ್ರಣದ ಎಲ್ಲ ವಿಧಿವಿಧಾನಗಳನ್ನು ಹೆಣ್ಣಿನ ಹಣೆಗೇ ಕಟ್ಟಿ ಕುಳಿತಿತ್ತು. ತನಗೆ ಸಂಬಂಧವಿಲ್ಲವೆಂಬ ಉದಾಸೀನ ಭಾವನೆ ಬೆಳೆಸಿಕೊಂಡದ್ದರಿಂದ ''ಮಕ್ಕಳಿವರೇ -ನಮ್ಮ ಮಕ್ಕಳಿವರೇ ನಮ್ಮ ಮೂವತ್ತು ಮೂರು ಕೋಟಿ'' ಎಂದು ವರಕವಿ ಬೇಂದ್ರೆಯವರು ಹಾಡಿದ ಮಕ್ಕಳ ಸಂಖ್ಯೆ ಈಗ ಹೆಚ್ಚು ಕಡಿಮೆ ಮೂರುಪಟ್ಟಿನಷ್ಟು ಹೆಚ್ಚಾಗಿದೆ. ಪ್ರಪಂಚದ ಮೂಲೆ ಮೂಲೆಯಲ್ಲೂ ಕುಟುಂಬ ಕಲ್ಯಾಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು, ಗಂಡಸರ ಗರ್ಭನಿರೋಧಕ ಗುಳಿಗೆಗಳ ತಯಾರಿಕೆಗಾಗಿ ವಿಜ್ಞಾನಿಗಳು ಹಗಲಿರುಳು ಹೆಣಗಿದ್ದಾರೆ, ಈಗಲೂ ಹೆಣಗುತ್ತಿದ್ದಾರೆ.

ಒಂದು ಊರಿನ ಕಥೆ

ಇಪ್ಪತ್ತೈದು ವರ್ಷಗಳ ಹಿಂದಿನ ಘಟನೆ. ದಕ್ಷಿಣ ಚೀನಾದ ಜಿಯಾಂಗ-ಸು ಹಳ್ಳಿಯಲ್ಲಿ ವಾಂಗ್ ಎಸ್ಟೇಟ್ ಎಂಬ ಪ್ರದೇಶವಿತ್ತು. ಆ ಪ್ರದೇಶದಲ್ಲಿ ೩೦ ಕುಟುಂಬಗಳು ನೆಲೆಸಿದ್ದುವು. ಅವರೆಲ್ಲರೂ ಸಾಕಷ್ಟು ಶ್ರೀಮಂತರಾಗಿದ್ದರೂ, ಬಹಳ ಜಿಪುಣರಾಗಿದ್ದರು. ತಿಂಡಿ ತಿನಿಸುಗಳನ್ನು ತಯಾರಿಸಲು, ಅಡುಗೆ ಅಂಬಲಿ ಮಾಡಲು ಹತ್ತಿ ಎಣ್ಣೆಯನ್ನೇ ಬಳಸುತ್ತಿದ್ದರು. ಏಕೆಂದರೆ ಅದು ಸೋಯಾಬೀನ್ಸ್ ಎಣ್ಣೆಗಿಂತ ಕಡಿಮೆ ದರದಲ್ಲಿ ಸಿಗುತ್ತಿತ್ತು. ಹತ್ತು ವರ್ಷಕ್ಕೂ ಹೆಚ್ಚು ಕಾಲ ಹೀಗೆ ಮಾಡಿದರು. ಈ ಅವಧಿಯಲ್ಲಿ ಸೋಜಿಗದ ಸಂಗತಿಯೊಂದು ಕಂಡು ಬಂತು.

ಆ ಪ್ರದೇಶದಲ್ಲಿ ಹೊಸ ಕೂಸುಗಳು ಹುಟ್ಟಲೇ ಇಲ್ಲ. ಏಕೆ ? ಎಂಬುದು ಜನರ ತಲೆ ತಿನ್ನ ಹತ್ತಿತು. ''ನಮಗೆ ಯಾವುದೋ ದೇವರ ಶಾಪ ತಟ್ಟಿರಬೇಕು'' ಅಥವಾ ಯಾರಾದರೂ ಮಾಟ ಮೂಡಿಸಿರಬೇಕು'' ಎಂಬ ಹಲವಾರು ಪ್ರಶ್ನೆಗಳು ಹುಟ್ಟಿದುವು. ಜನರು ಕಂಡ ಕಂಡ ದೇವರಿಗೆ ಹರಕೆ ಸಲ್ಲಿಸಿದರು. ಸಾಧು ಸಂತರನ್ನು ಸಂತೃಪ್ತಗೊಳಿಸಿದರು. ಮಕ್ಕಳನ್ನು ಹೆತ್ತು ವಿಧವೆಯರಾದ ಹೆಣ್ಣು-ಮಕ್ಕಳನ್ನು ಮದುವೆ ಮಾಡಿಕೊಂಡರು. ಯಾವುದೂ ಫಲ ನೀಡಲಿಲ್ಲ. ಆ ಪ್ರದೇಶಕ್ಕೆ ಕಾಲಿಟ್ಟ ಹೆಣ್ಣು ಮಕ್ಕಳು ಗರ್ಭಿಣಿಯಾಗಲೇ ಇಲ್ಲ.

ಈ ಸುದ್ದಿ ದೇಶದ ಉದ್ದಗಲ ಹಬ್ಬಿತು. ಜನರನ್ನು ಬೆರಗುಗೊಳಿಸಿತು. ಉತ್ತರ ಹಾಗೂ ಪೂರ್ವ ಚೀನಾದಲ್ಲಿ ಆಗ ಸೋಯಾಬೀನ್ ಸಮೃದ್ಧವಾಗಿ ಬೆಳೆಯತೊಡಗಿದ್ದರಿಂದ ದಕ್ಷಿಣ ಚೀನಾಕ್ಕೆ ಸಾಕಷ್ಟು ಎಣ್ಣೆಯನ್ನು ಸರಬರಾಜು ಮಾಡಲಾಯಿತು. ವಾಂಗ ಎಸ್ಟೇಟಿನ ಜನರು ಸೋಯಾಬೀನ್ ಎಣ್ಣೆಯನ್ನು ಬಳಸಲು ಪ್ರಾರಂಭಿಸಿದರು. ಏಕೆಂದರೆ ಆಗ ಹತ್ತಿ ಎಣ್ಣೆಗಿಂತ ಕಡಿಮೆ ಕಿಮ್ಮತ್ತಿನಲ್ಲಿ ಸೋಯಾ ಬೀನ್ ಸಿಗುತ್ತಿತ್ತು. ಆಶ್ಚರ್ಯಕರ ಘಟನೆಯೊಂದು ಜರುಗಿತು. ಪ್ರತಿಯೊಂದು ಕುಟುಂಬದಲ್ಲೂ ತೊಟ್ಟಿಲು ತೂಗಿದುವು.

ಸಂಶೋಧನೆಗೆ ಸುಳಿವು

ಚೀನಾದ ಸುಪ್ರಸಿದ್ಧ ವಿಜ್ಞಾನಿ ಲಿಯೋ-ಬಾವು ಶು ಸಹಪಾಠಿಗಳೊಂದಿಗೆ ವಾಂಗ ಎಸ್ಟೇಟಿಗೆ ಭೇಟಿ ಕೊಟ್ಟರು. ಅಲ್ಲಿಯ ಪರಿಸ್ಥಿತಿಯ ಅಧ್ಯಯನ ಮಾಡಿದರು. ಕಲೆಹಾಕಿದ ವಿಷಯಗಳನ್ನು ವಿಶ್ಲೇಷಿಸಿದರು. ತಮ್ಮ ಅಂತಿಮ ವರದಿಯಲ್ಲಿ -''ಹತ್ತಿ ಎಣ್ಣೆಯನ್ನು ಜನನ ನಿಯಂತ್ರಣಕ್ಕೆ ಬಳಸಬಹುದು. ಹತ್ತಿ ಎಣ್ಣೆ ಸೇವಿಸುವುದನ್ನು ನಿಲ್ಲಿಸಿದಾಗ ಜನನ ನಿಯಂತ್ರಣ ಪ್ರಭಾವ ತನ್ನಷ್ಟಕ್ಕೆ ತಾನೇ ಮಾಯವಾಗುತ್ತದೆ. ಇದೊಂದು ಅತ್ಯಂತ ಸರಳ, ಸುರಕ್ಷಿತ, ಕಡಿಮೆ ಖರ್ಚಿನ, ನೈಸರ್ಗಿಕ ಜನನ ನಿಯಂತ್ರಣ ವಿಧಾನ'' ಎಂದು ತಿಳಿಸಿದರು.

ಈ ವರದಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ೧೯೪೭ರಲ್ಲಿ ಶಾಂಘಾಯಿ ವೈದ್ಯಕೀಯ ತ್ರೈಮಾಸಿಕದಲ್ಲಿ ದಪ್ಪಕ್ಷರದಲ್ಲಿ ಅಚ್ಚಾಯಿತು. ಆದರೆ ಇದು ಯಾರ ಗಮನವನ್ನೂ ಸೆಳೆಯಲಿಲ್ಲ. ಏಕೆಂದರೆ ಆಗ ಜನಸಂಖ್ಯಾ ಸ್ಫೋಟದ ಬಿಸಿ ತಟ್ಟಿರಲಿಲ್ಲ . ಎಪ್ಪತ್ತರ ದಶಕದಲ್ಲಿ ಹುಬೆಯಿ ಗುಂಪು ಸಂಶೋಧನೆಗೆ ತೊಡಗಿದಾಗ ಲಿಯೋ- ಬಾವು ಶು ರ ವರದಿ ಇವರ ಗಮನ ಸೆಳೆಯಿತು. ಹತ್ತಿಯ ಎಣ್ಣೆ ವೀರ್ಯಾಣು ಉತ್ಪತ್ತಿ ಹತ್ತಿಕ್ಕುವ ಶಕ್ತಿ ಪಡೆದಿದೆ ಎಂಬುದನ್ನು ಪ್ರಾಣಿಗಳಲ್ಲಿ ನಡೆಸಿದ ಪ್ರಯೋಗಗಳಿಂದ ಅವರು ತೋರಿಸಿ ಕೊಟ್ಟರು. ಚೀನಾದ ಉಳಿದ ಸಂಶೋಧಕರು ಹತ್ತಿ ಎಣ್ಣೆಯ ಗುಣ ವಿಶೇಷಗಳನ್ನೆಲ್ಲ ಕಂಡು ಹಿಡಿದರು. ಸಂಶೋಧನೆಯ ಬಿರುಗಾಳಿ ದೇಶದಲ್ಲೆಲ್ಲ ಎದ್ದಿತು. ಪರಿಣಾಮವಾಗಿ ಗರ್ಭನಿರೋಧಕ ಶಕ್ತಿಯನ್ನು ಹತ್ತಿ ಎಣ್ಣೆಯಲ್ಲಿಯ ಹಳದಿ ಡಿನೋಲಿಕೆ ಬಣ್ಣದ ವಸ್ತು-'ಗಾಸಿಪಾಲ್' ಪಡೆದಿದೆ ಎಂಬುದು ಖಚಿತವಾಯಿತು. ೧೯೭೭ರ ಡಿಸೆಂಬರಿನಲ್ಲಿ ಚೀನಾದ ರಾಷ್ಟ್ರೀಯ ಸಮನ್ವಯ ಸಮೂಹ ಏರ್ಪಡಿಸಿದ 'ಗಂಡಸಿನ ಫಲವಂತಿಕೆ ಕಮ್ಮಟ' ದಲ್ಲಿ ಈ ವಿಷಯದ ದೀರ್ಘ ಚರ್ಚೆಯ ಅನಂತರ ಸಂಶೋಧನೆಯ ಗುಟ್ಟು ರಟ್ಟಾಯಿತು. ಗಾಸಿಪಾಲ್ ಸರ್ವಾಂಗೀಣ ಸಾರಾಂಶ 'ಚೈನೀಸ್ ಮೆಡಿಕಲ್ ಜರ್ನಲ್'ನಲ್ಲಿ ಅಚ್ಚಾಗಿ ಪ್ರಪಂಚದ ಪ್ರಮುಖರ ಗಮನವನ್ನು ಸೆಳೆಯಿತು.

ಗುಣ ವಿಶೇಷಗಳು

ಹತ್ತಿಗಿಡದ ಬೀಜ, ಕಾಂಡ ಹಾಗೂ ಬೇರುಗಳಿಂದ ಗಾಸಿಪಾಲನ್ನು ಬೇರ್ಪಡಿಸಲಾಗಿದೆ. ೧೮೮೬ರಲ್ಲಿ ಜೆ.ಲಾಂಗ್‌ಮೋರ್ ಮೊತ್ತ ಮೊದಲು ಇದನ್ನು ಸಂಶೋಧಿಸಿದರು. ೧೮೯೯ರಲ್ಲಿ ರಷ್ಯಾದ ರಸಾಯನ ಶಾಸ್ತ್ರಜ್ಞ ಎಲ್.ಮಾರ್ಚವಸ್ಕಿ ಇದನ್ನು ಹರಳುಗಳ ರೂಪದಲ್ಲಿ ಪಡೆಯುವಲ್ಲಿ ಯಶಸ್ವಿಯಾದರು. ಇದರ ಅಣುತೂಕ ೫೧೮.೫೪ ಇದು ಮೂರು ರೂಪಗಳಲ್ಲಿ ಸಿಗುವುದು- ಅಲ್ಡಿಹೈಡ್, ಹೆಮಿಎಸಿಟಾಲ್ ಮತ್ತು ಕಿಟೊನೊಯ್ಡ್. ಇದು ೧೮೪ ಡಿಗ್ರಿ ಸಿ.ಉಷ್ಣತೆಯಲ್ಲಿ ಕರಗುವುದು. ನೀರಿನಲ್ಲಿ ವಿಲೀನವಾಗದು. ಆದರೆ ಸಾವಯವ ರಾಸಾಯನಿಕಗಳಲ್ಲಿ ತತ್‌ಕ್ಷಣ ವಿಲೀನಿಸುವುದು.

ಹರ್ಪಿಸ್ ಸಿಂಪ್ಲೆಕ್ಸ್ ವಿಷಾಣುಗಳ ಬೆಳವಣಿಗೆಯನ್ನು ಗಾಸಿಪಾಲ್ ತಡೆಯುತ್ತದೆ. ಸೋಡಿಯಮ್-ಗಾಸಿಪಾಲ್-ಬಿಟಾ-ಅಮೈನೋ ಸಲ್ಫೇಟ್ ಹುಚ್ಚುನಾಯಿ ರೋಗಕ್ಕೆ(ರೇಬಿಸ್) ಕಾರಣವಾದ ವಿಷಾಣುವಿನ ವೃದ್ಧಿಯನ್ನು, ಮಿದುಳುಜ್ವರ ವಿಷಾಣುವಿನ ಬೆಳವಣಿಗೆಯನ್ನು ಸಂಪೂರ್ಣ ನಿಷೇಧಿಸುತ್ತದೆ. ಜೊತೆಗೆ ಇದು ಇಂಟರ್‌ಫೆರಾನ್ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಎಂಬುದು ವಿಜ್ಞಾನಿಗಳ ಇತ್ತೀಚಿನ ಪ್ರಯೋಗಗಳಿಂದ ತಿಳಿಯಲು ಸಾಧ್ಯವಾಗಿದೆ.

ಸಂಶೋಧಕರು ಗಾಸಿಪಾಲ್ ಬರಡುತನ ಉಂಟು ಮಾಡುವುದು ಎಂಬುದನ್ನು ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಖಚಿತಪಡಿಸಿದ್ದಾರೆ. ವೀರ್ಯಜನಕ ಸ್ಥಳ ಹಾಗೂ ವೀರ್ಯವಾಹಕ ನಾಳಗಳ ಮೇಲೆ ಯಾವ ಪರಿಣಾಮವನ್ನು ಮಾಡದೇ ವೀರ್ಯಾಣುಗಳ ಚಲನೆಗೆ ಅಡ್ಡಿಯನ್ನೊಡ್ಡಿ, ಬರಡುತನ ಉಂಟಾಗುವಂತೆ ಗಾಸಿಪಾಲ್ ಮಾಡುತ್ತದೆ. ವೀರ್ಯಾಣುಗಳಲ್ಲಿ ವಿಶೇಷವಾಗಿರುವ ಎಲ್.ಡಿ.ಎಚ್.ಎಕ್ಸ್ ಹಾಗೂ ಎ.ಟಿ.ಪಿ.ಯೇಜ ಕಿಣ್ವಗಳ ಕ್ರಿಯೆಗಳಿಗೆ ಕಡಿವಾಣ ಹಾಕುತ್ತದೆ.

ಚೀನಾದ ಹೆಸರಾಂತ ಸಂಶೋಧಕರಾದ ಶಾಹುಜುಹೆನ್-ಕ್ವಿಯನ್ ಹಾಗೂ ಸಂಗಡಿಗರ ಪ್ರಕಾರ ಗಾಸಿಪಾಲ್ ವೃಷಣಗಳಲ್ಲಿ ಪ್ರೋಸ್ಟಾಗ್ಲ್ಯಾಂಡಿನ್ ಉತ್ಪಾದನೆಗೆ ಪ್ರೇರೇಪಿಸುತ್ತದೆ. ಪ್ರೋಸ್ಟಾಗ್ಲ್ಯಾಂಡಿನ್ ತದನಂತರ ವೀರ್ಯಾಣುಗಳು ನಿರ್ಮಾಣ ನಿಷೇಧಿಸುತ್ತದೆ. ಆ್ಯಸ್ಪರಿನ್ ಪ್ರೋಸ್ಟಾಗ್ಲ್ಯಾಂಡಿನ್ ಉತ್ಪಾದನಾ ನಿಷೇಧಕಗಳನ್ನು ಕೊಡುವುದರಿಂದ ಗಾಸಿಪಾಲ್ ಕಾರ್ಯತತ್ಪರತೆ ಕುಗ್ಗುವುದು. ಪ್ರೋಸ್ಟಾಗ್ಲ್ಯಾಂಡಿನ್ ಗಾಸಿಪಾಲ್‌ನೊಡನೆ ಕೊಡುವುದರಿಂದ ಗಾಸಿಪಾಲ್ ಪರಿಣಾಮ ಪ್ರಬಲಗೊಳ್ಳುವುದರೊಂದಿಗೆ ಹೆಚ್ಚು ಪ್ರಭಾವಶಾಲಿಯೂ ಆಗುತ್ತದೆ. ಈ ವೀಕ್ಷಣೆಗಳು ಚೀನಾ ಸಂಶೋಧಕರ ಹೇಳಿಕೆಗಳಿಗೆ ಪುಷ್ಟಿ ನೀಡಿದುವು. ಜಗತ್ತಿನ ಮೂಲೆ ಮೂಲೆಗಳಲ್ಲಿ ನಡೆದ ಅನೇಕ ಸಂಶೋಧನಾ ಅಧ್ಯಯನಗಳು ಗಾಸಿಪಾಲ್ ಹಾರ್ಮೋನುಗಳ ಉತ್ಪಾದನೆಗೆ ಅಡ್ಡಿಯನ್ನೊಡ್ಡುವುದೂ ಇಲ್ಲ. ಲೈಂಗಿಕ ಸ್ವಭಾವದಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ ಎಂಬುದು ಪ್ರಾಣಿಗಳ ಮೇಲಿನ ಪ್ರಯೋಗಗಳಿಂದ ಸಾಬೀತುಪಡಿಸಿದೆ.

ಅನುವಂಶೀಯ ಪರಿಣಾಮಗಳು

ಗಾಸಿಪಾಲ್ ಸರಳ, ಸುರಕ್ಷಿತ, ಪರಿಣಾಮಕಾರಿ ಗಂಡಸರ ಗರ್ಭನಿರೋಧಕ ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಉಪಯೋಗದಿಂದ ಭವಿಷ್ಯದ ಕುಡಿಗಳ ಮೇಲೆ ಯಾವುದಾದರೂ ದುಷ್ಪರಿಣಾಮ ಆಗಬಹುದೇ? ಎಂಬ ಪ್ರಶ್ನೆ ಬರುವುದು ಸಹಜ. ಗಾಸಿಪಾಲ್ ಚಿಕಿತ್ಸೆಗೊಳಗಾದ ಗಂಡು ಇಲಿಗಳು ಚಿಕಿತ್ಸಾ

ವೇಳೆಯಲ್ಲಿ ಮತ್ತು ಗರ್ಭಧಾರಣಾ ಶಕ್ತಿ ಮರಳಿ ಪಡೆದ ನಂತರ ಚಿಕಿತ್ಸೆಗೊಳಪಡದ ಹೆಣ್ಣು ಇಲಿಗಳೊಡನೆ ಕೂಡಿ ಬಾಳುವಂತೆ ಮಾಡಲಾಯಿತು. ಹುಟ್ಟಿದ ಎಫ್೧ ಮತ್ತು ಎಫ್೨ ಸಂತತಿಗಳನ್ನು ಪರೀಕ್ಷಿಸಿದಾಗ ಅವು ಸಾಮಾನ್ಯವಾಗಿದ್ದುವು.

ಇನ್ನೊಂದು ಪ್ರಯೋಗಾಲಯದಲ್ಲಿ ಗರ್ಭಧರಿಸಿದ ಇಲಿಗಳಿಗೆ ಬೇರೆ ಬೇರೆ ಕಾಲಾವಧಿಯವರೆಗೆ ಗಾಸಿಪಾಲ್ ನೀಡಲಾಯಿತು. ಮೊದಲನೆಯ ತಲೆಮಾರಿನ ಸಂತತಿಗಳು ಸಾಮಾನ್ಯವಾಗಿದ್ದುವು. ವರ್ಣಕೆಗಳ ವೈಪರೀತ್ಯಗಳೂ ಇರಲಿಲ್ಲ. ಎರಡನೆಯ ತಲೆಮಾರಿನ ಸಂತತಿ ಸಹಿತ ಸಾಮಾನ್ಯವಾಗಿಯೇ ಇದ್ದುವು. ಆಮ್ಲ ಪರೀಕ್ಷೆ ಗಾಸಿಪಾಲ್ ವಂಶಾವಳಿ ವೈಪರೀತ್ಯ ಗುಣರಹಿತವಾಗಿದೆ ಎಂಬುದನ್ನು ಖಚಿತಪಡಿಸಿದೆ.

ಮಂಗನಿಂದ ಮಾನವಂಗೆ

ಪ್ರಾಣಿಗಳ ಮೇಲಿನ ಪ್ರಯೋಗಗಳಿಂದ ದೊರೆತ ಉತ್ತಮ ಫಲಿತಾಂಶಗಳಿಂದ ಪ್ರಭಾವಿತರಾದ ಸಂಶೋಧಕರು, ಮನುಷ್ಯರಿಗೆ ಎಲ್ಲ ದೃಷ್ಟಿಯಿಂದ ಅತ್ಯಂತ ಸಮೀಪವಾಗಿರುವ ಬೊನೆಟ್ ಮಂಗಗಳನ್ನು ಪ್ರಯೋಗಕ್ಕೆ ಆಯ್ಕೆ ಮಾಡಿದರು. ಗಾಸಿಪಾಲನ್ನು ಗುಳಿಗೆಯ ರೂಪದಲ್ಲಿ ಪ್ರತಿದಿನ ನುಂಗಿಸಲಾಯಿತು. ೧೨ ವಾರಗಳ ಔಷಧೋಪಚಾರದ ಅನಂತರ ಬರಡುತನ ಕಂಡು ಬಂದಿತು. ವೀರ್ಯದ ವಿಶ್ಲೇಷಣೆ ಮಾಡಿದಾಗ ವೀರ್ಯಾಣುಗಳ ಸಾಂದ್ರತೆ, ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿತ್ತು. ವೀರ್ಯಾಣುಗಳು ಚಲನಶಕ್ತಿಯನ್ನು ಕಳೆದುಕೊಂಡಿದ್ದುವು. ಔಷಧೋಪಚಾರ ನಿಲ್ಲಿಸಿದ ೧೦-೧೨ ವಾರಗಳ ಅನಂತರ ವೀರ್ಯ ವಿಶ್ಲೇಷಣೆ ಮಾಡಲು ವೀರ್ಯಾಣುಗಳ ಸಾಂದ್ರತೆ, ಸಂಖ್ಯೆ, ಚಲನಶಕ್ತಿ ಮೊದಲಿನಂತೆ ಸಾಮಾನ್ಯ ಸ್ಥಿತಿಗೆ ಬಂದಿರುವುದು ಕಂಡು ಬಂದಿತು.

ಜನಸಂಖ್ಯಾ ಸ್ಫೋಟದ ಬಿಸಿ ಜಗತ್ತಿಗೆ ೧೯೭೨ರ ವೇಳೆಗೆ ಸಾಕಷ್ಟು ತಟ್ಟಿತ್ತು. ಬಳಕೆಯಲ್ಲಿದ್ದ ವಿಧಾನಗಳು ಹೆಣ್ಣು ಮಕ್ಕಳಿಗೇ ಸೀಮಿತವಾಗಿದ್ದುವು. ಅಲ್ಲಲ್ಲಿ ಮಹಿಳಾ ಸಂಘಟನೆಗಳು ಇದರ ವಿರುದ್ಧ ಸಿಡಿದೆದ್ದು ಧ್ವನಿಯೆತ್ತಿದ್ದುವು. ಗಂಡಸರ ಗರ್ಭನಿರೋಧಕ ಗುಳಿಗೆ ತಯಾರಿಕೆಯತ್ತ ತಲೆ ಹಾಕುವಲ್ಲಿ ಇದು ಸಹಾಯಕವಾಯಿತು. ಪರಿಣಾಮವಾಗಿ ಚೀನಾದ ಕ್ವಿಯಾಮ್ ಹಾಗೂ ಸಂಗಡಿಗರು ಮೊದಲ ಬಾರಿಗೆ ಮಾನವರ ಮೇಲೆ ಗಾಸಿಪಾಲ್ ಪರಿಣಾಮಗಳನ್ನು ಕಂಡು ಹಿಡಿಯಲು ಆಸಕ್ತರಾದರು. ಇದಕ್ಕಾಗಿ ೨೫ ತರುಣರನ್ನು ಬಳಸಿಕೊಂಡರು. ಪರಿಣಾಮಗಳು ಸಂಶೋಧಕರಿಗೆ ತೃಪ್ತಿ ತಂದವು. ಪ್ರಯೋಗಕ್ಕಾಗಿ ಬಳಸಿದ ಸಂಖ್ಯೆ ಕಡಿಮೆಯಿರುವುದರಿಂದ ಇದರ ಅಧ್ಯಯನದಿಂದ ದೊರೆತ ಪರಿಣಾಮಗಳನ್ನು ಇಡಿಯಾಗಿ ಒಪ್ಪುವುದು ತಪ್ಪು ಎಂಬ ಅಪಸ್ವರ ಎದ್ದಿತು.

ಗಾಸಿಪಾಲ್‌ನಲ್ಲಿ ವಿಶ್ವಾಸ ಹೊಂದಿದ ಸಂಶೋಧಕರು ಇದರಿಂದ ಕುಗ್ಗಲಿಲ್ಲ. ಟೀಕೆ ಟಿಪ್ಪಣಿಗಳನ್ನು ಸ್ಫೂರ್ತಿಯಿಂದ ಸ್ವೀಕರಿಸಿದರು. ೯೦೦೦ ಜನರನ್ನು ಆರಿಸಿದರು. ಅವರಿಗೆಲ್ಲಾ ಗಾಸಿಪಾಲ್ ಆ್ಯಸಿಟಿಕ್ ಆಮ್ಲ ಮತ್ತು ಗಾಸಿಪಾಲ್ ಫಾರ್ಮಿಕ್ ಆಮ್ಲಗಳ ಗುಳಿಗೆಗಳನ್ನು ಕೊಟ್ಟರು. ಮೊದಲ ಮೂರು ತಿಂಗಳವರೆಗೆ ಪ್ರತಿದಿನ ೨೦ ಮಿ.ಗ್ರಾಮ್‌ನಂತೆ ಅದನ್ನು ಕೊಡಲಾಯಿತು. ಮುಂದೆ ವಾರಕ್ಕೊಮ್ಮೆ ೫೦-೬೦ ಮಿ.ಗ್ರಾಮ್ ಗಾಸಿಪಾಲ್ ನೀಡಲಾಯಿತು. ೬೦ ದಿನಗಳ ಔಷಧೋಪಚಾರದ ತರುವಾಯ ಬರಡುತನದ ಮೊದಲ ಚಿಹ್ನೆ ಕಾಣಿಸಿಕೊಂಡಿತು. ವೀರ್ಯಾಣುಗಳು ಚಲನಶಕ್ತಿ ಕಳೆದುಕೊಂಡಿದ್ದುವು. ಮತ್ತೆ ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತ ಕೊನೆಗೆ

ವೀರ್ಯವು ವೀರ್ಯಾಣುರಹಿತವಾಗುವುದು. ಗರ್ಭನಿರೋಧಕತೆಯ ಪ್ರಭಾವ ಪ್ರತಿಶತ ೯೮.೪ರಷ್ಟು ಪರಿಣಾಮಕಾರಿಯಾಗಿರುವುದು ಕಂಡುಬಂದಿತು.

ಸಂಶೋಧಕರು ಇಷ್ಟಕ್ಕೇ ಸಂತುಷ್ಟರಾಗಲಿಲ್ಲ. ಔಷಧೋಪಚಾರದಿಂದಾದ ಪರಿಣಾಮಗಳನ್ನು ವಿಪರ್ಯಸ್ಥ ಮಾಡಲು ಸಾಧ್ಯವೆ? ಎಂಬುದರ ಬಗ್ಗೆ ಹಗಲಿರುಳು ಪರಿಶೀಲಿಸಿದರು. ಇದರ ಬಗ್ಗೆ ಮತ್ತೆ ಮರು ಶಂಶೋಧನೆಗೈದರು. ಗಾಸಿಪಾಲ್ ಚಿಕಿತ್ಸೆಯಿಂದ ಕಳೆದುಕೊಂಡ ಗರ್ಭಧಾರಣಾ ಶಕ್ತಿಯನ್ನು ಯಾವ ಲೋಪದೋಷವಿಲ್ಲದೆ, ನ್ಯೂನತೆಯ ನೆರಳು ಇಲ್ಲದೆ ಮರಳಿ ಪಡೆಯಲು ಸಾಧ್ಯ ಎಂಬುದು ಖಚಿತಗೊಂಡಾಗ ಸಮಾಧಾನದ ನಿಟ್ಟುಸಿರು ಬಿಟ್ಟರು.

ದುಷ್ಪರಿಣಾಮಗಳು

ತೀವ್ರ ಸ್ವರೂಪದ ದುಷ್ಪರಿಣಾಮಗಳು ಯಾವುದೇ ಸಂಶೋಧನಾ ಅಧ್ಯಯನದಲ್ಲಿ ಕಂಡುಬಂದಿಲ್ಲ. ವಿಜ್ಞಾನಿಗಳ ಗಮನಕ್ಕೆ ಬಂದ ಸಣ್ಣಪುಟ್ಟ ದುಷ್ಪರಿಣಾಮಗಳೆಂದರೆ ಆಯಾಸವಾಗುವುದು. ನಾಲಿಗೆ ಒಣಗುವುದು, ಹಸಿವು ಕಡಿಮೆಯಾಗುವುದು, ಚರ್ಮದ ಮೇಲೆ ಸಣ್ಣ ಸಣ್ಣ ಕೆಂಪು ಗುಳ್ಳೆ ಏಳುವುದು... ಇತ್ಯಾದಿ. ಗಾಸಿಪಾಲ್ ಸೇವಿಸಿದಾಗ ಶರೀರದಿಂದ ಪೊಟ್ಯಾಸಿಯಮ್ ಲವಣಗಳು ಹೆಚ್ಚು ವಿಸರ್ಜಿಸಲ್ಪಡುವುದರಿಂದ ಪೊಟ್ಯಾಸಿಯಮ್ ಕೊರತೆ ಕಂಡುಬರುತ್ತದೆ. ತಲೆದೋರುವ ಸಣ್ಣಪುಟ್ಟ ದುಷ್ಪರಿಣಾಮಗಳು ಪೊಟ್ಯಾಸಿಯಮ್ ಕೊರತೆಯಿಂದಾದವು. ಅವೆಲ್ಲವೂ ಪೂರಕ ಪೊಟ್ಯಾಸಿಯಮ್ ಕೊಡುವುದರಿಂದ ಮಾಯವಾಗುವವು. ಗಾಸಿಪಾಲ್ ಚಿಕಿತ್ಸೆಯೊಡನೆ ಪೊಟ್ಯಾಸಿಯಮ್ ಕ್ಲೋರೈಡ್‌ನ್ನು ಕೊಟ್ಟಲ್ಲಿ ಯಾವ ದುಷ್ಪರಿಣಾಮಗಳೂ ಹಣಕಿ ಹಾಕುವುದಿಲ್ಲ.

ಜಾಗತಿಕ ಆರೋಗ್ಯ ಸಂಸ್ಥೆ ಅಮೆರಿಕೆಯ ಮಕ್ಕಳ ಆರೋಗ್ಯ ಹಾಗೂ ಮಾನವನ ಸಂಪನ್ಮೂಲಾಭಿವೃದ್ಧಿಯ ರಾಷ್ಟ್ರೀಯ ಸಂಸ್ಥೆ ರಾಕ್‌ಫೆಲ್ಲರ್ ಫೌಂಡೇಶನ್‌ಗಳ ಗರ್ಭನಿರೋಧಕ ಸಂಶೋಧನಾ ವಿಜ್ಞಾನಿಗಳು ಗಾಸಿಪಾಲ್ ರಾಸಾಯನಿಕವು ಯಾವ ತೊಡಕು ತೊಂದರೆಗಳನ್ನು ಉಡುಗೊರೆಯಾಗಿ ನೀಡದ ಏಕೈಕ ಗಂಡಸರ ಗರ್ಭನಿರೋಧಕ ವಸ್ತು ಎಂಬುದನ್ನು ಒಪ್ಪಿದ್ದಾರೆ. ಇನ್ನಷ್ಟು ಪ್ರಯತ್ನಪಟ್ಟು ಹೆಚ್ಚು ಶಕ್ತಿಯುತ, ಹೆಚ್ಚು ಪರಿಣಾಮಕಾರಿ ಕ್ರಿಯಾತ್ಮಕ ಘಟಕಗಳನ್ನು ಪಡೆಯುವಲ್ಲಿ ಯಶಸ್ವಿಯಾದಲ್ಲಿ ಗಾಸಿಪಾಲ್ ಸಾಮರ್ಥ್ಯ ಹೆಚ್ಚುವಲ್ಲಿ ಸಂಶಯವಿಲ್ಲ. ಈ ದಿಶೆಯಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಮಹಾಮಂಡಳಿ ಹಿಂದೆ ಬಿದ್ದಿಲ್ಲ. ಗಾಸಿಪಾಲನ್ನು ಗಂಡಸರ ಗರ್ಭನಿರೋಧಕ ಗುಳಿಗೆಗಳನ್ನಾಗಿ ಹೊರತರುವಲ್ಲಿ ಅದು ಹೆಣಗುತ್ತಲೇ ಇದೆ. ಅಂತಾರಾಷ್ಟ್ರೀಯ ಔಷಧಿ ನಿಯಂತ್ರಣ ಮಹಾಮಂಡಳಿ ನಿಗದಿಪಡಿಸಿದ ಎಲ್ಲ ವಿಷಮತೆಯ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ, ದುಷ್ಪರಿಣಾಮ ರಹಿತವಾಗಿದೆ ಎಂದು ಅಧಿಕೃತವಾಗಿ ಎರಡು ತಿಂಗಳ ಹಿಂದೆಯಷ್ಟೇ ಘೋಷಿಸಲ್ಪಟ್ಟಿದೆ. ಈಗ ಗಾಸಿಪಾಲ್ ತಯಾರಿಸಲು ಎಫ್.ಡಿ.ಎ. (ಫುಡ್ ಆ್ಯಂಡ್ ಡ್ರಗ್ ಎಡ್ಮಿನಿಸ್ಟ್ರೇಶನ್) ಅನುಮತಿ ಸಿಕ್ಕಲ್ಲಿ, ಈ ದಶಕದ ಕೊನೆಗೆ ಗಂಡಸರ ಗರ್ಭ ನಿರೋಧಕ ಗುಳಿಗೆಯಾಗಿ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬರುವುದು. ಇದರಿಂದ ಜನಸಂಖ್ಯಾ ಸ್ಫೋಟದ ಸದ್ದನ್ನು ಸ್ವಲ್ಪವಾದರೂ ತಗ್ಗಿಸಬಹುದು.

ಉಡುಗೊರೆ ನೀಡುವ ಕಲೆ

ಲೀಲಾಮಣ್ಣಾಲ
೪೮೦, ೧ನೇ ಮಹಡಿ, ಪೋಸ್ಟಲ್
ಕಾಲೋನಿ, ೧ನೇ ಹಂತ,
ವಿಶ್ವೇಶ್ವರನಗರ, ಮೈಸೂರು-೮

ಮುಂಬೈಯ ಬ್ಯಾಂಕ್ ಒಂದರಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಬಲರಾಮ್ ಮೆನನ್, ಅಂದು ಅಪರಾಹ್ನ ನಿಗದಿತ ಸಮಯಕ್ಕೆ ಮುಂಚಿತವಾಗಿ ಮನೆಗೆ ಬಂದ. ಮಧ್ಯಾಹ್ನದ ಲಘು ನಿದ್ದೆಗಾಗಿ ಶಯ್ಯಾಗೃಹಕ್ಕೆ ಹೋದ. ಅಂದು ಅವನ ಐವತ್ತನೇ ವರ್ಷದ ಹುಟ್ಟುಹಬ್ಬ, ಒಂದೆರಡು ತಾಸುಗಳ ಬಳಿಕ ಕೋಣೆಗೆ ಆಗಮಿಸಿದ ಗೀತಾ ಮೆಲು ದನಿಯಿಂದ ಕೂಗಿ, ಪತಿಯನ್ನು ಎಬ್ಬಿಸಿದಳು. ''ಯಾರು ಬಂದಿದ್ದಾರೆ ನೋಡಿ !'' ಎಂದು ಕಾತರದ ಭಾವದಿಂದ ನುಡಿದು ಪತಿಯನ್ನು ಹಜಾರಕ್ಕೆ ಕರೆತಂದಳು.

ಹಾಲ್‌ಗೆ ಬಲರಾಮ್ ಬರುತ್ತಿದ್ದಂತೆಯೇ ಆಶ್ಚರ್ಯ ಚಕಿತನಾಗಿ ನಿಂತುಬಿಟ್ಟ. ಅವನು ಕನಸಿನಲ್ಲೂ ನೆನೆಸಿರದಿದ್ದ ದೃಶ್ಯ ಕಣ್ಣೆದುರು ಸಾಕಾರಗೊಂಡಿತ್ತು. ಕೋಝಿಖೋಡ್‌ನಿಂದ ಆಗಮಿಸಿದ್ದ ತಾಯಿ ಮತ್ತು ತಮ್ಮ, ಬೆಂಗಳೂರಿನಿಂದ ಬಂದಿದ್ದ ಇನ್ನೊಬ್ಬ ಸಹೋದರ ಹಾಗೂ ಆತನ ಹೆಂಡತಿ ! ಇವರೆಲ್ಲರ ಆಗಮನವನ್ನು ಯೋಜಿಸಿ, ಆಹ್ವಾನಿಸಿದ್ದವರು ಮೆನನ್‌ನ ಇಪ್ಪತ್ತೊಂದು ವರ್ಷ ವಯಸ್ಸಿನ ಮಗ ಅಜಿತ್ ಮತ್ತು ಹದಿನೈದರ ಮಗಳು ಆರತಿ! ತಮ್ಮ ಪ್ರೀತಿಯ ಪಪ್ಪನ ಐವತ್ತನೇ ಹುಟ್ಟುಹಬ್ಬಕ್ಕೆ ವಿಶೇಷವಾದೊಂದು ಉಡುಗೊರೆ ನೀಡಲು ಅವರು ಬಯಸಿದ್ದರು. ಪ್ರೀತಿಯ ಬಂಧುಗಳ ಆಗಮನ ಪಪ್ಪನಿಗೆ ಬಹಳ ಸಂತೋಷ ನೀಡಬಹುದೆಂದು ಅವರು ಎಣಿಕೆ ಹಾಕಿದರು. ತಂದೆಗೆ ಮಧುರಾ ಘಾತವನ್ನು ನೀಡುವ ಉದ್ದೇಶದಿಂದ ವಿಷಯವನ್ನು ಗುಟ್ಟಾಗಿ ಇಟ್ಟಿದ್ದರು! ''ಜೀವಮಾನದಲ್ಲಿ ನಾನು ಸ್ವೀಕರಿಸಿದ ಅತ್ಯದ್ಭುತ ಉಡುಗೊರೆಯೆಂದರೆ ಅದೇ.....!'' ಮೆನನ್ ಸಂತೋಷದಿಂದ ಜ್ಞಾಪಿಸಿಕೊಳ್ಳುತ್ತಾನೆ.

ಮೆನನ್ ಅಭಿಪ್ರಾಯದಂತೆ ಉತ್ತಮ ಅಭಿರುಚಿಯಿಂದ ಆಯ್ದ ಉಡುಗೊರೆಯು ಸ್ವೀಕರಿಸುವವನಿಗೆ ಸಂತೋಷವನ್ನು ನೀಡುವುದಷ್ಟೇ ಅಲ್ಲದೆ, ನೀಡಿದವನ ಬಗ್ಗೆ ಸದಭಿಪ್ರಾಯವನ್ನು ಆತ್ಮೀಯತೆಯನ್ನೂ ಮೂಡಿಸುತ್ತದೆ. ಬದಲಾಗಿ ನೀವು ಅವಸರದಿಂದ ಮತ್ತು ಮುಂದಾಲೋಚನೆ ಇಲ್ಲದೆ ಉಡುಗೊರೆ ಆಯ್ಕೆ ಮಾಡಿದಾಗ, ಸ್ವೀಕರಿಸುವಾತನ ಮನಸ್ಸಿನಲ್ಲಿ ಅಹಿತಕರ ಭಾವನೆ ಮೂಡುವ ಸಾಧ್ಯತೆಯೂ ಇದೆ.

ನಮ್ಮಲ್ಲಿ ಅನೇಕರಿಗೆ ಉಡುಗೊರೆ ನೀಡುವುದೆಂದರೆ ಅಮಿತ ಆನಂದ! ಎರಡೂವರೆ ಸಾವಿರ ವರ್ಷಗಳ ಹಿಂದೆ ಗ್ರೀಕ್ ನಾಟಕಕಾರ ಯೂರಿಪಿಡಸ್ ಹೇಳಿದ ಮಾತು ಇಂದಿಗೂ ಪ್ರಸ್ತುತ.

''ನಾನು ಐಶ್ವರ್ಯಕ್ಕೆ ಬೆಲೆಕೊಡುತ್ತೇನೆ. ಅದರಿಂದ ಸುಂದರ ವಸ್ತುವನ್ನು ಖರೀದಿಸಿ ಸ್ನೇಹಿತರಿಗೆ ಉಡುಗೊರೆ ನೀಡಬಹುದು !''

ಪರಿಪೂರ್ಣ ಉಡುಗೊರೆಯ ಬಗ್ಗೆ, ಒಂದು ಸರಳ ಸೂತ್ರವನ್ನು ನಿಮ್ಮ ಮುಂದೆ ಇಡುವುದು ಕಷ್ಟಸಾಧ್ಯ. ಉಡುಗೊರೆ ಪಡೆಯುವವನ ಬಗ್ಗೆ ಚೆನ್ನಾಗಿ ಅರಿತಿದ್ದರೆ, ಆಯ್ಕೆ ಸುಲಭ. ಆತನ ಅಭಿರುಚಿ, ಅಗತ್ಯ ಹಾಗೂ ಕನಸನ್ನು ನೀವು ಅರಿತಿದ್ದರಂತೂ ಆಯ್ಕೆ ಅತ್ಯುತ್ತಮವಾದೀತು. ಒಂದು ವೇಳೆ ಆಯ್ಕೆಯ

ಫೆಬ್ರವರಿ ೨೦೦೧ನೇ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ಕನಕ ಸಿಂಗ್ ರವರ 'ದಿ ಫೈನ್ ಆರ್ಟ್ ಆಫ್ ಗಿಫ್ಟ್ ಗಿವಿಂಗ್' ಎಂಬ ಲೇಖನದ ಕನ್ನಡಾನುವಾದ

ಬಗ್ಗೆ ನಿಮ್ಮ ಬುದ್ಧಿಶೂನ್ಯವಾಗಿದ್ದ ಪಕ್ಷದಲ್ಲಿ, ಸಂಗಾತಿಯ, ಗೆಳೆಯನ, ಸಹೋದ್ಯೋಗಿಯ (ಯಾರಿಗೆ ಕೊಡಬೇಕಾಗಿದೆಯೋ ಅವರ) ಆಸಕ್ತಿಯೇನೆಂಬುದನ್ನು ಮಾತಿನ ಮಧ್ಯೆ ಉಪಾಯದಿಂದ ತಿಳಿದುಕೊಳ್ಳಬೇಕೆಂದು ಹೇಳುತ್ತಾರೆ. ಪ್ರಸಿದ್ಧ ವಾಣಿಜ್ಯೋದ್ಯಮಿ ನಿಕ್ಕೀವಾಲ್ಗ. ಇಂಥ ವಿಷಯದ ಬಗ್ಗೆ ಕೆಲವೊಮ್ಮೆ ಈಕೆ ಉಚಿತ ಸಲಹೆ ನೀಡುವುದೂ ಇದೆ. ಅವರ ಅಭಿಪ್ರಾಯದಂತೆ ಅತ್ಯಂತ ಖುಷಿ ನೀಡಬಲ್ಲ ಉಡುಗೊರೆ ದುಬಾರಿಯಾಗಿರಬೇಕೆಂದೇನೂ ಇಲ್ಲ!

ಮುಂಬೈಯ ಷರೀಫ್ ನಾನಾ ಮತ್ತು ಅವರ ಪತ್ನಿ ಮುನಿರಾ ಪರಸ್ಪರ ಉಡುಗೊರೆ ನೀಡುವುದು ಸಾಮಾನ್ಯ. ಆದರೆ ಪ್ರೇಮದ ಕಾಣಿಕೆ ತನ್ನ ಹೃದಯವನ್ನು ಸೂರೆಗೊಂಡ ಪ್ರಸಂಗವೊಂದು ಆಕೆಯ ಮನಸ್ಸಿನಲ್ಲಿ ಸದಾ ಹಸುರಾಗಿದೆ. ಅದೊಂದು ಪುಟ್ಟ ಸಂಗೀತ ಪೆಟ್ಟಿಗೆ. ಕೆಲವರ್ಷಗಳ ಹಿಂದೆ ವಿವಾಹ ವಾರ್ಷಿಕೋತ್ಸವದಂದು ನಾನಾ ತಮ್ಮ ಪತ್ನಿಗೆ ನೀಡಿದ್ದ ಉಡುಗೊರೆ!

'' ಆ ಪುಟ್ಟ ಸ್ಟೀರಿಯೋ ಸೆಟ್ಟನ್ನು ನಾನಾ ಕಾರಿನಲ್ಲಿ ಅವಿಸಿಟ್ಟಿದ್ದರು!'' ಮುನಿರಾ ಪ್ರೀತಿಯಿಂದ ಜ್ಞಾಪಿಸಿಕೊಳ್ಳುತ್ತಾರೆ. ''ಅಂದು ನಾನು ಹಾಸಿಗೆ ಬಿಟ್ಟು ಎದ್ದೇ ಇರಲಿಲ್ಲ. ನಾನಾ ಬೆಕ್ಕಿನ ಹೆಜ್ಜೆಯಿಂದ ಎದ್ದು ಹೋದದ್ದು ನನಗೆ ತಿಳಿಯಲಿಲ್ಲ. ಅವರು ಸ್ಟೀರಿಯೋ ಸೆಟ್‌ನೊಂದಿಗೆ ಮತ್ತೆ ಕೋಣೆಯೊಳಗೆ ಬಂದಿರಬೇಕು! ಮುಂಜಾವಿನ ಸವಿನಿದ್ದೆಯಲ್ಲಿದ್ದ ನನ್ನನ್ನು ಲತಾಮಂಗೇಶ್‌ಕರಳ ಮಧುರ ಕಂಠ ತಟ್ಟಿ ಎಬ್ಬಿಸಿತು. ಮುಚ್ಚಿಯೇ ಇದ್ದ ಕಣ್ಣುಗಳನ್ನು ನಾನು ಮೆಲ್ಲನೆ ತೆರೆದೆ. ಎದುರಿಗೇ ಇದ್ದ ಸ್ಟೀರಿಯೋ ಸೆಟ್ ನನ್ನ ಮುಂಜಾವಿನ ಮೊದಲ ನೋಟವನ್ನು ಸೆರೆಹಿಡಿಯಿತು! ಅದರೊಡನೆ ಇದ್ದಿತು, ನಾನು ಬಹುದಿನಗಳಿಂದ ಆಸೆಪಟ್ಟು ಖರೀದಿಸಲು ಇಚ್ಛಿಸಿದ್ದ ಲತಾಳ ಕೋಕಿಲ ಕಂಠದ ಕ್ಯಾಸೆಟ್! ನನ್ನನ್ನು ಖುಷಿಪಡಿಸಲು ನಾನಾ ನಡೆಸಿದ ಈ ಯತ್ನ ನನ್ನ ಹೃದಯವನ್ನು ಗಾಢವಾಗಿ ಸ್ಪರ್ಶಿಸಿತು! ವಿವಾಹ ವಾರ್ಷಿಕೋತ್ಸವದ ಆ ಸವಿಗಳಿಗೆ ಅತ್ಯಂತ ವಿಶೇಷವೆನಿಸಿತು!''

ಮನಶ್ಶಾಸ್ತ್ರಜ್ಞೆ ಜೀರಾಕಾಲಂಜಿ ಮತ್ತು ಆಕೆಯ ಪತಿ ವಿಜಯ್ ತಮ್ಮ ವಿವಾಹದ ಅನಂತರ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಅಲ್ಲಿ ತಮ್ಮ ಸೋದರ ಸಂಬಂಧಿ ಉತ್ಸವ್‌ನ ಮನೆಗೆ ಭೇಟಿಕೊಟ್ಟರು. ನೂತನ ವಧೂ ವರರಿಗೆ ಉಡುಗೊರೆಯೊಂದನ್ನು ನೀಡಲು ಉತ್ಸವ್ ಉತ್ಸುಕನಾಗಿದ್ದ. ಆ ವಸ್ತು ಅತ್ಯಂತ ವಿಶೇಷತೆಯಿಂದ ಅತಿಥಿಗಳ ಮನಸೂರೆಗೊಳ್ಳಬೇಕೆಂಬ ಆಸೆಯೂ ಅವನಿಗಿದ್ದಿತು. ಈ ದಂಪತಿಗಳು ಪುಸ್ತಕಪ್ರಿಯರು. ಅದರಲ್ಲೂ ದಕ್ಷಿಣ ಆಫ್ರಿಕಾದ ಲೇಖಕಿ ನದೀನ್‌ ಗಾರ್ಡಿಸರ್ ಕೃತಿಗಳೆಂದರೆ ಅವರಿಗೆ ಅಚ್ಚು ಮೆಚ್ಚೆಂಬ ಸಂಗತಿ ಉತ್ಸವ್‌ಗೆ ಗೊತ್ತಿದ್ದಿತು. ಆತ ಅಂಗಡಿಗೆ ತೆರಳಿ ಈ ಲೇಖಕಿಯ ಪ್ರಸಿದ್ಧ ಕೃತಿಯೊಂದನ್ನು ಖರೀದಿಸಿದ. ಬಹಳ ಪ್ರಯತ್ನಿಸಿ, ಲೇಖಕಿಯನ್ನು ಸಂಪರ್ಕಿಸಿದ. ಪುಸ್ತಕದ ಮೇಲೊಂದು ಆಕೆಯ ಹಸ್ತಾಕ್ಷರ ಸಂಪಾದಿಸುವುದರಲ್ಲಿ ಯಶಸ್ವಿಯಾದ. ಅನಂತರ ವಿಜಯ್ ದಂಪತಿಗಳಿಗೆ ಈ ಅಪರೂಪದ ಕಾಣಿಕೆ ನೀಡಿದ. ಆಗ ಅವರಿಗಾದ ಆನಂದವನ್ನು ಮಾತುಗಳಲ್ಲಿ ಬಣ್ಣಿಸಲಾದೀತೇ!

''ಅದು ಅತ್ಯಂತ ವಿವೇಚನಾಯುಕ್ತ ಉಡುಗೊರೆಯಾಗಿತ್ತು!'' ಜೀರಾ ಜ್ಞಾಪಿಸಿಕೊಳ್ಳುತ್ತಾಳೆ.

ವಸ್ತುವಿನ ಬೆಲೆಯಲ್ಲ, ಆಯ್ಕೆಯ ಹಿಂದಿನ ಅಭಿರುಚಿ ಹಾಗೂ ವಿವೇಚನೆ ಇದೆಯಲ್ಲಾ ಅದು ಬಹಳ ಮುಖ್ಯವಾದುದು. ನೀವು ನೀಡಿದ ಉಡುಗೊರೆ ಮಹತ್ವ ಪಡೆಯ

ಬೇಕಾದರೆ, ಸ್ವೀಕರಿಸುವವನ ಮನಸ್ಸನ್ನು ಭಾವನಾತ್ಮಕವಾಗಿ ಸೂರೆಗೊಳ್ಳಲು ಸಾಧ್ಯವಾಗ ಬೇಕು. ಆ ಮೂಲಕ ಮಧುರ ಸ್ಮೃತಿಯನ್ನು ನೀಡಬೇಕು.

ಬೆಂಗಳೂರಿನ ಕೈಗಾರೀಕೋದ್ಯಮಿ ವಿಕ್ರಮ್ ಕಿರ್ಲೋಸ್ಕರ್ ಅಮೆರಿಕಾದ ಬೋಸ್ಟನ್ ವಿಶ್ವ ವಿದ್ಯಾಲಯದಿಂದ ಪದವಿ ಸ್ವೀಕಾರ ಮಾಡಿ ಕೊಂಡ ಸಂದರ್ಭದಲ್ಲಿ ಆತನ ತಾತ ಎಸ್. ಎಲ್. ಕಿರ್ಲೋಸ್ಕರ್ ಭಾರತದಿಂದ ಅಮೆರಿಕಕ್ಕೆ ತೆರಳಿದ್ದರು. ಆಗ ಮೊಮ್ಮಗನಿಗೆ ಅವರು ನೀಡಿದ ಪುಟ್ಟ ಬಳುವಳಿ, ವಿಕ್ರಮನ ಮನಸೂರೆ ಗೊಂಡಿತು. ಅದೊಂದು ಹಳೆಯ ಭಾವಚಿತ್ರ. ಆ ಚಿತ್ರದಲ್ಲಿ ವಿಕ್ರಮ್ ಪುಟ್ಟ ಕೂಸು. ತಾತನ ಕಚೇರಿಯಲ್ಲಿ ಕುಳಿತು ನಕ್ಷಾಚಿತ್ರ ಬರೆಯುತ್ತಿದ್ದಾನೆ! ಮೊಮ್ಮಗನ ತಲ್ಲೀನತೆಯನ್ನು ಪ್ರೀತಿಯಿಂದ ವೀಕ್ಷಿಸುತ್ತ ನಿಂತಿದ್ದಾರೆ, ಅವನ ತಾತ!

ಇದೀಗ ಆ ಚಿತ್ರ ವಿಕ್ರಮ್ ಕಿರ್ಲೋಸ್ಕರ ಅವರ ಕಚೇರಿಯ ಗೋಡೆಯನ್ನು ಅಲಂಕರಿಸಿದೆ. ''ನಾನು ಮತ್ತು ತಾತ ಬಹಳ ನಿಕಟವರ್ತಿಗಳಾಗಿದ್ದೆವು. ನನ್ನ ಇಷ್ಟಗಳೇನು, ನಾನು ಯಾವುದನ್ನು ನಿಧಿಯಂತೆ ಕಾಪಾಡಬಲ್ಲೆ ಎಂಬ ಸಂಗತಿಯನ್ನು ಅವರು ಚೆನ್ನಾಗಿ ಅರಿತಿದ್ದರು!'' ವಿಕ್ರಮ್ ಕಿರ್ಲೋಸ್ಕರ್ ಭಾವ ಪರವಶರಾಗಿ ನುಡಿಯುತ್ತಾರೆ.

ಉಡುಗೊರೆಯ ಆಯ್ಕೆಯ ಕುರಿತು ಕೆಲವು ಕಿವಿಮಾತು ಹೇಳಬಹುದು.

ಹೂಗುಚ್ಛ: ಸಾಮಾನ್ಯವಾಗಿ ಶುಭಹಾರೈಕೆಯೊಂದಿಗೆ ನೀಡುವ ಕಾಣಿಕೆ ಹೂಗುಚ್ಛ. ಸಾಂಪ್ರದಾಯಿಕವಾಗಿ ನೀಡುವಂಥ ಇಂಥ ಉಡುಗೊರೆಯಲ್ಲಿ ಭಾವನೆಯನ್ನು ಕಲಕುವಂಥ ಚಮತ್ಕಾರದ ಆಯ್ಕೆಯಿರುತ್ತದೆ.

ಪ್ರೇಮ ನಿವೇದನೆಯ ಸಂದರ್ಭದಲ್ಲಿ ಕೆಂಪು ಗುಲಾಬಿ ಅತ್ಯಂತ ಯುಕ್ತ. ಯಾವುದೇ ಕಾರ್ಯದ ಆಶಾದಾಯಕ ಆರಂಭಕ್ಕೆ ಕೆಂಪು ಗುಲಾಬಿ ನಾಂದಿ ಹಾಡುತ್ತದೆ. ಬಿಳಿ ಹೂವು ದಯೆ, ಬೆಂಬಲ ಅಥವಾ ಮಧುರ ನೆನಪುಗಳನ್ನು ಸಂಕೇತಿಸುತ್ತದೆ. ಹಳದಿಹೂವು ಸ್ನೇಹವನ್ನು ಸೂಚಿಸುತ್ತದೆ. ''ನನ್ನನ್ನು ಎಂದೆಂದೂ ಮರೆಯದಿರು !'' ಎಂದು ಕೇಳಿಕೊಳ್ಳಬೇಕಾಗಿದೆಯೆ? ನಿಮ್ಮ ಆಯ್ಕೆ ನೇರಿಳೆ ಹೂವು! ಆರ್ಕಿಡ್ ಅಥವಾ ಇನ್ನಿತರ ಇಂಥ ಹೂಗುಚ್ಛ ಅಪೂರ್ವತೆ ಹಾಗೂ ಹೊಸತನವನ್ನು ಸೂಚಿಸುತ್ತದೆ. ವಿಶೇಷವಾಗಿ ಆಹ್ವಾನಿತರಾದವರನ್ನು ವಿದೇಶಗಳಿಂದ ಆಗಮಿಸುವವರನ್ನು ಸ್ವಾಗತಿಸಲು ಇಂಥ ಹೂಗಳು ಬಹಳ ಯುಕ್ತ. ದುಬಾರಿಯಾಗಿದ್ದು, ಉಪಯೋಗಕ್ಕೆ ಸಿಕ್ಕದ ತೋರಿಕೆಯ ಆಡಂಬರದ ವಸ್ತುವಿಗಿಂತ ಪುಷ್ಪಕಾಣಿಕೆ ಎಷ್ಟೋ ಪಾಲು ಮಿಗಿಲೆನ್ನಬಹುದು.

ಮುಂಬೈಯ ಪತ್ರಕರ್ತೆ ಜೆಸ್ಸಿಕಾ ೧೯೭೦ ರಲ್ಲಿ ಅಮೆರಿಕಾದ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಸಂದರ್ಭ. ಕೆಲವೊಮ್ಮೆ ಆಕೆಯನ್ನು ಏಕಾಂಗಿತ್ವದ ಭಾವನೆ ಕಾಡುತ್ತಿದ್ದಿತು. ಒಂದು ಬಾರಿ ಆಕೆಯ ಗೆಳತಿ ಭಾರತದಿಂದ ಹೂಗುಚ್ಛವೊಂದನ್ನು ಕಳಿಸಿದಳು. ಅದನ್ನು ಸ್ವೀಕರಿಸಿದಾಗ ಜೆಸ್ಸಿಕಾಗೆ ಆದ ಆನಂದ ಅಷ್ಟಿಷ್ಟಲ್ಲ. ತನ್ನನ್ನು ಜ್ಞಾಪಿಸಿಕೊಳ್ಳುವ ಗೆಳತಿ ಭಾರತದಲ್ಲಿದ್ದಾಳೆ ಎಂಬ ಅನಿಸಿಕೆ ಆಕೆಯ ಒಂಟಿತನದ ಭಾವನೆಯನ್ನು ಬಹಳಷ್ಟು ದೂರಮಾಡಿತು.

ಕಾದಂಬರಿಗಾರ್ತಿ ಶೋಭಾಡೇ ಹೇಳುತ್ತಾರೆ, ''ನಾಲ್ಕುವರ್ಷಗಳ ಹಿಂದಿನ ನನ್ನ ಹುಟ್ಟುಹಬ್ಬದ ದಿನ ಗೆಳತಿಯೊಬ್ಬಳು ಚಕ್ರಗಳಿರುವ ಅಂದದ ಕೈಗಾಡಿಯ ಮೇಲೆ ಅದ್ಭುತವಾಗಿ ಜೋಡಿಸಿದ ಹೂಗುಚ್ಛಗಳನ್ನು ಇರಿಸಿ ನನಗೆ ಕಾಣಿಕೆಯಾಗಿ ನೀಡಿದ್ದಳು. ನನಗದು ತುಂಬ ಇಷ್ಟವಾಗಿ, ಮನೆಯ ಪ್ರವೇಶದ್ವಾರದ ಬಳಿಯೇ ಇರಿಸಿದ್ದೆ. ನಮ್ಮ ಮನೆಗೆ ಬಂದು

ಹೋಗುವವರೆಲ್ಲಾ ಆ ಹೂಗುಚ್ಛಗಳನ್ನು ನೋಡಿ ಮೆಚ್ಚುಗೆ ಸೂಸುತ್ತಿದ್ದರು!''

ಹಣ: ಎಷ್ಟೋ ಸಂದರ್ಭಗಳಲ್ಲಿ ಉಡುಗೊರೆಯನ್ನು ಹಣದ ರೂಪದಲ್ಲಿ ನೀಡುವುದೂ ಉಚಿತವಾದೀತು. ಉಡುಗೊರೆ ನೀಡುವವನ ದೃಷ್ಟಿಯಿಂದ ಇದು ಅನುಕೂಲ. ಕಾರಣ, ವಸ್ತುವಿನ ಆಯ್ಕೆಗಾಗಿ ತಲೆಕೆಡಿಸಿಕೊಳ್ಳುತ್ತ ಅಂಗಡಿಯಿಂದ ಅಂಗಡಿಗೆ ಅಲೆಯುವ ಪ್ರಸಂಗವಿರುವುದಿಲ್ಲ. ಉಡುಗೊರೆ ಪಡೆಯುವವನ ದೃಷ್ಟಿಯಿಂದಲೂ ಇದು ಪ್ರಾಯೋಗಿಕವಾಗಿದೆ.

ಇಪ್ಪತ್ತೆರಡು ವರ್ಷಗಳ ಹಿಂದೆ ತನ್ನ ಪತಿ ಮದುವೆಯ ಉಡುಗೊರೆಯಾಗಿ ಪಡೆದ ಹದಿನಾರು ಲ್ಯಾಂಪ್‌ಗಳನ್ನು ಚೆನ್ನೈನ ಸರಳಾಸಂತ್ ಈಗಲೂ ಜ್ಞಾಪಿಸಿಕೊಳ್ಳುತ್ತಾಳೆ!

''ಅದರ ಬದಲಾಗಿ ನಮಗೆ ಹಣ ಅಥವಾ ಉಡುಗೊರೆ ಪತ್ರ ನೀಡಿದ್ದರೆ ಮನೆಗೆ ಬೇಕಾದ ವಸ್ತುಗಳನ್ನು ಖರೀದಿಸಬಹುದಿತ್ತು'' ಎಂದು ಸರಳಾ ಹೇಳುತ್ತಾಳೆ. ಬಹುಶಃ ಸಾಮೂಹಿಕವಾಗಿ ಉಡುಗೊರೆ ನೀಡುವಂಥ ಸಂದರ್ಭಗಳಲ್ಲಿ ಉಡುಗೊರೆ ಚೆಕ್ ಹೆಚ್ಚು ಸಮಂಜಸವಾದೀತು. ಹಣದ ರೂಪದಲ್ಲಿ ಉಡುಗೊರೆ ನೀಡಿದರೆ ಕ್ರಮೇಣ ಮರೆತು ಹೋಗುವ ಸಾಧ್ಯತೆಯಿದೆಯಾದರೂ ನೀಡಿದವನ ಔದಾರ್ಯ ಆ ಕ್ಷಣದಲ್ಲಂತೂ ನಗಣ್ಯವಲ್ಲ

ಪ್ರವಾಸ: ಮೆಚ್ಚುಗೆಗೆ ಅವಶ್ಯವಾಗಿ ಪಾತ್ರವಾಗಬಲ್ಲ ಇನ್ನೊಂದು ಉಡುಗೊರೆಯೆಂದರೆ ಪ್ರವಾಸೀ ಸೌಲಭ್ಯ. ಏಕೆಂದರೆ ಇಂಥ ಉಡುಗೊರೆ ಪಡೆಯುವವನು ಪ್ರವಾಸದಿಂದಾಗಿ ಅವಿಸ್ಮರಣೀಯ ನೆನಪುಗಳನ್ನು ತುಂಬಿಟ್ಟುಕೊಳ್ಳುವುದು ಸಾಧ್ಯವಾಗುತ್ತದೆ.

ಸೃಜನಶೀಲ ಉಡುಗೊರೆಯೊಂದು ಬದುಕಿನ ಗತಿಯನ್ನೇ ಬದಲಾಯಿಸುವ ಸಾಧ್ಯತೆಯಿದೆ. ಆಲ್‌ಬರ್ಟ್ ಐನ್‌ಸ್ಟೈನ್ ಐದು ವರ್ಷ ವಯಸ್ಸಿನ ಬಾಲಕನಾಗಿದ್ದಾಗ ಒಂದು ಬಾರಿ ಖಾಯಿಲೆಬಿದ್ದು ಹಾಸಿಗೆ ಹಿಡಿದನು. ಮಲಗೀ.. ಮಲಗೀ ಅವನಿಗೆ ಬಹಳ ಬೇಸರ ಬರುತ್ತಿತ್ತು. ಮಗನ ಗಮನವನ್ನು ಬೇರೆಡೆಗೆ ಸೆಳೆಯಲು ತಂದೆ ದಿಕ್ಸೂಚಿಯೊಂದನ್ನು ತಂದಿತ್ತರು. ಈ ಉಪಕರಣ ಬಾಲಕ ಐನ್‌ಸ್ಟೈನನಿಗೆ ಅತ್ಯಂತ ವಿಸ್ಮಯಕಾರಿಯಾಗಿ ತೋರಿತು. ಮುಂದೆ ಅವನಿಗೆ ಭೌತಶಾಸ್ತ್ರದಲ್ಲಿ ಆಸಕ್ತಿ ಹುಟ್ಟಲು ಈ ಕಾಣಿಕೆ ನಾಂದಿಯಾಯಿತು.

ಉಡುಗೊರೆಯು ಕೆಲವೊಮ್ಮೆ ಮುರಿದ ಸ್ನೇಹ ಸೇತುವೆಯನ್ನು ಜೋಡಿಸುವ ಕೊಂಡಿಯಾಗಬಹುದು. ನೋವಿನ ಪ್ರಸಂಗವನ್ನು ಮರೆಸುವ ಸಂಜೀವಿನಿಯೂ ಆಗಬಹುದು.

ಒಂದು ಬಾರಿ ವಿಯೆನ್ನಾದ ಚಿತ್ರಗಾರ ಗುಸ್ತವ್ ಕ್ಲೆಮ್ಟ್ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಬಿದ್ದ. ಅತ್ಯಂತ ನಿಕಟವರ್ತಿಯಾಗಿದ್ದ ಹೆಣ್ಣಿನೊಂದಿಗೆ ಸಂಪರ್ಕ ಕಡಿಯಬೇಕಾದ ಅನಿವಾರ್ಯತೆಯದು! ಆದರೆ ಆ ವಿಷಯವನ್ನು ವೈಮನಸ್ಸಿಗೆ ಎಡೆಕೊಡದೆ ಉಪಾಯವಾಗಿ ತಿಳಿಸಬೇಕು, ಹೇಗೆ?

ಗುಸ್ತವ್ ಬೀಸಣಿಗೆಯೊಂದರ ಒಳಪದರದಲ್ಲಿ ರಮ್ಯವಾಗಿ ಚಿತ್ರ ರಚಿಸಿದ. ಸುಂದರ ಚಿತ್ರದ ಕೆಳಗೆ ''ನೋವನ್ನು ನಿರಂತರವಾಗಿಸುವ ಬದಲು, ನೋವನ್ನು ಅಂತ್ಯಗೊಳಿಸುವುದು ಲೇಸು'' ಎಂದು ಬರೆದ.

ಟಿಮ್ ಹೀಡ್ಲರನ ಎದೆಗುಂದದ ಧ್ವನಿ

ಜಿ.ವೈದೇಹಿ
೩೫೮ 'ಪುನರ್ವಸು'
ನವಿಲು ಮುಖ್ಯ ರಸ್ತೆ,
ಕುವೆಂಪು ನಗರ
ಮೈಸೂರು-೫೭೦ ೦೨೩

ನೂತನ ಶಸ್ತ್ರಚಿಕಿತ್ಸೆಯು ರೋಗಿಯನ್ನು ಕೊಲ್ಲಬಹುದಿತ್ತು. ರೋಗಿಯಾಗಲೀ ವೈದ್ಯನಾಗಲೀ ಇದನ್ನು ಕೈಗೊಳ್ಳಲು ಮುನ್ನುಗ್ಗಿದ್ದಾದರೂ ಹೇಗೆ?

ಅಗ್ನಿಶಾಮಕ ಕಂಪೆನಿಯೊಂದರ ತರಬೇತಿ ತರಗತಿಗೆ ಟಿಮ್ ಹೀಡ್ಲರ್ ಹೊರಟಿದ್ದನು. ೨೧ ವಯಸ್ಸಿನ ಹೀಡ್ಲರ್ ತನ್ನ ಪತ್ನಿಯನ್ನು ಚುಂಬಿಸಿ ತತ್‌ಕ್ಷಣವೇ ಮೋಟರ್ ಸೈಕಲ್ ಮೇಲೆ ನೆಗೆದು ರಸ್ತೆಯ ಕಡೆ ಧಾವಿಸಿದ. ಪೆನ್ನಿಸಿಲ್‌ವೇನಿಯದಲ್ಲಿ ಕಟ್ಟಡ ಕಟ್ಟುವ ಕೆಲಸದಲ್ಲಿದ್ದ ಹೀಡ್ಲರನಿಗೆ ಅಗ್ನಿಶಾಮಕ ದಳದಲ್ಲಿ ಸ್ವಯಂಸೇವಕನಾಗುವ ಇಚ್ಛೆ ಇತ್ತು. ಮುಂದೊಂದು ದಿನ ಪೂರ್ಣ ಪ್ರಮಾಣದ ಫೈರ್‌ಫೈಟರ್ ಆಗುವ ಹೆಬ್ಬಯಕೆಯೂ ಇತ್ತು.

ವೇಳೆ ಉಳಿಸಲು ಆತ ದಿನವೂ ಹೋಗುತ್ತಿದ್ದ ಅಡ್ಡದಾರಿಯಲ್ಲಿ ನಡೆಯತೊಡಗಿದ. ದಟ್ಟ ಕಾಡಿನಲ್ಲಿ ದಿಮ್ಮಿಗಳನ್ನು ತಳ್ಳುವ ಯಂತ್ರದ ಮುಂದೆ ಹೋಗುತ್ತಿದ್ದ. ಗಂಟೆಗೆ ೬೫ ಕಿ.ಮೀ ವೇಗದಲ್ಲಿ ಹೋಗುತ್ತಿದ್ದ ಅವನು ದಾರಿ ಹೋಕರನ್ನು ತಡೆಯಲು ಅಡ್ಡಹಾಕಿದ್ದ ಉಕ್ಕಿನ ಸರಳನ್ನು ನೋಡಲಿಲ್ಲ. ಕೊರಳು ಅದಕ್ಕೆ ಬಡಿದು ಹೀಡ್ಲರ್ ನೆಲಕ್ಕೆ ಅಪ್ಪಳಿಸಲ್ಪಟ್ಟ. ಎದ್ದು ಬಹಳ ಕಷ್ಟಪಟ್ಟು ಅರ್ಧ ಕಿ.ಮೀ. ನಡೆದು ತರಬೇತಿ ಕೇಂದ್ರವನ್ನು ತಲುಪಿದ. ತತ್‌ಕ್ಷಣವೇ ಅವನ ಸಹ ಸ್ವಯಂಸೇವಕರು ಆಂಬುಲೆನ್ಸ್ ತರಿಸಿದರು.

ಹೀಡ್ಲರನ ಶ್ವಾಸನಾಳ ಮತ್ತು ಅನ್ನನಾಳಕ್ಕೆ ಗಂಭೀರವಾದ ಹಾನಿಯುಂಟಾಗಿದೆಯೆಂದು ಆಸ್ಪತ್ರೆಯಲ್ಲಿ ವೈದ್ಯರು ತೀರ್ಮಾನಿಸಿದರು. ಶ್ವಾಸನಾಳಕ್ಕೂ ನಾಲಗೆಯ ಕೆಳಭಾಗಕ್ಕೂ ನಡುವೆ ಇರುವ ಧ್ವನಿಪೆಟ್ಟಿಗೆ ಜಜ್ಜಿಹೋಗಿತ್ತು. ಎಂಟು ಗಂಟೆ ಅವಧಿಯ ಶಸ್ತ್ರಚಿಕಿತೆಯು ಹೀಡ್ಲರನ ಪ್ರಾಣವನ್ನು ಉಳಿಸಿತು. ಆದರೆ ವೈದ್ಯರು ಆತನ ಧ್ವನಿಯನ್ನು ಪೂರ್ವಸ್ಥಿತಿಗೆ ತರಲಾಗಲಿಲ್ಲ.

ಸುಮಾರು ಒಂದು ವರ್ಷದವರೆಗೂ ಹೀಡ್ಲರನಿಗೆ ಗಟ್ಟಿ ಪದಾರ್ಥವನ್ನು ತಿನ್ನಲಾಗಲಿಲ್ಲ. ಆತನ ತೂಕ ೮೫ ಕಿಲೋದಿಂದ ೪೨ಕ್ಕೆ ಇಳಿಯಿತು. ಎರಡು ವರ್ಷಗಳು ಆಸ್ಪತ್ರೆಯಲ್ಲಿದ್ದ ನಂತರ ತನ್ನ ಕನಸುಗಳು ತನ್ನ ಸುತ್ತ ಕುಸಿಯುತ್ತಿರುವುದನ್ನು ಕಾಣಲೆಂದೇ ಮನೆಗೆ ಹಿಂತಿರುಗಿದಂತಿತ್ತು. ಧ್ವನಿಯೇ ಇಲ್ಲದೆ ಅವನು ಪೂರ್ಣ ಪ್ರಮಾಣದ ಬೆಂಕಿ ಆರಿಸುವ ಸೇವಕನಾಗುವುದು ಅಸಾಧ್ಯವಾಯಿತು. ಸ್ವಯಂಸೇವಕ ತರಬೇತಿಯನ್ನೂ ತ್ಯಜಿಸಿದ. ಚರ್ಚಿನಲ್ಲಿ ಹಾಡಿ ಸಂತೋಷಪಡುವುದೂ ಕಣ್ಮರೆಯಾಯಿತು.

ಕ್ರಮೇಣ ಹೀಡ್ಲರ್ ಚಟುವಟಿಕೆಯ ಜೀವನದಿಂದ ಹಿಂದೆ ಸರಿದ. ಅಪಘಾತವಾಗಿ ನಾಲ್ಕು ವರ್ಷಗಳ ನಂತರ ಅವನಿಗೂ ಅವನ ಪತ್ನಿಗೂ ದಾಂಪತ್ಯ ವಿಚ್ಛೇದನವಾಯಿತು. ಧ್ವನಿಯನ್ನು ಕಳೆದುಕೊಂಡ ಇತರರಂತೆ ಹೀಡ್ಲರನಿಗೂ ತನ್ನ ದೇಹದ ಒಂದು ಮುಖ್ಯವಾದ ಅಂಗವನ್ನು ಕಳೆದುಕೊಂಡಂತೆ

ಸೆಪ್ಟೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾನ್ ಪೆಕ್ಕನೆನ್ ಎಂಬುವರ 'ಟಿಮ್ ಹೀಡ್ಲರ್ಸ್ ವಾಯ್ಸ್ ಆಫ್ ಕರೇಜ್' ಎಂಬ ಲೇಖನದ ಕನ್ನಡಾನುವಾದ

ಭಾಸವಾಯಿತು. ವೈದ್ಯಕೀಯ ಪವಾಡ ನಡೆಯುವಂತೆ ಆಶಿಸಿದ. 'ಓ ದೇವರೇ ನನ್ನನ್ನು ಪೂರ್ಣ ಗುಣಪಡಿಸು. ಇಲ್ಲವೇ ನಿನ್ನ ಬಳಿ ಕರೆದು ಕೋ' ಎಂದು ಪ್ರಾರ್ಥಿಸತೊಡಗಿದ.

ಅಪಘಾತವಾಗಿ ಹತ್ತೊಂಬತ್ತು ವರ್ಷಗಳ ನಂತರ ೧೯೭೨ರ ಜುಲೈ ತಿಂಗಳ ಒಂದು ಮಧ್ಯಾಹ್ನ ಒಹಿಯೊದ ಕ್ಲೀವ್‌ಲ್ಯಾಂಡ್ ಕ್ಲಿನಿಕ್ ಸಮಾಲೋಚನ ಕೊಠಡಿಯಲ್ಲಿ ಹೀಡ್ಲರ್ ಚಿಂತೆಯಿಂದ ಕುಳಿತಿದ್ದ. ಅವನ ಎದುರು ಮೇಜಿನ ಇನ್ನೊಂದು ಕಡೆ ಕ್ಲಿನಿಕ್‌ನ ಓಟೊಲ್ಯಾರಿಂಗಾಲಜಿ (ಕಿವಿ, ಮೂಗು, ಗಂಟಲನ್ನು ಒಳಗೊಂಡ ಶಾಸ್ತ್ರ) ವಿಭಾಗದ ಚೇರ್‌ಮನ್ ಆದ ಡಾ. ಮಾರ್ಶಲ್ ಸ್ಟ್ರೋಮ್ ಕುಳಿತಿದ್ದ. ಪೆನ್ಸಿಲ್‌ವೇನಿಯದಿಂದ ಬಂದ ಹೀಡ್ಲರ್ ಧ್ವನಿಪೆಟ್ಟಿಗೆಯ ಬದಲೀ ಜೋಡಣೆಯ ಸಾಧ್ಯತೆ ಬಗ್ಗೆ ತಿಳಿದುಕೊಳ್ಳಲು ಮತ್ತು ತಾನು ಮಾತನಾಡುವ ಶಕ್ತಿಯನ್ನು ಮತ್ತೆ ಪಡೆಯಲು ಕಾತರನಾಗಿ ಕಾಯುತ್ತಾ ಕುಳಿತಿದ್ದ.

''ಈ ಶಸ್ತ್ರಕ್ರಿಯೆಯು ಕೇವಲ ಪ್ರಾಯೋಗಿಕ. ಇದರ ಇತಿಮಿತಿಯ ಬಗ್ಗೆ ನಮಗೆ ಯಾವ ಅರಿವೂ ಇಲ್ಲ. ಆದರೆ ಖಂಡಿತ ಅನೇಕ ಅಪಾಯಗಳಿರುವುವೆಂದು ಮಾತ್ರ ಗೊತ್ತು. ನೀನು ಶಸ್ತ್ರಕ್ರಿಯೆಗೆ ಒಳಗಾಗ ಬೇಕೆಂಬ ಅಪೇಕ್ಷೆಯಿದ್ದಲ್ಲಿ ಈ ಅಪಾಯಗಳು ಯಾವುವೆಂದು ನೀನು ಮೊದಲು ತಿಳಿದುಕೊಳ್ಳಬೇಕು'' ಎಂದು ಡಾ. ಸ್ಟ್ರೋಮ್ ಹೇಳಿದ.

ಹೀಡ್ಲರ್ ಇನ್ನೊಬ್ಬರೊಂದಿಗೆ ಸಂಪರ್ಕ ಬೆಳೆಸಲು ಉಪಯೋಗಿಸುತ್ತಿದ್ದ ಸೀಸದಕಡ್ಡಿ ಗಾತ್ರದ ಧ್ವನಿ ಹೊರಡಿಸುವ ವಿದ್ಯುತ್ ಧ್ವನಿಪೆಟ್ಟಿಗೆಯನ್ನು ತುಟಿಯ ಬಳಿ ತಂದು ಒತ್ತಿ ''ನಾನು ಸಿದ್ಧನಿದ್ದೇನೆ'' ಎಂದು ಯಂತ್ರ ಮಾನವನಂತೆ ನುಡಿದ.

೫೭ ವರ್ಷದ ಸ್ಟ್ರೋಮ್ ಆಗಲೀ ಆತನ ಸಹೋದ್ಯೋಗಿಗಳಾಗಲೀ ಏನೂ ಮಾತನಾಡಲಿಲ್ಲ. ಬದಲೀ ಧ್ವನಿಪೆಟ್ಟಿಗೆಯು ಕೆಲಸ ಮಾಡದೇ ಇರಬಹುದು. ಹಾಗೇನಾದರೂ ಆದರೆ ಹೀಡ್ಲರ್ ಮತ್ತೆ ಮಾತನಾಡಲಾರ. ಸುಲಭವಾಗಿ ನುಂಗಲೂಲಾರ ಅಥವಾ ಬದಲೀ ಧ್ವನಿಪೆಟ್ಟಿಗೆಯು ಸ್ವಲ್ಪ ಕಾಲಮಾತ್ರ ಕೆಲಸಮಾಡುತ್ತಿದ್ದು ದೇಹದಿಂದ ತಿರಸ್ಕೃತವಾಗಬಹುದು. ನಿರಾಕರಣೆಯನ್ನು ತಡೆಯಲು ವೈದ್ಯರು ನಿರೋಧಕತೆಯನ್ನು ಒತ್ತಿಡುವ ಔಷಧಗಳನ್ನು ಕೊಡಬಹುದು. ಆದರೆ ಇದರಿಂದ ಆತನು ಬಹಳ ಬೇಗ ಸೋಂಕಿಗೆ ತುತ್ತಾಗುವ ಸಾಧ್ಯತೆ ಇದೆ.

''ಶಸ್ತ್ರಕ್ರಿಯೆಯಿಂದಲೇ ನೀನು ಸಾಯಬಹುದು. ದೊಡ್ಡ ದೊಡ್ಡ ಬದಲೀ ಜೋಡಣೆಗಳಲ್ಲಿ ಹೀಗಾಗುವ ಸಾಧ್ಯತೆ ಇದೆ'' ಎಂದು ಸ್ಟ್ರೋಮ್ ಹೇಳಿದನು.

ಸ್ವಲ್ಪ ಸಮಾಲೋಚಿಸು; ''ಎಲ್ಲದಕ್ಕೂ ನಾನು ಸಿದ್ಧ'' ಎಂದು ಟಿಮ್ ಉತ್ತರಿಸಿದ. ಸ್ಟ್ರೋಮ್ ತಿಳಿಸಿದ ವಿಪತ್ಕಾರಕ ಎಚ್ಚರಿಕೆಗಳೆಲ್ಲವನ್ನೂ ಹೀಡ್ಲರ್ ಅರಗಿಸಿಕೊಂಡ. ಇದರಿಂದ ಹೀಡ್ಲರ್ ಎಷ್ಟು ತವಕದಿಂದ ತನ್ನ ಧ್ವನಿಯನ್ನು ಹಿಂತಿರುಗಿ ಪಡೆಯಲು ಹಾತೊರೆಯುತ್ತಿದ್ದಾನೆಂದು ಸ್ಟ್ರೋಮ್‌ಗೆ ತಿಳಿಯಿತು. ತವಕ ಹತಾಶೆಯನ್ನು ಮೀರಿ ನಿಂತಿತ್ತು.

ಶಸ್ತ್ರಕ್ರಿಯೆಯಿಂದ ಮಾತ್ರ ಜೀವ ಉಳಿಯಲು ಸಾಧ್ಯ ಎಂದು ತಿಳಿದಿದ್ದರೂ ಅರ್ಬುದಕ್ಕೀಡಾದ ಧ್ವನಿಪೆಟ್ಟಿಗೆಯನ್ನು ತೆಗೆಸಿಕೊಳ್ಳಲು ಒಪ್ಪದ ರೋಗಿಗಳ ನೆನಪು ಸ್ಟ್ರೋಮ್‌ಗೆ ಉಂಟಾಯಿತು. ಒಬ್ಬ ರೋಗಿಯ ಧ್ವನಿಪೆಟ್ಟಿಗೆಯನ್ನು ತಾನು ತೆಗೆದುಹಾಕಿದ ಒಂದು ದಾರುಣ ನೆನಪೂ ಸ್ಟ್ರೋಮ್‌ನ ಮನಸ್ಸನ್ನು ಕಲಕಿತು. ಸುಮಾರು ನಲವತ್ತು ವಯಸ್ಸಿನ ಆ ಮನುಷ್ಯನು ಉಳಿಯುವ ಸಾಧ್ಯತೆ ಬಹಳವಿತ್ತು. ಆದರೂ ಎರಡುವಾರಗಳನಂತರ ಆತ ಯಾವ ಮನೋವಿಕಾರ ಸೂಚನೆಯನ್ನೂ ಕೊಡದೆ ಆತ್ಮಹತ್ಯೆ ಮಾಡಿಕೊಂಡ.

ಆದ್ದರಿಂದ ಹೀಡ್ಲರ್‌ನನ್ನು ಎದುರಿಸುತ್ತಿರುವ ಅತ್ಯಂತ ಕ್ಲಿಷ್ಟ ತೀರ್ಮಾನ, ಅಂದರೆ ತಾನು ಮಾತನಾಡಬೇಕೆಂಬ ಅದಮ್ಯ ಆಸೆ, ಸಾವಿನ ಕರಾಳ ರೂಪವನ್ನು ಮರೆಸಿತ್ತು. ''ಮನೆಗೆ ಹೋಗಿ ಈ ತೀರ್ಮಾನದ ಬಗ್ಗೆ ನಿಧಾನವಾಗಿ ಯೋಚಿಸಿ. ನೀವು ನಿರ್ಧರಿಸಿದ ಅನಂತರ ದೂರವಾಣಿಯಲ್ಲಿ ನನಗೆ ತಿಳಿಸಿ'' ಎಂದು ಸ್ಟ್ರೋಮ್ ನುಡಿದನು.

ಸಮಾಲೋಚನೆಯನಂತರ ಹೀಡ್ಲರ್ ತನ್ನ ಬಂಧುಗಳು ಮತ್ತು ಸ್ನೇಹಿತರೊಂದಿಗೆ ಇದರ ಬಗ್ಗೆ ಮಾತನಾಡಿದ. ಧ್ವನಿಯನ್ನು ಪಡೆಯಲು ಆರೋಗ್ಯವನ್ನಷ್ಟೇ ಅಲ್ಲದೆ ಜೀವವನ್ನೂ ಮುಡುಪಾಗಿಡುವುದು ಸರಿಯೇ? ೬೭ ವರ್ಷದ ಅವನ ತಾಯಿ ಲೀಲ ಆಸ್ಪತ್ರೆಯಿಂದ ಬಂದ ತನ್ನ ಮಗನನ್ನು ನೋಡಿ, ''ನೀನು ಆರೋಗ್ಯವಾಗಿ ಕಾಣುತ್ತಿರುವೆ. ಶಸ್ತ್ರಕ್ರಿಯೆಗೊಳಗಾಗಿ ಏಕೆ ಆಪತ್ತನ್ನು ತಂದುಕೊಳ್ಳುವೆ?'' ಎಂದಳು.

ಈಗ ಇರುವ ಸ್ಥಿತಿಯಲ್ಲಿ ಜೀವನವನ್ನು ಕಳೆಯುವುದು ಎಷ್ಟು ದುರ್ಭರವೆಂದು ಅವನ ತಾಯಿಗೆ ತಿಳಿಯದಾಗಿತ್ತು. ತನ್ನ ಆಲೋಚನೆಗಳನ್ನು ವಿದ್ಯುತ್ ಧ್ವನಿಪೆಟ್ಟಿಗೆಯ ಮೂಲಕ ಹೇಳಲು ಪ್ರಯತ್ನಿಸುವುದೇ ಅಪಾರ ನೋವಿನ ಮೂಲವಾಗಿತ್ತು. ಆ ಉಪಕರಣದೊಂದಿಗೆ ಹೆಚ್ಚೆಂದರೆ ಒರಟಾದ, ಅಸ್ಪಷ್ಟ, ಯಾಂತ್ರಿಕ ಏಕತಾನ ಹೊರಹೊಮ್ಮಿಸಬಹುದಾಗಿತ್ತು. ಅವನ ಧ್ವನಿಯನ್ನು ಕೇಳಿ ಕೆಲವರು ತತ್‌ಕ್ಷಣವೇ ದೂರಹೋಗುತ್ತಿದ್ದರು. ಒಂದು ಸಂಜೆ ಹೋಟೆಲೊಂದರಲ್ಲಿ ಈತನನ್ನು ನೋಡಿದ ಒಬ್ಬ ''ವಿಚಿತ್ರ ಮನುಷ್ಯ'' ನೆಂದು ಉದ್ಗರಿಸಿದ.

ತನ್ನ ಸ್ನೇಹಿತೆ ಟೆರಿ ಎಲೆನ್‌ಬರ್ಗರ್ ಎಂಬ ನರ್ಸ್ ಅನ್ನು ಬದಲೀ ಜೋಡಣೆಯ ಬಗ್ಗೆ ಅವಳ ಅಭಿಪ್ರಾಯವೇನೆಂದು ಕೇಳಿದ. ''ನೀನೇ ಆಳವಾಗಿ ಯೋಚಿಸು. ಈ ತೀರ್ಮಾನವನ್ನು ನೀನೇ ತೆಗೆದುಕೊಳ್ಳಬೇಕು'' ಎಂದಳು.

ಕೆಲವು ವಾರಗಳು ಕಳೆದ ಮೇಲೆ ''ನಾನು ಬದಲೀ ಜೋಡಣೆಗೆ ಸಿದ್ಧ'' ಎಂದು ಹೀಡ್ಲರ್ ಸ್ಟ್ರೋಮ್‌ಗೆ ದೂರವಾಣಿ ಮೂಲಕ ತಿಳಿಸಿದ.

ಸ್ಟ್ರೋಮ್‌ಗೆ ಆಶ್ಚರ್ಯವೂ ಸಂತೋಷವೂ ಆದುವು. ಶಸ್ತ್ರಕ್ರಿಯೆ ಸಫಲವಾಗಲು ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತೇವೆ'' ಎಂದ ಸ್ಟ್ರೋಮ್.

ಅತಿ ದೊಡ್ಡ ಜೂಜಾಟ: ಸ್ಟ್ರೋಮ್‌ಗೆ ತನ್ನ ರೋಗಿಯಂತೆ ತಾನೂ ಒಂದು ಪ್ರಪಾತದ ಅಂಚಿನಲ್ಲಿದ್ದಂತೆ ಭಾಸವಾಯಿತು. ಆದರೆ ಅವನ ಇಳುಕಲು ಹೀಡ್ಲರನ ಇಳುಕಲಿಗಿಂತ ಪೂರ್ತಿ ಭಿನ್ನವಾಗಿತ್ತು.

ಬದಲೀ ಜೋಡಣೆಯು ಅಸಫಲವಾದರೆ ವೈದ್ಯಕೀಯ ಸಮುದಾಯ ತನ್ನನ್ನು ತೀವ್ರವಾಗಿ ಖಂಡಿಸುವುದೆಂದು ಸ್ಟ್ರೋಮ್‌ಗೆ ತಿಳಿದಿತ್ತು. ಬೆಲ್ಜಿಯಮ್‌ನಲ್ಲಿ ೨೮ ವರ್ಷಗಳ ಹಿಂದೆ ಇದೇ ರೀತಿಯ ಪ್ರಪಂಚದ ಮೊದಲ ಶಸ್ತ್ರಕ್ರಿಯೆ ಅಸಫಲವಾಗಿತ್ತು. ೬೨ ವರ್ಷದ ಪೊಲೀಸ್ ಅಧಿಕಾರಿಯೊಬ್ಬನಿಗೆ ಧ್ವನಿ ಪೆಟ್ಟಿಗೆಯ ಬದಲೀ ಜೋಡಣೆಯ ಅನಂತರ ಮತ್ತೆ ಅರ್ಬುದ ರೋಗ ತಲೆದೋರಿ ಆತನು ಸತ್ತ ವಿಷಯ ತೀವ್ರ ಚರ್ಚೆಗೆ ಒಳಗಾಗಿತ್ತು. ನಿರೋಧಕತೆಯನ್ನು ಒತ್ತಿಡುವ ಔಷಧಿಯಿಂದಾಗಿ ಮತ್ತೆ ಕ್ಯಾನ್ಸರ್ ಕಾಣಿಸಿಕೊಂಡಿರಬಹುದೆಂದು ಕೆಲವು ತಜ್ಞರ ಅಭಿಪ್ರಾಯ. ಬದಲೀ ಧ್ವನಿಪೆಟ್ಟಿಗೆಯಿಂದಾಗಿ ರೋಗಿಗೆ ನುಂಗಲಾಗುವುದಿಲ್ಲ ಮತ್ತು ಉಳಿವಿಗೆ ಆ ಅಂಗವು ಅತ್ಯಾವಶ್ಯಕವೂ ಅಲ್ಲ. ಇಂತಹ ಸ್ಥಿತಿಯಲ್ಲಿ ಒಬ್ಬ ರೋಗಿಯು ಕೇವಲ ತನ್ನ ಜೀವನದ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಈ ಗಂಡಾಂತರ ಚಿಕಿತ್ಸೆಗೆ ಒಳಗಾಗಬೇಕೆ ಎಂಬುದು ಪ್ರಶ್ನಾರ್ಹ ಎಂದು ಮತ್ತೆ ಕೆಲವರು ವಾದಿಸಿದರು.

ಈ ಅಭಿಪ್ರಾಯಗಳನ್ನು ಸ್ಟ್ರೋಮ್ ಒಪ್ಪಲಿಲ್ಲ. ಆದರೆ ಅವನು ೧೯೮೦ರ ಮಧ್ಯದ ವರೆಗೂ ಅಂದರೆ ಭಿನ್ನಾಭಿಪ್ರಾಯಗಳು ಕ್ಷಮಿಸುವವರೆಗೂ ಕಾರ್ಯೋನ್ಮುಖನಾಗಲಿಲ್ಲ. ಮೊದಲು ತನ್ನ ಹಾರ್ವರ್ಡ್ ವೈದ್ಯಕೀಯ ಶಾಲೆಯ ಪ್ರಯೋಗಾಲಯದಲ್ಲಿ, ಅನಂತರ ಕ್ಲೀವ್‌ಲ್ಯಾಂಡ್ ಕ್ಲಿನಿಕ್‌ನಲ್ಲಿ ಬದಲೀ ಧ್ವನಿಪೆಟ್ಟಿಗೆ ಇರುವ ಇಲಿ ಬದುಕುಳಿಯಬಹುದೆಂದು ಸಾಧಿಸಿ ತೋರಿಸಲು ಒಂದು ಮಾದರಿಯನ್ನು ತಯಾರಿಸಿದ. ಆರೋಗ್ಯಕ್ಕೆ ಅತಿ ಧಕ್ಕೆ ಬರದಂತೆ ನಿರಾಕರಣೆಯನ್ನು ತಡೆಗಟ್ಟಲು ಯಾವ ಪ್ರಮಾಣದಲ್ಲಿ ನಿರೋಧಕತೆಯನ್ನು ಒತ್ತಿಹಿಡಿಯಬೇಕು ಎಂದೂ ಸಹ ನಿರ್ಧರಿಸಿದನು.

೧೯೯೭ರ ಮಧ್ಯದ ವೇಳೆಗೆ ಮಾನವ ಧ್ವನಿಪೆಟ್ಟಿಗೆಯ ಮೊತ್ತಮೊದಲ ಬದಲೀ ಜೋಡಣೆ ಮಾಡಲು ಸ್ಟ್ರೋಮ್ ಸಿದ್ಧನಾದ. ಅದಕ್ಕಾಗಿ ಭಾವೋದ್ವೇಗವನ್ನು ಸಮಸ್ಥಿತಿಯಲ್ಲಿಟ್ಟುಕೊಳ್ಳಬಲ್ಲ, ಇಂಥ ಕಷ್ಟಕರ ತೀರ್ಮಾನವನ್ನು ತೆಗೆದುಕೊಳ್ಳಬಲ್ಲ ಬುದ್ಧಿವಂತ ಮತ್ತು ಆರೋಗ್ಯವಂತನಾದ ಒಬ್ಬ ಮಾದರಿ ಯುವಕನ ಶೋಧನೆಗೆ ತೊಡಗಿದ.

''ಈ ಬದಲೀ ಶಸ್ತ್ರಕ್ರಿಯೆಯ ಯಶಸ್ವಿಯಾಗಿ ನಡೆಯಲು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ನಾನು ಮಾಡಬೇಕು'' ಎಂದು ಸ್ಟ್ರೋಮ್ ತನ್ನ ಪತ್ನಿ ದೀನಳಿಗೆ ಹೇಳಿದನು. ಇಲ್ಲದಿದ್ದರೆ ಈ ಬದಲೀ ಜೋಡಣಾ ಶಸ್ತ್ರಕ್ರಿಯೆ ೨೫ ವರ್ಷಗಳಷ್ಟು ಹಿಂದೆ ಹೋಗುತ್ತದೆ. ಅಲ್ಲದೆ ತನ್ನ ಭವಿಷ್ಯದ ಮೇಲೆ ಅಗಾಧ ಪರಿಣಾಮ ಬೀರುತ್ತದೆ ಎಂದೂ ಚಿಂತಿಸಿದ. ಆದ್ದರಿಂದ ಹೀಡ್ಲರ್ ದೂರವಾಣಿಯಲ್ಲಿ ಸಮ್ಮತಿಸಿದಾಗ ತಾವಿಬ್ಬರೂ ತಮ್ಮ ಜೀವನದಲ್ಲಿ ಅತಿ ದೊಡ್ಡ ಜೂಜಾಟ ಆಡುತ್ತೇವೆಂದು ಸ್ಟ್ರೋಮ್ ಯೋಚಿಸಿದ.

೧೯೯೮ರ ಜನವರಿ ಮೂರರಂದು ಟೆರಿ ಎಲೆನ್‌ಬರ್ಗರ್ ಮನೆಗೆ ರಾತ್ರಿ ಊಟಕ್ಕೆ ಹೀಡ್ಲರ್ ಹೋದ. ಉತ್ಸಾಹೀ ಯುವತಿ ಎಲೆನ್‌ಬರ್ಗರ್ ಬದಲೀ ಜೋಡಣೆಯಾಗುವವರೆಗೂ ಹೀಡ್ಲರನ ಪಕ್ಕದಲ್ಲಿಯೇ ಇರುವುದಾಗಿ ಭರವಸೆಯಿತ್ತಳು.

ರಾತ್ರಿ ೯ ಗಂಟೆಗೆ ದೂರವಾಣಿ ಕರೆ ಬಂತು. ''ಒಬ್ಬ ದಾನಿಯು ಸಿಕ್ಕಿದ್ದಾನೆ. ನಿನಗೆ ಬದಲೀ ಜೋಡಣೆ ಇನ್ನೂ ಸಮ್ಮತಿಯೇ? '' ಎಂದು ಸ್ಟ್ರೋಮ್ ಕೇಳಿದ. ಮತ್ತೆ ಅದೇ ರೀತಿಯ ಹಠದ ಧ್ವನಿಯಲ್ಲಿ 'ನಾನು ಸಿದ್ಧನಿದ್ದೇನೆ' ಎಂದು ಹೀಡ್ಲರ್ ಹೇಳಿದನು.

ಮರುದಿನ ಬೆಳಿಗ್ಗೆ ಸ್ಟ್ರೋಮ್ ಒಂದು ತಂಪುಪೆಟ್ಟಿಗೆಯಲ್ಲಿರುವ ಒಬ್ಬ ದಾನಿ ಧ್ವನಿಪೆಟ್ಟಿಗೆಯೊಂದಿಗೆ ಕ್ಲೀವ್‌ಲ್ಯಾಂಡ್‌ನ ಶಸ್ತ್ರಕ್ರಿಯಾ ಕೊಠಡಿಯನ್ನು ಪ್ರವೇಶಿಸಿದ. ಸಿನ್‌ಸಿನಾಟಿ ಆಸ್ಪತ್ರೆಯೊಂದರಲ್ಲಿ ಸ್ಟ್ರೋಮ್ ಮತ್ತು ಸೂಕ್ಷ್ಮರಕ್ತನಾಳ ಶಸ್ತ್ರತಜ್ಞ ಡಾ. ರ್‍ಯಾಮೊನ್ ಎಸ್ಕಮೆಡೊ ಇಬ್ಬರೂ ಸೇರಿ 'ಅನ್ಯೂರಿಸಮ್', ಎಂಬ ಮಿದುಳಿನ ಕಾಯಿಲೆಯಿಂದ ಸತ್ತ ೪೧ ವರ್ಷ ವಯಸ್ಸಿನವನೊಬ್ಬನಿಂದ ಆ ಧ್ವನಿಪೆಟ್ಟಿಗೆಯನ್ನು ತೆಗೆದಿದ್ದರು.

ಬೆಳಿಗ್ಗೆ ೭.೩೦ ಗಂಟೆಗೆ ಹೀಡ್ಲರ್‌ನನ್ನು ಶಸ್ತ್ರಕ್ರಿಯಾ ಕೊಠಡಿಗೆ ಕರೆದೊಯ್ದರು. ಸ್ಟ್ರೋಮ್ ತನ್ನ ೧೩ ಜನರ ಒಂದು ತಂಡದೊಂದಿಗೆ ಕಾಯುತ್ತಿದ್ದ. ವೈದ್ಯರು ಹೀಡ್ಲರನಿಗೆ ಅರಿವಳಿಕೆ ಕೊಟ್ಟರು. ಕೆಲವೇ ಕ್ಷಣಗಳಲ್ಲಿ ಅವನು ಎಚ್ಚರ ತಪ್ಪಿದ. ಪ್ರಾರಂಭಿಸೋಣವೆಂದು ಸ್ಟ್ರೋಮ್ ತನ್ನ ತಂಡಕ್ಕೆ ಹೇಳಿದ.

ಡಾ. ಎಸ್ಕಮೆಡೊ ಮತ್ತು ಇನ್ನೊಬ್ಬ ಸೂಕ್ಷ್ಮ ರಕ್ತನಾಳ ಶಸ್ತ್ರತಜ್ಞ ಡಾ. ರ್‍ಯಾಂಡಾಲ್ ಎಟ್ಕನ್ ಅಂಗಾಂಶವನ್ನು ಕತ್ತರಿಸಿ ಧ್ವನಿಪೆಟ್ಟಿಗೆಗೆ ರಕ್ತ ಒದಗಿಸುವ ಉಚ್ಚ ಧ್ವನಿ ಅಪಧಮನಿಯನ್ನು ಚೆನ್ನಾಗಿ ಕಾಣುವಂತೆ ಎತ್ತಿಟ್ಟರು. ೧೦ X ೨.೫

ಸೆ.ಮೀ. ಇದ್ದ ದಾನಿಯ ಧ್ವನಿಪೆಟ್ಟಿಗೆಯನ್ನು ಎಚ್ಚರದಿಂದ ಚೊಕ್ಕಟಗೊಳಿಸಿದ. ಬದಲೀ ಜೋಡಣೆ ಮಾಡುವುದಕ್ಕೆ ಮುಂಚೆ ದಾನಿಯ ಧ್ವನಿಪೆಟ್ಟಿಗೆ ಇನ್ನೂ ಜೀವಂತವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸ್ಟ್ರೋಮ್ ಒಂದು ಪರೀಕ್ಷೆ ಮಾಡಬೇಕಿತ್ತು. 'ಅದನ್ನು ರಕ್ತನಾಳಕ್ಕೆ ಜೋಡಿಸಿ ನೋಡೋಣ' ಎಂದ.

ಎಟ್‌ಮನ್ ಮತ್ತು ಎಸ್ಕಮೆಡೊ ದಾನಿ ಧ್ವನಿಪೆಟ್ಟಿಗೆಯ ಎರಡು ತುದಿಗಳನ್ನೂ ಹೀಡ್ಲರನ ಅಪಧಮನಿ ಮತ್ತು ಅಭಿಧಮನಿ ರಕ್ತನಾಳಗಳಿಗೆ ಬಂಧಿಸಿದರು. ಬೂದುಬಣ್ಣದ ದಾನಿ ಧ್ವನಿಪೆಟ್ಟಿಗೆಯಲ್ಲಿ ತತ್‌ಕ್ಷಣವೇ ರಕ್ತಸಂಚಾರ ಪ್ರಾರಂಭವಾಯಿತು. ಆದರೆ ಅದು ಧ್ವನಿಪೆಟ್ಟಿಗೆಯನ್ನು ಜೀವಂತಗೊಳಿಸು ವುದೇ?

ಕೆಲವು ನಿಮಿಷಗಳನಂತರ ಆ ಅಂಗಕ್ಕೆ ಹೊಳಪು ಬಂತು. 'ರಕ್ತವು ಸಂಚರಿಸುತ್ತಿದೆ' ಎಂದು ಸ್ಟ್ರೋಮ್ ಹಗುರ ಮನಸ್ಸಿನಿಂದ ನುಡಿದ. ದಾನಿ ಧ್ವನಿಪೆಟ್ಟಿಗೆ ಗುಲಾಬಿ ಬಣ್ಣಕ್ಕೆ ತಿರುಗುತ್ತಿರುವುದು ಕಂಡು ಸ್ಟ್ರೋಮ್‌ಗೆ ಅತೀವ ಸಂತೋಷವಾಯಿತು.

''ಹೀಡ್ಲರನ ಧ್ವನಿಪೆಟ್ಟಿಗೆಯನ್ನು ಮೊದಲು ತೆಗೆದುಹಾಕೋಣ'' ಎಂದನು ಸ್ಟ್ರೋಮ್.

ಶಸ್ತ್ರತಜ್ಞರು ಎಚ್ಚರದಿಂದ ಹೀಡ್ಲರನ ಧ್ವನಿಪೆಟ್ಟಿಗೆ ಸುತ್ತಲೂ ಕತ್ತರಿಸಿ ಅದನ್ನು ತೆಗೆದರು. ಹೀಡ್ಲರನ ಗಂಟಲನ್ನು ನೋಡಿದ ಸ್ಟ್ರೋಮ್‌ಗೆ ತಾನು ನೋಡಿದುದು ಅಷ್ಟು ತೃಪ್ತಿಕೊಡಲಿಲ್ಲ. ''ದಾನಿಯ ಧ್ವನಿಪೆಟ್ಟಿಗೆಗೆ ಈ ಗಂಟಲು ತುಂಬಾ ಕಿರಿದು'' ಎಂದ.

ಹೇಗಾದರೂ ಮಾಡಿ ಅವನು ಗಂಟಲನ್ನು ಅಗಲಿಸಿ ತೆರೆದ ಭಾಗಗಳಲ್ಲಿ ದಾನಿಯ ಗಂಟಲಿನ ಭಾಗಗಳನ್ನು ಜೋಡಿಸಬೇಕಿತ್ತು. ನುಂಗುವ ಕ್ರಿಯೆ ಸ್ನಾಯುಗಳ ಚಲನೆಯ ಸಂಕೀರ್ಣವಾದ ಸಹಕಾರವನ್ನು ಒಳಗೊಂಡಿರುತ್ತದೆ ಎಂದು ಸ್ಟ್ರೋಮ್‌ಗೆ ತಿಳಿದಿತ್ತು. ಹೀಡ್ಲರನ ನುಂಗುವ ಸಾಮರ್ಥ್ಯಕ್ಕೆ ಚ್ಯುತಿಬಾರದಂತೆ ಎಷ್ಟು ಪ್ರಮಾಣದಲ್ಲಿ ದಾನಿಯ ಗಂಟಲಿನ ಭಾಗವನ್ನು ಕ್ಷೇಮವಾಗಿ ಅಳವಡಿಸಬಹುದೆಂಬುದೇ ಸದ್ಯದ ಪ್ರಶ್ನೆ. ಸ್ಟ್ರೋಮ್ ಸ್ವಲ್ಪ ಅಂಗಾಂಶವನ್ನು ಕತ್ತರಿಸಿ ಹಾಕಿ ದಾನಿ ಗಂಟಲನ್ನು ಸೇರಿಸಲು ಬಾಗಿದ ಸೂಜಿ ಮತ್ತು ಚಿಮ್ಮಟವನ್ನು ತೆಗೆದುಕೊಂಡ. ಜೋಡಿಸುತ್ತಿದ್ದಂತೆಯೇ ಹೀಡ್ಲರನ ಗಂಟಲನ್ನು ಅಗಲಿಸಿ ಅದರ ಗೋಡೆಗೆ ಅಂಗಾಂಶ ಸೇರಿಸಿ ಪುನರ್‌ರಚಿಸಿದನು. ಧ್ವನಿ ಪೆಟ್ಟಿಗೆಯು ಈಗ ಸರಿಯಾಗಿ ಸೇರಿಕೊಂಡಿತು. ಆದರೂ ಸ್ಟ್ರೋಮ್ ಚಿಂತಾಕ್ರಾಂತನಾದ.

ಅತಿ ಕ್ಲಿಷ್ಟ ಹಂತವೆಂದರೆ ಧ್ವನಿಪೆಟ್ಟಿಗೆಯ ನರಗಳನ್ನು ಜೋಡಿಸುವುದು. ಹೊಸಧ್ವನಿ ಪೆಟ್ಟಿಗೆಯ ಸ್ನಾಯುಗಳನ್ನು ಪ್ರಚೋದಿಸಲು ಇದು ಸಹಾಯಕವಾಗುತ್ತದೆ. ಈ ನರಜೋಡಣೆಯ ಸಫಲತೆಯ ಆಧಾರದ ಮೇಲೆ ಹೀಡ್ಲರನು ಸಾಮಾನ್ಯನಂತೆ ನುಂಗಬಲ್ಲನೇ ಎಂಬುದು ನಿರ್ಧಾರವಾಗುತ್ತದೆ.

ಹೀಡ್ಲರನ ಜ್ಞಾನವಾಹಿ ಮತ್ತು ಕ್ರಿಯಾವಾಹಿ ನರಗಳನ್ನು ದಾನಿಯ ನರಗಳಿಗೆ ಸೇರಿಸಿ ಶಸ್ತ್ರತಜ್ಞರು ಅಂಗಾಂಶಗಳ ಕೊನೆಗಳನ್ನು ಎಳೆದು ಒಟ್ಟಿಗೆ ಸೇರಿಸಿ ಹೊರಪದರವನ್ನು ಹೊಲಿದರು.

ರಾತ್ರಿ೮ ಗಂಟೆ ವೇಳೆಗೆ ಅಂದರೆ ೧೨ ಗಂಟೆಗಿಂತಲೂ ಹೆಚ್ಚುಕಾಲದ ಬಳಿಕ ಹೀಡ್ಲರನ ಶಸ್ತ್ರಕ್ರಿಯೆಯು ಕೊನೆಗೊಂಡಿತು.

'' ಎಲ್ಲ ಜೋಡಣೆಗಳೂ ಸರಿಯಾಗಿವೆ. ಆದರೆ ಇದೊಂದು ಯಶಸ್ವೀ ಶಸ್ತ್ರಕ್ರಿಯೆ ಎಂಬುದನ್ನು ಕಾಲವೇ ನಿರ್ಧರಿಸಬೇಕು'' ಎಂದು ಸ್ಟ್ರೋಮ್ ತಾನು ಮಾಡಿದ ಕೆಲಸಕ್ಕೆ ತೃಪ್ತಿಪಟ್ಟುಕೊಳ್ಳುತ್ತಾ ಉದ್ಗರಿಸಿದ.

'ಹಲೋ': ಮೂರು ದಿನಗಳನಂತರ ಸ್ಟ್ರೋಮ್ ಹೀಡ್ಲರನ ಕೋಣೆಗೆ ಬಂದ. ದ್ಯುತಿ ತಂತು ಧ್ವನಿಪೆಟ್ಟಿಗೆ ದರ್ಶಕವನ್ನು ಎಚ್ಚರದಿಂದ

ಹೀಡ್ಲರನ ಗಂಟಲಿನೊಳಗೆ ಜಾರಿಸಿದ. ಈ ಸೂಕ್ಷ್ಮನಳಿಗೆಯ ಮೂಲಕ ಧ್ವನಿತಂತುಗಳನ್ನು ಪರೀಕ್ಷಿಸಿದ. ನಳಿಗೆಯನ್ನು ಹೊರತೆಗೆಯುತ್ತಾ 'ಹಲೊ ಎಂದು ಹೇಳು' ಎಂದ ಸ್ಟ್ರೋಮ್ ಹೀಡ್ಲರ್‌ನನ್ನು ಒತ್ತಾಯಿಸಿದನು.

'ಹ...ಲೋ' ಎಂದು ಹೀಡ್ಲರ್ ಮೆಲ್ಲಗೆ ದೊರಗು ಧ್ವನಿಯಲ್ಲಿ ನುಡಿದ. ಇಪ್ಪತ್ತು ವರ್ಷಗಳ ನಂತರ ಮೊತ್ತಮೊದಲಿಗೆ ವಿದ್ಯುತ್ ಧ್ವನಿಪೆಟ್ಟಿಗೆಯ ಸಹಾಯವಿಲ್ಲದೆ ಈ ಪದ ವನ್ನು ಉಚ್ಚರಿಸಿದ್ದ. ಅವನ ಕಣ್ಣುಗಳು ತುಂಬಿ ಬಂದುವು. ಸ್ಟ್ರೋಮನ ಕಣ್ಣಾಲಿಗಳೂ ತೇವವಾದುವು. ತಮ್ಮದೇ ಆದ ರೀತಿಗಳಲ್ಲಿ ತಮ್ಮದೇ ಆದ ಪ್ರಪಂಚಗಳಲ್ಲಿ ಅವರಿಬ್ಬರೂ ಇಂತಹ ಒಂದು ಕ್ಷಣಕ್ಕೆ ಕಾಯುತ್ತಿದ್ದರು.

ಮುಂದಿನ ದಿನಗಳಲ್ಲಿ ಹೀಡ್ಲರ್ ಬಹಳ ಬೇಗ ಚೇತರಿಸಿಕೊಂಡ. ಅವನ ತಾಯಿ ಅವನ ಹಾಸಿಗೆ ಬಳಿ ಕುಳಿತಿದ್ದಳು. ಅವನು ಪೂರ್ತಿ ವಾಕ್ಯವನ್ನು ಮೊತ್ತಮೊದಲಿಗೆ ಹೇಳಲು ಪ್ರಯತ್ನಿಸಿದ. ''ಈ ದಿನಕ್ಕಾಗಿ ನಾನು ಕಾಯುತ್ತಿದ್ದೆ'' ಎಂದು ಮುಗುಳ್ನಗುತ್ತಾ ನಿಧಾನವಾಗಿ ನುಡಿದನು.

ಅವನ ತಾಯಿ ಅವನ ಕೈಯನ್ನು ಹಿಡಿದು ಅಮುಕುತ್ತಾ ''ನಾನೂ ಇದನ್ನೇ ಕಾಯುತ್ತಿದ್ದೆ'' ಎಂದಳು.

ಹೀಡ್ಲರ್ ಆಹಾರವನ್ನು ನುಂಗಿದುದೇ ಸ್ಟ್ರೋಮನಿಗೆ ಶಸ್ತ್ರಕ್ರಿಯೆಯ ಅತ್ಯಂತ ದೊಡ್ಡ ಸಾಧನೆಯಾಯಿತು. ಧ್ವನಿಪೆಟ್ಟಿಗೆಯ ಬದಲೀ ಜೋಡಣೆಯಿಂದ ನುಂಗುವ ಕ್ರಿಯೆಗೆ ಧಕ್ಕೆಯುಂಟಾಗದು ಎಂಬುದನ್ನು ಸಾಧಿಸಿ ತೋರಿಸಿದಂತಾಯಿತು.

''ಟಿವರ್, ನಿನ್ನ ಧ್ವನಿ ದಿನದಿನಕ್ಕೂ ಉತ್ತಮವಾಗುತ್ತಿದೆ. ನಿನಗೆ ನಿನ್ನ ಮೊದಲಿನ ಧ್ವನಿಯಾಗಲೀ ದಾನಿಯ ಧ್ವನಿಯಾಗಲೀ ಇಲ್ಲ ಪೂರ್ತಿಯಾಗಿ ಹೊಸಧ್ವನಿ ನಿನಗಿದೆ'' ಎಂದನು ಸ್ಟ್ರೋಮ್.

ಟೆವರ್ ಎಲೆನ್‌ಬರ್ಗರ್ ಆದಾಗಲೇ ಹೀಡ್ಲರ್‌ನನ್ನು ಅವನ ತಡೆರಹಿತ ಹರಟೆ ಕೇಳಿ ಛೇಡಿಸುತ್ತಿದ್ದಳು.

''ನೆನಪಿಡು ನಾನು ಇಪ್ಪತ್ತುವರ್ಷದಿಂದ ಮಾತನಾಡದೆ ಸುಮ್ಮನಿದ್ದೆ. ಆದರೆ ಈಗ ನೀನು ಇದಕ್ಕೆ ಹೊಂದಿಕೊಳ್ಳಬೇಕು. ನಿನ್ನ ಕಿವಿ ಹಾಳಾದರೂ ಸರಿ ನಾನು ಮಾತನಾಡುತ್ತಲೇ ಇರುತ್ತೇನೆ'' ಎಂದ ಹೀಡ್ಲರ್.

ಹೀಡ್ಲರನ ಧ್ವನಿಯು ಹೆಚ್ಚು ಶಕ್ತಿಯುತವಾಗಿಯೂ ಸ್ಪಷ್ಟವಾಗಿಯೂ ಆಗಿದೆ. ಪ್ರತಿ ಭಾನುವಾರ ಚರ್ಚಿನ ತಂಡದವರೊಂದಿಗೆ ಹಾಡುತ್ತಾನೆ. ಅಲ್ಲದೆ ಸಾರ್ವಜನಿಕ ಭಾಷಣಕಾರನಾಗಿದ್ದಾನೆ. ''ನನ್ನ ಬದಲೀ ಜೋಡಣೆ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಡಬೇಕು. ಇದರಿಂದ ಕೆಲವರ ಜೀವನವೂ ಉತ್ತಮಗೊಳ್ಳಬಹುದು'' ಎನ್ನುತ್ತಾನೆ.

ನಮ್ಮ ಕೃಷಿ ಚಿಂತನೆ ಬದಲಾಗಬೇಕು

ಎ.ಪಿ. ಚಂದ್ರಶೇಖರ
ಇಂದ್ರಪ್ರಸ್ಥ ಜೀವಧಾರಕ ಸಸ್ಯವಾಟಿ
ಕಳಲವಾಡಿ, ಉದ್ಬೂರು ಅಂಚೆ
ಮೈಸೂರು - ೫೭೦ ೦೦೮

ಕೃಷಿ ಉತ್ಪನ್ನಗಳ ಬೆಲೆ ಬಿದ್ದಿದೆ. ಒಂದಲ್ಲ, ಎರಡಲ್ಲ...ನೀವು ಯಾವುದೇ ವಸ್ತುವನ್ನು ಹೆಸರಿಸಿ (ತೆಂಗು, ಅಡಿಕೆ, ಚಹಾ, ಕಾಫಿ, ಅರಸಿನ, ಶುಂಠಿ, ಆಲುಗೆಡ್ಡೆ, ತೊಗರಿ) ರೈತನಿಗೆ ಸಿಕ್ಕುವ ಸಗಟು ಬೆಲೆ ರಸಾತಳಕ್ಕೆ ಕುಸಿದಿದೆ. ಇಪ್ಪತ್ತು ವರ್ಷಗಳ ಹಿಂದಿನ ಬೆಲೆ ಇಂದಿದೆ. ಕರಾರು ವಾಕ್ಕಾಗಿ ಸಂಬಳ ಪಡೆವ ಮಂದಿಗೆ, ಪ್ರಚಾರದ ಮೇಲೆ ''ಬೇಕು''ಗಳನ್ನು ಸೃಷ್ಟಿಸುವ ಬದ್ಧ ವಸ್ತು ತಯಾರಕ ಕಾರ್ಖಾನೆ ಮಂದಿಗೆ, ಸಬ್ಸಿಡಿ ದರದಲ್ಲಿ ಜೀವನಾವಶ್ಯಕ ವಸ್ತುಗಳು ಸಿಗುವಂತಾಗಿದೆ. ತಮ್ಮ ಸಂಬಳದ ಪಣಕ್ಕೆ ಹೆಚ್ಚು ವಸ್ತುಗಳು ಸಿಗುತ್ತಿರುವುದರಿಂದ ಅವರೆಲ್ಲ ಏಕ್‌ದಂ, ಸಿರಿವಂತರಾಗುವ ಸಂದರ್ಭ ಸೃಷ್ಟಿಯಾಗಿದೆ.

ಅದೇ ಶ್ರಮ, ಅದೇ ಗಮನ, ಅದೇ ಫಸಲು, ಆದರೆ ರೈತಾಪಿ ವರ್ಗ ದಿನಕಳೆದಂತೆ ಕಡಿಮೆ ಹಣವನ್ನು ಎಣಿಸುವಂತಾಗಿದೆ. ನಿನ್ನೆಯ ಹಣ ಇಂದು ಇಲ್ಲವಾಗಿದೆ. ಅದೇ ವಸ್ತು, ಅಷ್ಟೇ ವಸ್ತು, ನಿನ್ನೆಯವರೆಗೆ ಜನರಿಗೆ ಬೇಕಾದದ್ದು, ಬೇಡಿಕೆಯಲ್ಲಿದ್ದದ್ದು, ಇಂದು ಬೇಡವಾಗಿದೆ. ನಿನ್ನೆಯವರೆಗೆ ನಮ್ಮ ಜನರಿಗೆ ಬೇಕಾಗಿದ್ದ ವಸ್ತುಗಳು ಇಂದು ಇದ್ದಕ್ಕಿದ್ದಂತೆ ಬೇಡವಾಯಿತೇ ? ನಿನ್ನೆ ಇದ್ದ ಹೊಟ್ಟೆಯ ಗಾತ್ರ, ಹಸಿವಿನ ಪಾತ್ರ, ಇಂದು ಕುಗ್ಗಿ ಹೋಯಿತೇ ?

ಹಾಗೇನು ಅಲ್ಲವಂತೆ. ಇದು ಜಾಗತೀಕರಣ ಪ್ರಭಾವವಂತೆ. ನೀರು ತನ್ನ ಮಟ್ಟವನ್ನು ಕಾಯ್ದುಕೊಳ್ಳುವಂತೆ, ಹೆಚ್ಚು ಬೆಳೆಯುವ ವಿದೇಶಗಳಿಂದ ಏನೆಲ್ಲ ವಸ್ತುಗಳು (ಹಾಲು, ನೀರು, ಅಕ್ಕಿ, ಸಿದ್ಧವಸ್ತುಗಳು, ತಂತ್ರವಿದ್ಯೆ ಇತ್ಯಾದಿ ಸುಮಾರು ಏಳುನೂರ ಇಪ್ಪತ್ತು ವಸ್ತುಗಳು) ಆಮದಾಗುತ್ತಿವೆಯಂತೆ. ನಮ್ಮ ದೇಶಕ್ಕೆ ನುಗ್ಗಿ ಬರುತ್ತಿವೆಯಂತೆ. ತಂತ್ರವಿದ್ಯೆಯ ಪ್ರಾಬಲ್ಯದಲ್ಲಿ, ಸಗಟು ಉತ್ಪಾದನೆಯ ಸೌಕರ್ಯದಲ್ಲಿ ಅವರಿಗೆ ಎಲ್ಲವೂ ಸುಲಭವಂತೆ, ಅಗ್ಗವಂತೆ, ನಮ್ಮ ದೇಶ ಹಿಂದುಳಿದ ದೇಶವಂತೆ, ಇಲ್ಲಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಂತೆ. ಇದೀಗ ನಮ್ಮವರು ವಿಶ್ವ ಸ್ಪರ್ಧೆಯಲ್ಲಿ ಭಾಗವಹಿಸಲು ಸಜ್ಜಾಗಬೇಕಂತೆ.

ಸುಳ್ಳುಗಳನ್ನು ಹೆಚ್ಚು ದಿನ ಸಲಹಲು ಸಾಧ್ಯವಿಲ್ಲ

ಚಿಂತಕರೊಬ್ಬರು ಸುಳ್ಳನ್ನು ಆರೋಹಣ ಕ್ರಮದಲ್ಲಿ ಮೂರು ರೀತಿಯಾಗಿ ವಿಭಾಗ ಮಾಡಿದ್ದಾರೆ. ೧. ಸುಳ್ಳು ೨. ಹಸಿಸುಳ್ಳು ೩. ಅಂಕಿ ಅಂಶಗಳು (ಸ್ಟಾಟಿಸ್ಟಿಕ್ಸ್). ಅಂಕಿ ಅಂಶಗಳೆಂಬ ತಾಜಾ ಸುಳ್ಳುಗಳ ಮೇಲೆ ದೇಶ ಕಟ್ಟುವ ಐವತ್ತು ವರ್ಷಗಳ ಭಾರವನ್ನು ತಾಳಲಾರದೆ ದೇಶ ಇಂದು ಕುಸಿದು ಬೀಳ ಹೊರಟಿದೆ. ಎಳೆದಿಟ್ಟ ಎಲಾಸ್ಟಿಕ್ ಒಂದಿಲ್ಲೊಂದು ದಿನ ತನ್ನ ಮೂಲ ಸ್ಥಿತಿಗೆ ಬರಲೇಬೇಕು ಅಥವಾ ತನ್ನ ಸ್ಥಿತಿ ಸ್ಥಾಪಕತ್ವ ಕಳಕೊಂಡು ಎಳೆದಿಟ್ಟ ಸ್ಥಿತಿಯಲ್ಲೇ ಉಳಿಯಬೇಕು. ಸದಾ ಒತ್ತಡದಲ್ಲಿ ಇರಲು ಸಾಧ್ಯವಿಲ್ಲ. ಕೃಷಿ ಉತ್ಪನ್ನಗಳ ಬೆಲೆ ಬಿದ್ದಿರುವುದು ಇಂಥ ಒಂದು ಸ್ವಾಭಾವಿಕ ಪ್ರಕ್ರಿಯೆ. ಸಾರಾಸಗಟು ಎಲ್ಲ ಕೃಷಿ ಉತ್ಪನ್ನಗಳ ಬೆಲೆ ಬಿದ್ದ ಈ ದಿನಗಳಲ್ಲಿ ಕೃಷಿಕರು ದಂಗಾಗಿ ಹೋಗಿದ್ದಾರೆ. ಮಾಧ್ಯಮಗಳು ಸಾಕಷ್ಟು ಪ್ರಚಾರ ಮಾಡಿವೆ. ಕೃಷಿ ಉತ್ಪನ್ನಗಳಿಗೆ ಮರಳಿ ಬೆಲೆ ಬರುವಂತೆ ಹಲವು ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಆದರೆ ಇಂದು ನಡೆಯುತ್ತಿರುವ ಬಹುತೇಕ ಪ್ರಯತ್ನಗಳು, ಚಿಂತನೆಗಳು, ಪ್ರಕೃತಿ ಪೂರಕವಾಗಿಲ್ಲದ

ಕಾರಣ ನಿರೀಕ್ಷಿತ ಫಲಿತಾಂಶ ಬಂದೀತೆಂದು ನನಗೆ ಅನಿಸುವುದಿಲ್ಲ. **ಒಂದು ವಸ್ತುವಿನ (ಒಂದು ತೆಂಗಿನ ಕಾಯಿಯ) ಬೆಲೆ ಅದು ಗಳಿಸುವ ಹಣದ ಮೇಲೆಯೇ ನಿಂತಿರಲಾಗದು. ಆ ವಸ್ತು ಜೀವನಕ್ಕೆ ಎಷ್ಟು ಬೇಕು? ಎಷ್ಟು ಅನಿವಾರ್ಯ ಎಂಬುದರ ಮೇಲೆ ನಿಂತಿರಬೇಕು. ಸಂಕಟ ಬಂದಾಗ ಸಂಘಟನೆಯಾಗುತ್ತದೆ:**

ಒಬ್ಬ ಕೃಷಿಕನಾಗಿ ನನಗೂ ಬೆಲೆ ಇಳಿಕೆಯ ಹೊಡೆತ ಬಿದ್ದಿದೆ, ನೋವಿದೆ. ಒಂದೇ ಸಾರಿ ಹಳ್ಳಕ್ಕೆ ಬಿದ್ದ ಆಘಾತ ಇದೆ. ಆದರೆ ಇಡೀ ದೇಶ ಒಟ್ಟಾಗಿ ಮಾಡಿದ ತಪ್ಪುಗಳನ್ನು ತಿದ್ದಲು, ಇಂದಲ್ಲವಾದರೆ ಇನ್ನೊಂದು ದಿನವಾದರೂ, ಇಂಥ ಏಟು, ನೋವು ಅನುಭವಿಸುವುದು ಅನಿವಾರ್ಯವಾಗಿದೆ. ಎಲ್ಲ ಕೃಷಿ ಉತ್ಪನ್ನಗಳ ಬೆಲೆ ಏಕಕಾಲಕ್ಕೆ ಬಿದ್ದಿರುವುದು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಬಹಳ ಅನುಕೂಲಕರ ವಾತಾವರಣವಾಗಿದೆ. ನಾವು ಈ ಸಂದರ್ಭದ ಸದುಪಯೋಗಗೊಳಿಸಿಕೊಳ್ಳಬೇಕಾಗಿದೆ.

ಜಾಗತೀಕರಣ ಪರಿಣಾಮವಾಗಿ, ನೀರು ತನ್ನ ಮಟ್ಟವನ್ನು ಕಾಯ್ದುಕೊಳ್ಳುವಂತೆ, ವಿದೇಶೀ ವಸ್ತುಗಳು ನಮ್ಮ ದೇಶಕ್ಕೆ ನುಗ್ಗಿ ಬರುತ್ತಿವೆ ಎಂಬ ಮಾತನ್ನು ಗಮನಿಸಬೇಕು. ನಮ್ಮಲ್ಲಿ ನೀರಿಲ್ಲದಿರುವುದಕ್ಕೆ ಕಾರಣ ಏನೇ ಇರಲಿ. ನೀರಿಲ್ಲದ ಇಲ್ಲಿಗೆ ಅಲ್ಲಿಂದ ನೀರು ನುಗ್ಗಿ ಬಂದಾಗ ಈ ಒರತೆಯ ಸೆಲೆಯನ್ನು ನಾವೆಂದು ಸಮರ್ಥವಾಗಿ ನಿರ್ವಹಿಸುವುದು. ಈ ನೀರಿನಿಂದ ನಿಜಕೃಷಿ ಮಾಡುವುದು ನಮ್ಮ ದೇಶದ, ನಮ್ಮ ರೈತರ ಜವಾಬ್ದಾರಿಯಾಗಬೇಕು.

ಈ ಹಿಂದೆ-ಒಂದಾದ ಮೇಲೆ ಒಂದು ಕೃಷಿ ಉತ್ಪನ್ನಗಳ ಬೆಲೆ ಬೀಳುತ್ತಿತ್ತು. ಅಂಥ ಸಂದರ್ಭದ ನಿರ್ವಹಣೆ ಕೃಷಿಕರಿಗೆ ಭಾರೀ ಕಷ್ಟ. ಉದಾಹರಣೆಗೆ ಮೆಣಸಿನಕಾಯಿ ಬೆಲೆ ಬಿದ್ದರೆ, ಆತನಿಗೆ ಏರು ಬೆಲೆಯ ತೆಂಗಿನ ಕಾಯಿ ಕೊಂಡುಕೊಳ್ಳುವುದು ಕಷ್ಟ. ಆದರೆ ಇಂದು ಹಾಗಲ್ಲ. ಮೆಣಸಿನಕಾಯಿ, ತೆಂಗಿನಕಾಯಿ ಎರಡರ ಬೆಲೆಯೂ ಸಮಾನವಾಗಿ ಬಿದ್ದಿದೆ. ಎಲ್ಲದರ ಬೆಲೆಯೂ ಬಿದ್ದಿದೆ. ಈ ಬೀಳನ್ನು ತಾಳಿಕೊಳ್ಳುವುದು ಸುಲಭ. ಏಕೆಂದರೆ ಪರಸ್ಪರ ವಿನಿಮಯ ದರ ಸಮಾನವಾಗಿರುತ್ತದೆ.

ಈ ಸಂದರ್ಭದಲ್ಲಿ ಅಥವಾ ಯಾವುದೇ ಸಂದರ್ಭದಲ್ಲಿ ಇರುವ ಕಷ್ಟವೇನೆಂದರೆ, ನಿಗದಿತ ಸಂಬಳ ತೆಗೆದುಕೊಳ್ಳುವ ಉದ್ಯೋಗಿಗಳ ಹಾಗೂ ಪ್ರಕೃತಿಯ ಗರಿಷ್ಠ ಶೋಷಣ ಸಾಮರ್ಥ್ಯವಿರುವ ಕೈಗಾರಿಕಾ ಮಂದಿಗಳ ಕೈಯಲ್ಲಿರುವ ಹಣ. ಮೊದಲೇ ಉಲ್ಲೇಖಿಸಿದಂತೆ, ಕೃಷಿ ಉತ್ಪನ್ನಗಳ ಬೆಲೆ ಇಳಿದಾಗ ಈ ಹಣಕ್ಕೆ ಖರೀದಿ ಸಾಮರ್ಥ್ಯ ಜಾಸ್ತಿಯಾಗುತ್ತದೆ. ಅವರು ಹೆಚ್ಚು ಹೆಚ್ಚು ಸಿರಿವಂತರೂ ಜೊತೆಗೆ ಶೋಷಕರೂ ಆಗಿ ಮಾರ್ಪಡುತ್ತಾರೆ. ಆಳವಾಗಿ ಆಲೋಚಿಸಿದರೆ, ಈ ಸ್ಥಿತಿ ಕೃಷಿ ಉತ್ಪನ್ನಗಳ ಬೆಲೆ ಏರು ಸ್ಥಿತಿಯಲ್ಲಿದ್ದಾಗಲೂ ಇರುತ್ತದೆ. ಆಗ ಕೃಷಿಕರು ಕೂಡ ಪ್ರಕೃತಿ ಶೋಷಕ ಸಾಮರ್ಥ್ಯವನ್ನು ಗಳಿಸುತ್ತಾರೆ ಎಂಬುದಷ್ಟೇ ವ್ಯತ್ಯಾಸವಿರುವ ಅಂಶ. ಇಂಥ ಸ್ಥಿತಿಯೂ ಒಳ್ಳೆಯದಲ್ಲ ಹಾಗೂ ಹೆಚ್ಚು ದಿನ ಬಾಳಲಾರದು ಎಂಬ ಕಾರಣಕ್ಕಾಗಿಯೇ ಇವತ್ತಿನ ಕುಸಿತ ಉಂಟಾಗಿದೆ.

ಪರೀಕ್ಷೆ ನಡೆಯುವುದು ಸತ್ಯ ಹರಿಶ್ಚಂದ್ರನಿಗೆ ಮಾತ್ರ. ಪ್ರಕೃತಿಯೇ ಸತ್ಯ. ಎಂತಲೇ ಸತ್ಯಕ್ಕೆ ಹೆಚ್ಚು ಹತ್ತಿರವಿರುವ ಕೃಷಿಕರಿಗೆ ಸತ್ವ ಪರೀಕ್ಷೆ ಸಾಮಾನ್ಯ. ಅನಿವಾರ್ಯ. ಜಾಗತೀಕರಣದ ಮೊದಲ ಬಲಿ ಕೃಷಿಕರೆಂದು -ತಾವು- ಪರಿತಪಿಸುವ ಬದಲು ಸತ್ಯವನ್ನು, ನೈಜಕೃಷಿಯನ್ನು ಸಿದ್ಧಪಡಿಸುವ ಸಂದರ್ಭವೆಂದು ಸ್ವೀಕರಿಸಿ ಶಾಶ್ವತ ಸ್ಥಾನವನ್ನು ಪಡೆಯುವತ್ತ ಕೃಷಿಕರಿಂದು ಪ್ರಯತ್ನಿಸಬೇಕಾಗಿದೆ.

ಪರಾವಲಂಬಿತ, ಹಣ ಆಧಾರಿತ ಕೃಷಿ ಸೋಲಲೇ ಬೇಕು

ಇದು ತನಕ ದೇಶದ ಎಂದರೆ ಬಡಜನರ, ಕೃಷಿಕರ ಉದ್ಧಾರದ ಜವಾಬ್ದಾರಿ ಯನ್ನು ಸರ್ಕಾರ, ಕೃಷಿ ವಿಶ್ವವಿದ್ಯಾಲಯ ತಜ್ಞರು, ಕೃಷಿ ಇತ್ಯಾದಿ ಇಲಾಖಾಧಿಕಾರಿಗಳು ವಹಿಸಿದ್ದಾರೆ. ಕೃಷಿಕರ ಪರವಾಗಿ ಇವರೆಲ್ಲ ಕೆಲಸ ಮಾಡುತ್ತಿದ್ದಾರೆ.ತಾವು ಮಣ್ಣು ಮುಟ್ಟಿ ಕೃಷಿ ಮಾಡದಿದ್ದರೂ, ಮಾಡಿಸಿದ್ದಕ್ಕಾಗಿ ಸಂಬಳ ಪಡೆಯುತ್ತಿದ್ದಾರೆ.ಈ ಸಂಬಳದ ಹಣದಿಂದ ಕೃಷಿ ಉತ್ಪನ್ನಗಳನ್ನು ಖರೀದಿಸಿ ಜೀವನ ನಡೆಸುತ್ತಾರೆ ಈ ರೀತಿಯ ಕೃಷಿ ತಜ್ಞತೆಯ ವಿಷವೃತ್ತವನ್ನು ''ಅಧಿಕ ಇಳುವರಿ'' ಎಂಬ ತಾಜಾ ಸುಳ್ಳಿನ ಅಂಕಿ ಅಂಶಗಳ ಮೇಲೆ ಬೆಳೆಸಿದ್ದರ ಪರಿಣಾಮವಾಗಿ ಇಂದಿನ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ.

ಯೋಜಿಸಬೇಕಾದ, ಯೋಜಿಸಬೇಕಾದ, ಕೆಲಸಮಾಡಬೇಕಾದ ಕೃಷಿಕರ ಪರವಾಗಿ ಸಂಬಳದ ತಜ್ಞರು ಕೆಲಸ ಮಾಡಿದ್ದರ ಪರಿಣಾಮವಾಗಿ ಈ ಐವತ್ತು ವರ್ಷಗಳಲ್ಲಿ ನಮ್ಮ ಕೃಷಿಕರು, ಯೋಚಿಸುವ, ಕೆಲಸ ಮಾಡುವ ಸಾಮರ್ಥ್ಯವನ್ನೇ ಕಳೆದುಕೊಂಡು ಬಿಟ್ಟರು. ''ಆರ್ಥಿಕ'' ಎಂಬ ಅಕ್ಷರ ಪುಂಜದಿಂದ ಸಂಪೀಡಿತರಾಗಿ ಒಂಟಿ ಬೆಳೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬೆಳೆಸಲು ಹೊರಟರು. ತಮ್ಮ ಜೀವನಕ್ಕೆ ಬೇಡವಾದ ಬೆಳೆಗಳನ್ನು ಬೆಳೆಸಿದರು. ತಮ್ಮ ಜೀವನದ ಅಗತ್ಯಕ್ಕೆ ಬೇಡವಾದಷ್ಟು ಬೆಳೆಸಿದರು. ತಮ್ಮ ಜೀವನಾವಶ್ಯಕ ವಸ್ತುಗಳನ್ನು ಬೆಳೆಸುವುದನ್ನು ನಿಲ್ಲಿಸಿದರು.

ಸ್ವಾವಲಂಬಿಯಾಗಿ , ಸ್ವಾನುಭವದ ಮೇಲೆ, ಜೀವನಾವಶ್ಯಕ ವಸ್ತುಗಳನ್ನು ಬೆಳೆಸುವ ಸನಾತನ ಸಂಸ್ಕೃತಿಯ ನಾಶದ ಮೇಲೆ ಆಧುನಿಕ ಕೃಷಿ ನಿಂತಿದೆ. ಇಂಥ ನಾಶದಲ್ಲೇ ಕೈಗಾರಿಕೆಯ ಸೃಷ್ಟಿ ಇದೆ. ರಾಸಾಯನಿಕ ಗೊಬ್ಬರಾದಿ ಕೃಷಿ ಪರಿಕರಗಳಿವೆ. ಕೈಗಾರಿಕಾ ಮಂದಿಗಳ ಲಾಭ ಇದೆ.

ರೈತರು ದಾರಿ ತಪ್ಪಲು ಕಾರಣರು ಯಾರ್ಯಾರೋ ಇರಬಹುದು. ಆದರೆ ದಾರಿ ತಪ್ಪಿದ್ದಂತೂ ಹೌದಲ್ಲಾ. ದಾರಿ ತಪ್ಪಿ ಆಧುನಿಕತೆಯ ಗೊಂಡಾರಣ್ಯದಲ್ಲಿ ಸಿಕ್ಕಿಕೊಂಡಾಗ ಕೈಹಿಡಿದು ನಡೆಸಲು ಯಾರೂ ಬರುವುದಿಲ್ಲ. ಯಾರಿಂದಲೂ ಸಾಧ್ಯವಿಲ್ಲ. (ಎಲ್ಲರೂ ದಾರಿ ತಪ್ಪಿದವರಂತೆ) ಅವರವರ ತಲೆಗೆ ಅವರವರದೇ ಕೈ.

ಬಲುವಿಧ ಬೆಳೆಗಳನ್ನು ಮಿಶ್ರಬೆಳೆಗಳನ್ನು ಬೆಳೆಸುವ ಮೂಲಕ ರೈತನಿಂದು ತನ್ನ ದಾರಿ ತಾನು ಕಾಣಬೇಕಾಗಿದೆ.

> ಒಂದೆ ತಂತಿಯ ನೀವಿದೇತಕೆ
> ನುಡಿಸುತಿರುವಿರಿ ಸುಮ್ಮನೆ
> ನಾಲ್ಕು ತಂತಿಯ ಮಾಟ ಕಿರಳಿಸಿ
> ಎಲ್ಲ ತಾಳಕು ನುಡಿಸಿರಿ.

ವಿಸೀಯವರ ಕವನದ ಸಾಲುಗಳು ನಮಗೆ ಸ್ಫೂರ್ತಿಯಾಗಬೇಕು. ಸುಶ್ರಾವ್ಯ ಸಂಗೀತಕ್ಕೆ ಒಂದು ತಂತಿ ಸಾಲದು. ಹಾಗೆಯೇ ಸಮರ್ಥ ಕೃಷಿಗೆ ಒಂದು ಬೆಳೆ ಸಾಲದು. ಹಾಗೆಂದು ಇಂದು ಒಂಟಿ ತಂತಿಯ ನಾಲ್ಕು ವೀಣೆಗಳನ್ನೂ ಅಕ್ಕಪಕ್ಕದಲ್ಲಿಟ್ಟು ನುಡಿಸುವ ಮರ್ಜಿ ಬೆಳೆಯುತ್ತಿದೆ. ಇದೂ ನಿಷ್ಪ್ರಯೋಜಕವೆ. ಒಂದೇ ವೀಣೆಗೆ ನಾಲ್ಕು ತಂತಿ ಬೇಕು. ಎಂದರೆ ನಾಲ್ಕಾರು ಅಲ್ಲ ಹತ್ತಾರು ಅಲ್ಲ ಸಾವಿರಾರು ಬೆಳೆಗಳು ಮತ್ತೆ ಮತ್ತೆ ಮಿಶ್ರವಾಗಿ ಬೆಳೆಯಬೇಕು. ಪರಸ್ಪರ ಮಿತ್ರರಾಗಿ ಬರಬೇಕು. ಇದು ಕಾಡಿನ ತತ್ವ . ಇದು ಪ್ರಕೃತಿಯ ಸತ್ವ ಇಂಥ ಕಾಡಿನಲ್ಲಿ ತಮ್ಮ ಬುದ್ಧಿ, ಮನಸ್ಸುಗಳನ್ನು ಏಕೀಭವಿಸಿದ ವ್ಯಕ್ತಿಗೆ ಸತ್ಯದರ್ಶನವಾಗುವುದು. ಶಾಶ್ವತ ಆನಂದ ಸಿದ್ಧಿಸುವುದು. ಅಂಥವರನ್ನೇ ನಾವು ಋಷಿಗಳೆನ್ನುವುದು. ಇಂಥ ಕೃಷಿ ನಮಗೆ ಒಲಿಯದಿದ್ದರೆ, ಪ್ರಪಂಚದ ಯಾವ ಶಕ್ತಿಯೂ ನಮ್ಮನ್ನು ಉದ್ಧರಿಸಲಾರದು. ಹಾಗೂ ಇಂಥ ಕೃಷಿ ನಮಗೆ

ಒಲಿಯದಿದ್ದರೆ ಪ್ರಪಂಚದ ಎಲ್ಲ ಶಕ್ತಿಗಳೂ ಇಂದು ಕೃಷಿಕರನ್ನು ನುಂಗಿ ನೀರು ಕುಡಿಯು ವುದು ದಿಟ. ಜಾಗತೀಕರಣದ ದುಷ್ಪರಿಣಾಮ ಗಳನ್ನು ಎದುರಿಸಲು ಇರುವ ವ್ಯವಸ್ಥೆ ಇದೊಂದೆ.

ನಿನಗೆ ನೀನೇ ಗೆಳೆಯ

ಅನಿವಾರ್ಯತೆ ಬಂದಾಗ ಎಲ್ಲರೂ ಬುದ್ಧಿವಂತ ರಾಗುತ್ತಾರೆ. ಹಾಗೂ ಎಲ್ಲರೂ ಯೋಚಿಸು ತ್ತಾರೆ. ಯಾರ ಉದ್ಧಾರವನ್ನು ಯಾರೂ ಮಾಡುವುದಿಲ್ಲ. ಎಲ್ಲರೂ ಅವರವರ ಉದ್ಧಾರ ಮಾಡಿಕೊಳ್ಳುತ್ತಾರೆ ಎಂಬುದನ್ನು ಕೆಲವು ದೃಷ್ಟಾಂತಗಳಿಂದ ಸಮರ್ಥಿಸುತ್ತೇನೆ.

ತೆಂಗಿನಕಾಯಿ ಕೃಷಿಕರೊಬ್ಬರನ್ನು ಭೇಟಿ ಯಾಗಿದ್ದೆ. ತೆಂಗಿನಕಾಯಿ ಕೃಷಿಕರೆಂದರೆ, ಅವರಿಗೆ ಇನ್ನೇನೂ ಬೆಳೆ ಗೊತ್ತಿಲ್ಲ. ಅಲ್ಲಿ ಅಕಸ್ಮಾತ್ ಮಾವಿನಗಿಡ ಹುಟ್ಟಿದರೂ ಅದು ಕಳೆಯೆ. ಇಂಥ ಕೃಷಿಕರೊಬ್ಬರು ತೆಂಗಿನ ಬೆಲೆ ಬಿದ್ದ ಸಂದರ್ಭ ಪ್ರತಿಕ್ರಿಯಿಸಿದ ರೀತಿ ತುಂಬ ಆಶಾದಾಯಕವಾಗಿತ್ತು.

ಅವರೆಂದರು-''ಕಾಯಿಯ ಬೆಲೆ ಬಿದ್ದಿದೆ, ತುಂಬಾಕಷ್ಟ. ಇನ್ನೂ ಕಾಯಿಯನ್ನು ನಂಬಿ ನಾವು ಜೀವನ ಮಾಡುವ ಹಾಗಿಲ್ಲ. ಕಾಯಿ ಮಾರಿ ಹಣ ಸಂಪಾದಿಸುವುದು ಸಾಧ್ಯವಿಲ್ಲ. ನಮ್ಮ ಹೊಟ್ಟೆಗೆ ಬೇಕಾದ್ದನ್ನು ಬೆಳೆಸುವುದು ದೊಂದೇ ದಾರಿ. ರಾಗಿ, ಜೋಳ, ಕಡ್ಲೆ, ತೊಗರಿ, ಸೊಪ್ಪು, ತರಕಾರಿ ಎಲ್ಲಾ ಇದು ತನಕ ಕೊಂಡುಕೊಳ್ಳುತ್ತಿದ್ದೆವಲ್ಲಾ ಅವನ್ನೆಲ್ಲಾ ನಾವು ನಾವೇ ಬೆಳೆಸಿ ನೆಮ್ಮದಿಯಾಗಿಹೆಂಡತಿ ಮಕ್ಕಳ ಕೂಡಿ ಊಟ ಮಾಡದಿದ್ದರೆ ಇನ್ನು ಕೃಷಿಕರಿಗೆ ಗತಿ ಇಲ್ಲ''.

ನಾನು ಈ ವೊದಲು ಪ್ರಸ್ತಾಪಿಸಿದ ಧೋರಣೆಗಳಿಗೆಲ್ಲಸಾಮಾನ್ಯ ಕೃಷಿಕರೊಬ್ಬರ ಅಂತರಂಗದ ಮಾತು ಸ್ಫೂರ್ತಿಯಾಗಿದೆ. ಎಲ್ಲರ ಅಂತರಂಗವೂ ಸಮರ್ಥವಾಗಿದೆ ಎಂಬುದಕ್ಕೆ ಪ್ರಸ್ತುತ ಕೃಷಿಕರು ದೃಷ್ಟಾಂತವಾಗಿ ದ್ದಾರೆ. ಇಂಥ ಪರಿಶುದ್ಧ ಚಿಂತನೆ ನಮ್ಮ ರೈತ ಸಮುದಾಯಕ್ಕೆ ಈ ಕಷ್ಟಕಾಲದಲ್ಲಾದರೂ ಬಂದರೆ, ಒಂದೇ ವರ್ಷದಲ್ಲಿ ದೇಶದ ಚಿತ್ರಣವೇ ಹೇಗೆ ಬದಲಾಗಬಲ್ಲುದು ಎಂಬು ದನ್ನು ಕೇಳಿ.

ಎಲ್ಲರೂ ಬಲುವಿಧ ಬೆಳೆ ಬೆಳೆಸುವುದನ್ನು ಅಭ್ಯಾಸ ಮಾಡಿದರೆ. ಮಾರುವುದು, ಕೊಂಡು ಕೊಳ್ಳುವುದು ಕಡಿಮೆಯಾಗುತ್ತದೆ. ಇದರಿಂದಾಗಿ ಬಹುತೇಕ ಮಧ್ಯವರ್ತಿಗಳು, ವ್ಯಾಪಾರಿಗಳು ಕಡಿಮೆಯಾಗುತ್ತಾರೆ. ಅವರೆಲ್ಲರ ಲಾಭ ರೈತರ ಖಾತೆಗೆ ಜಮೆಯಾಗುತ್ತದೆ. ಸಾಗಾಟ ಕಡಿಮೆ ಯಾಗುವುದರಿಂದ ಇಂಧನ ತೈಲದ ಭಾರೀ ಉಳಿತಾಯವಾಗುತ್ತದೆ. ದೇಶ ಸಾಲ ಮುಕ್ತ ವಾಗುತ್ತದೆ. ಅನಗತ್ಯ ವಹಿವಾಟು ನಿಲ್ಲುವುದ ರಿಂದ -ಮಾರುಕಟ್ಟೆ -ಸಮಿತಿ-ಅಧಿಕಾರಿ- ಲೆಕ್ಕಪತ್ರ-ತೂಕ, ದಾಸ್ತಾನು, ಗೋಣಿಚೀಲ, ಚೆಕ್, ಬ್ಯಾಂಕು ಹೀಗೆ ಎಷ್ಟೊಂದು ಶ್ರಮ, ಸಮಯ, ಸಂಪನ್ಮೂಲಗಳು ಉಳಿತಾಯ ವಾಗುತ್ತವೆ. ಮಿಶ್ರ ಬೆಳೆ ಪದ್ಧತಿ ರೈತನಿಗೆ ಪ್ರಕೃತಿಯ ಅಮೂಲ್ಯ ಸೂತ್ರಗಳನ್ನು ತಿಳಿಸುತ್ತವೆ. ಕೊರತೆಯಿಲ್ಲದ ಪ್ರಕೃತಿಯನ್ನು ಕೊರಗುವಂತೆ ಮಾಡಿದ ನಮ್ಮ ಮುಂದಾಳುಗಳ ತಪ್ಪುಗಳು ಬಿಚ್ಚಿಕೊಳ್ಳುತ್ತವೆ. ತಜ್ಞರ ಹಾಗೂ ನಕಲಿ ಬೀಜ ಇತ್ಯಾದಿಗಳ ಅವಲಂಬನೆ ಇಲ್ಲದೆ ಕೃಷಿ ಮಾಡುವ ಸಾಮರ್ಥ್ಯ ರೈತರಿಗೆ ಬರುತ್ತದೆ. ನಮ್ಮ ರೈತರು ಮತ್ತೆ ಮತ್ತೆ ಬುದ್ಧಿವಂತರಾಗುತ್ತಾರೆ.

ಅನಗತ್ಯಗಳಿಗೆ ನಮ್ಮ ಹಣ, ವೇಳೆ ವ್ಯಯವಾದರೆ, ಅಗತ್ಯಗಳನ್ನು ಕೊಳ್ಳಲು ಏನೂ ಉಳಿಯುವುದಿಲ್ಲ

ಕಾಫಿ ತವರಾದ ಕೊಡಗಿನ ಶ್ರೀಮಂತ ರೈತರೊಬ್ಬರನ್ನು ಮಾತನಾಡಿಸುವ ಸಂದರ್ಭ ಬಂದಿತ್ತು. ಕಾಫಿಗೆ ಬೆಲೆ ಇದ್ದಾಗ ಅವರು ಶ್ರೀಮಂತರು. ಆದರೆ, ಇಂದು ಅವರು ಸಂಕಷ್ಟ ದಲ್ಲಿದ್ದಾರೆ. ಅವರು ಹೇಳುತ್ತಾರೆ- ''ಈಗ ನಾವು ಮೊದಲಿನ ಹಾಗೆ ಇಂಟೆನ್ಸಿವ್ ಕೃಷಿ ಮಾಡುವುದಿಲ್ಲ.

ಆಳುಗಳನ್ನು ಅರ್ಧಕ್ಕೆ ಇಳಿಸಿದ್ದೇವೆ. ಗೊಬ್ಬರ ಹಾಕುವುದು ಬಿಟ್ಟಿದ್ದೇವೆ. (ಗೊಬ್ಬರ ಎಂದರೆ ರಸಗೊಬ್ಬರ ಎಂಬುದನ್ನು ಗಮನಿಸಬೇಕು. ಕಾಫಿ ಮಂದಿಗೆ ಸಾವಯುವ ಎಂಬ ಹೆಸರು ಬಹಳ ದೂರ) ಕಳೆ ನಾಶಕ ಸಿಂಪರಣೆ ಇತ್ಯಾದಿ ನಿಲ್ಲಿಸಿದ್ದೇವೆ. ಪಾರ್ಚ್‌ಮೆಂಟ್ ಸಂಸ್ಕರಣೆ ಬಿಟ್ಟು ಕಾಫಿಯನ್ನು ಬಿಸಿಲಿನಲ್ಲಿ ಚೆರ್ರಿಯಾಗಿ ಒಣಗಿಸುತ್ತೇವೆ.''

ಕೃಷಿಯಲ್ಲಿ ಎಂಥ ಅದ್ಭುತವಾದ ಪರಿವರ್ತನೆ! ರಾಸಾಯನಿಕ ಗೊಬ್ಬರದಿಂದ ಕೀಟ, ಕಳೆನಾಶಕಗಳಂಥ ಮಾರಕ ವಿಷಗಳಿಂದ ಆರೋಗ್ಯ ಕೆಡುತ್ತದೆ. ಪ್ರಕೃತಿ ಹಾಳಾಗುತ್ತದೆ ಎಂಬ ಸಾವಯುವ ಸಂದೇಶಗಳನ್ನು ಇದುತನಕ ಕೇಳಲಾರದ ಕಿವಿಗಳು, ಚಿಂತಿಸಲಾರದ ಬುದ್ಧಿಗಳು, ಬೆಲೆಬಿದ್ದ ಸಂದರ್ಭ ಅದೆಷ್ಟು ಚುರುಕಾಗಿ ಬಿಟ್ಟವೆ! ಕೃಷಿಗೆ ನಿಜವಾಗಿ ಬೇಡ ವಾದ ಬೆಲೆ ಇದೆ ಮಾರಾಟಮಾಡಿ ಹಣ ಮಾಡಲು ಸಾಧ್ಯವಿದೆ ಎಂಬ ಕಾರಣಕ್ಕಾಗಿ ಆಘಾತಕಾರಿಯಾಗಿ ಕೃಷಿರಂಗವನ್ನು ಪ್ರವೇಶಿ ಸಿದ ರಾಕ್ಷಸ ತಂತ್ರಗಳೆಲ್ಲ ತಾವೇ ತಾವಾಗಿ ನಾಶವಾಗಲು ಸಂದರ್ಭ ಒದಗಿದೆ. ಕಾಫಿ ಪಾರ್ಚ್‌ಮೆಂಟ್ ಪ್ರಕ್ರಿಯೆ ಬಲುವಿಧ ಅಸಮತೋಲಗಳಿಗೆ ಕಾರಣವಾಗುತ್ತದೆ. ಬೆಲೆ ಬಿದ್ದ ಕಾರಣವಾಗಿ ಇಂದು ಸೂರ್ಯದೇವನಿಗೆ ನಮಿಸುವ ಭಕ್ತಿ, ಸ್ವಾಭಾವಿಕವಾಗಿ ಚೆರ್ರಿ ಮಾಡುವ ಪ್ರಸಕ್ತಿಬಂದಿದೆ.

ಕಾಫಿ ಕೃಷಿಕರು ಉಳಿದ ಸಾಮಾನ್ಯ ಕೃಷಿಕರಿಗಿಂತ ಭಾರೀ ಮುಂದೆ (ಆಹಾರ ಬೆಳೆಗಳನ್ನು ಬೆಳೆಸುವವರೆಲ್ಲ ಸಾಮಾನ್ಯರು, ಅವಿವೇಕಿಗಳು!) ಅವರಿಗೆ ಇಲಾಖೆ(ಬೋರ್ಡ್) ಗಳ ತಜ್ಞರು ಮಾತ್ರ ಸಾಕಾಗುವುದಿಲ್ಲ. ಅತ್ಯಂತ (ಅ)ವೈಜ್ಞಾನಿಕವಾಗಿ ಕೃಷಿ ಮಾಡಲು (ಪರಿಸರ ಸೂರೆ ಮಾಡಲು) ಅವರು ಖಾಸಗೀ ತಜ್ಞರನ್ನು ನೇಮಿಸಿಕೊಂಡಿರುತ್ತಾರೆ.

ಕಾಫಿ ಬೆಲೆ ಬಿದ್ದ ಇಂದಿನ ಸಂದರ್ಭ ಈ ತಜ್ಞರುಗಳೆಲ್ಲ ಅಪ್ರಸ್ತುತರಾಗಿ ಬಿಟ್ಟಿದ್ದಾರೆ! ಕೃಷಿಯ ಹಲವು ಹೆಜ್ಜೆಗಳು ಅಪ್ರಸ್ತುತವಾಗಿವೆ. ಎಂದರೆ ಕೃಷಿಯ ಹೆಸರಿನಲ್ಲಿ ಇದು ತನಕ ಪ್ರಸ್ತುತವಾದ ಬಹಳಷ್ಟು ಕಾರ್ಖಾನೆಗಳು ಅಪ್ರಸ್ತುತವಾಗುತ್ತವೆ. ಇಲ್ಲೆಲ್ಲ ಕೆಲಸ ಮಾಡುತ್ತಿರುವ ಸಂಬಳದ ಮಂದಿಗಳೆಲ್ಲ ಅಪ್ರಸ್ತುತರಾಗುತ್ತಾರೆ. ರೈತರ ದೇಹ, ಬುದ್ಧಿಗಳು ಕೆಲಸಮಾಡಲು ಉಪಕ್ರಮಿಸುತ್ತವೆ. ಅನಿವಾರ್ಯವೆಂದು ಆಯ ಕಟ್ಟಿನ ಜಾಗಗಳನ್ನು ಆಕ್ರಮಿಸಿದ್ದ, ಆಕ್ರಮಣ ಕಾರಿ ಕೃತಕ ಶಕ್ತಿಗಳು - ವಿದ್ಯುತ್ ಶಕ್ತಿ, ಟ್ರಾಕ್ಟರ್ ಶಕ್ತಿ, ರಸಗೊಬ್ಬರ ಶಕ್ತಿ, ಬ್ಯಾಂಕ್ ಬಂಡವಾಳ ಶಕ್ತಿ, ವಿಜ್ಞಾನಿಗಳೆಂಬ ಹೆಸರು ಹೊತ್ತ ಜನಶಕ್ತಿ- ಅನಗತ್ಯವಾಗುತ್ತವೆ.

ಅಗತ್ಯ ಶಕ್ತಿಗಳೆಲ್ಲವೂ ಸ್ಥಳೀಯವಾಗಿ ಉತ್ಪಾದನೆಯಾಗಲು ಶಕ್ಯವಿದೆ. ಈ ಸಾಧ್ಯತೆಯ ಅರಿವು ಎಲ್ಲರಿಗೂ ಆಗುತ್ತದೆ. ಎಷ್ಟೊಂದು ಶಕ್ತಿಯ ಉಳಿತಾಯ. ಯಾರೇನೂ ಮಾಡದೆ ಪ್ರಾಕೃತಿಕವಾಗಿ ಎಷ್ಟೊಂದು ಶಕ್ತಿಯ ಉದಯ!

ಬಲುವಿಧ ಬೆಳೆಗಳಿರುವ ಸ್ವಾವಲಂಬೀ ಕೃಷಿ ಚಿಂತನೆ ಒಡಮೂಡಿದಾಗ ಸಂಬಳದ ಮಂದಿ, ಕಾರ್ಖಾನೆ ಮಂದಿ ಸಿರಿವಂತರಾಗುವ ಪ್ರಕ್ರಿಯೆ ಹೇಗೆ ಮಂಕಾಗುತ್ತದೆಂಬುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾಗಿದೆ. ಹೀಗಾದಾಗ ವಿದೇಶೀ ವಸ್ತು ಗಳು, ವಿಷಯಗಳು ನಮಗೆ ಅನಗತ್ಯವಾಗು ತ್ತವೆ. ಆಕರ್ಷಣೆ ಕಳೆದುಕೊಳ್ಳುತ್ತವೆ. ವಿದೇಶೀ ವಸ್ತುಗಳು ನಮ್ಮಲ್ಲಿಗೆ ನುಗ್ಗಿ ಬರುವುದರಿಂದ, ನಮ್ಮ ಕೃಷಿ ಉತ್ಪನ್ನಗಳ ಬೆಲೆ ಸಾರಾಸಗಟಾಗಿ ಬೀಳುವುದರಿಂದ, ನಮ್ಮಲ್ಲಿ ಸ್ವಾವಲಂಬಿ ವಿಚಾರ ಮರುಹುಟ್ಟು ಪಡೆಯುವು ದಾದರೆ ಸಾವಯುವ. ಕೃಷಿ ಒಡಮೂಡುವು ದಾದರೆ, ನಮ್ಮ ಕೃಷಿಗೆ ಅವರ ಗೊಬ್ಬರ ನೀರು ಸಿಕ್ಕಿದಂತೆ.

ನಮಗೆ ಹಣ ಮುಖ್ಯವಲ್ಲ - ಜೀವನ ಮುಖ್ಯ

ಅಕ್ಕಿ, ತೆಂಗು ಹೀಗೆ ಯಾವುದಾದರೂ

ಆಗಿರಲಿ, ಬೆಲೆ ಬಿದ್ದ ಮಾತ್ರಕ್ಕೆ ಆ ವಸ್ತು ಬದಲಾಗುವುದಿಲ್ಲ ಎಂಬ ಮೂಲ ತತ್ವವೇ ನಮಗಿಂದು ಮರೆತು ಹೋಗಿದೆ. ವಸ್ತುವಿಲ್ಲದ ಹಣಕ್ಕೆ ಬೆಲೆ ಇಲ್ಲ ಎಂಬ ಚಿಂತನೆ ಇಲ್ಲವಾಗಿದೆ. ಎಂತಲೇ ಹಣ ಅಪಮೌಲ್ಯಗೊಳ್ಳುತ್ತಾ ನಡೆದಿದೆ. ವ್ಯವಹಾರಕ್ಕೆ ಬೇಕಾದ ಹಣವನ್ನು ಮುದ್ರಿಸುವ ಸಾಮರ್ಥ್ಯವನ್ನೂ ನಮ್ಮ ದೇಶ ಕಳೆದುಕೊಂಡು ಬಿಟ್ಟದೆ.

ವಸ್ತುಗಳ ಬೆಲೆ ಬೀಳುವ ಮೂಲಕ, ಹಣದ ಚಿತ್ರ ಸಣ್ಣದಾಗುತ್ತದೆ. (ಕಡಿಮೆ ಸಂಪಾದನೆ-ಕಡಿಮೆ ಬೆಲೆ-ಅದೇ ವಸ್ತು). ಹಣದ ಚಲಾವಣೆ ಕಡಿಮೆಯಾಗುವುದರಿಂದ, ಪ್ರಕೃತಿಗೆ ಎಸಗುವ ಮೋಸ, ಪರಸ್ಪರ ಮಾಡುವ ಮೋಸಗಳೆಲ್ಲ ಕಡಿಮೆಯಾಗುತ್ತವೆ. ಇಂಥ ಸಾಧ್ಯತೆಗಳಿಗಾಗಿ ಬೆಲೆ ಕುಸಿತವನ್ನು ನಾವು ದುಡಿಸಿಕೊಳ್ಳಬೇಕು.

ಬೆಲೆ ಕುಸಿಯದಿರುತ್ತಿದ್ದರೆ ನಮ್ಮವರು ಲಘು ಪಾನೀಯಗಳ ಬಗ್ಗೆ ಗಂಭೀರವಾಗಿ ಯೋಚಿಸುತ್ತಲೇ ಇರಲಿಲ್ಲ. ಇದೀಗ ಬೊಂಡ ಮೇಳ (ಎಳನೀರು) ವ್ಯಾಪಕವಾಗುತ್ತಿದೆ.

ಅಡಿಕೆ, ತೆಂಗು, ಕಾಫಿ, ರಬ್ಬರ್ ಇತ್ಯಾದಿ ತೋಟಗಳು ಕಾಡ್ಗಿಚ್ಚಿನಂತೆ ಹಬ್ಬುತ್ತಿರುವ ಪರಿ ಭಯಾನಕವಾಗಿದೆ. ಇದು ಹೀರುತ್ತಿರುವ ಅಂತರ್ಜಲ ಉಪಯೋಗಿಸುತ್ತಿರುವ ವಿಷ ವಿಪರೀತವಾಗಿದೆ. ಇದಕ್ಕೊಂದು ಮಿತಿ ಬೇಕಾಗಿತ್ತು. ಇಳಿದ ಬೆಲೆ ಇಂಥ ಮಿತಿಗೆ ಕಾರಣವಾಗಿದೆ. ಎಲ್ಲ ಒಳ್ಳೆಯದಕ್ಕೂ ಸಾಧನ ವಾಗಿದೆ.

''ದೇವರೇ ನನಗೆ ಕಷ್ಟಗಳನ್ನು ಕೊಡು. ಆಗ ನನಗೆ ನಿನ್ನ ನೆನಪಾಗುತ್ತದೆ'' ಎಂದು ಬೇಡಿದ ದಾರ್ಶನಿಕರಾದ ನಮ್ಮ ಋಷಿ ಶ್ರೇಷ್ಠರು ದಾನಶ್ರೇಷ್ಠರು ನಮಗೆಲ್ಲ ಆದರ್ಶವಾಗಲಿ, ಬೆಲೆ ಕುಸಿತ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ''ಸೋಲೇ ಗೆಲುವಿನ ಸೋಪಾನ''ವೆಂಬುದು ವಾಸ್ತವವಾಗಲಿ ಎಂದು ನಿರೀಕ್ಷಿಸುತ್ತೇನೆ.



ಆಶಾವಾದಿಗೆ ಸಂಕಟದಲ್ಲೂ ಆಸೆಯ ಬೆಳಕು ಕಾಣುತ್ತದೆ;
ನಿರಾಶಾವಾದಿಗೆ ಆಸೆಯಲ್ಲೂ ದುಃಖವೇ ಕಾಣುತ್ತದೆ.
-ಹೆಮಾಕ್ ಎಲ್ಲಿಸ್

ಪರೀಕ್ಷಿಸಿ ನಿಮ್ಮ ಥೈರಾಯಿಡನ್ನು

ಡಾ.ಎಸ್.ಆರ್.ಪ್ರಸಾದ್
ಪ್ರಾಧ್ಯಾಪಕರು
ಸೂಕ್ಷ್ಮ ಜೀವಿ ಶಾಸ್ತ್ರ ವಿಭಾಗ
ಶ್ರೀ ದೇವರಾಜ ಅರಸು
ಮೆಡಿಕಲ್‌ಕಾಲೇಜು, ಟಮಕ,
ಕೋಲಾರ- ೫೬೩೧೦೧

ಹೆಚ್ಚಿನ ದಣಿವೇ? ಮಾನಸಿಕ ಖಿನ್ನತೆಯೇ?
ಕಾರಣ ನಿಮ್ಮ ಥೈರಾಯಿಡ್‌ನಲ್ಲಿರಬಹುದು.

ಕವಿತಾ ಮುಂಬೈ ಶಹರದಲ್ಲಿ ವಾಸಿಸುತ್ತಾಳೆ. ಆಕೆ ಬಹುಕ್ರಿಯಾ ದಕ್ಷೆ: ತಾಯಿಯಾಗಿ ಪತ್ನಿಯಾಗಿ, ಉದ್ಯಮಿ ಸ್ತ್ರೀ ಯಾಗಿ ವಿವಿಧ ಹೊಣೆಗಳನ್ನು ಮೊನ್ನ ಮೊನ್ನೆಯ ತನಕ ಸಮರ್ಪಕವಾಗಿ ನಿರ್ವಹಿಸುತ್ತಾ ದಿನದಲ್ಲಿ ಹದಿನೆಂಟು ಗಂಟೆಗಳಾದರೂ ಚಟುವಟಿಕೆಯಿಂದ ಇರುತ್ತಿದ್ದಳು. ಆದರೆ ಆಕೆಗೆ ೩೮ ವರ್ಷ ತುಂಬುತ್ತಿದ್ದಂತೆಯೇ ಎಲ್ಲಾ ಬದಲಾಯಿತು! ಬರಬರುತ್ತಾ ಮುಖದಲ್ಲಿ ಊತ ಕಾಣಿಸಿಕೊಂಡಿತು. ಮುಟ್ಟು ಪ್ರಾರಂಭವಾಯಿತೆಂದರೆ ಅದು ನಿಲ್ಲುವುದೇ ತಡ; ಋತುಸ್ರಾವವೂ ಹೆಚ್ಚೀ. ಯಾವಾಗಲೂ ದಣಿವೆ. ರಾತ್ರಿಪೂರ್ತಿ ಮಲಗಿ ನಿದ್ರಿಸಿದರೂ ಬೆಳಗ್ಗೆ ಎದ್ದಾಗ ದೇಹದಲ್ಲಿ ಲವಲವಿಕ ಇರುತ್ತಿರಲಿಲ್ಲ.

ತನಗೆ ಏನು ಕಾಯಿಲೆಯೋ, ಎಂಥದ್ದೋ ಎಂದು ಆಕೆ ವೈದ್ಯರಲ್ಲಿ ತೋರಿಸಿಕೊಂಡಳು. ವೈದ್ಯರು ಆಕೆಯನ್ನು ಪರೀಕ್ಷೆಮಾಡಿ, ಒಮ್ಮಿಂದೊಮ್ಮೆಲೇ ''ನಿಮ್ಮ ಥೈರಾಯಿಡ್ ಗ್ರಂಥಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಿಮಗೆ ಥೈರಾಯಿಡ್ ಚೋದಕದ ಕೊರತೆ ಇದ್ದಂತೆ ಕಾಣುತ್ತದೆ. ರಕ್ತ ಪರೀಕ್ಷೆ ಮಾಡಿಸಿಕೊಂಡು ಬನ್ನಿ'' ಎಂದು ಹೇಳಿ, ರಕ್ತದಲ್ಲಿನ ಥೈರಾಯಿಡ್ ಚೋದಕದ ಸಾಂದ್ರತೆಯನ್ನು ಮಾಪನ ಮಾಡುವುದಕ್ಕೆಂದು ಬರೆದುಕೊಟ್ಟರು. ಪ್ರಯೋಗ ಶಾಲೆಯ ಪರೀಕ್ಷೆಗಳು ಕವಿತಾಳ ರಕ್ತದಲ್ಲಿ ಥೈರಾಯಿಡ್ ಚೋದಕದ ಸಾಂದ್ರತೆ ಕಡಿಮೆ ಇರುವುದನ್ನು ಸ್ಪಷ್ಟವಾಗಿ ತೋರಿಸಿದುವು. ಆಕೆಗೆ ಥೈರಾಯಿಡ್ ಗ್ರಂಥಿಯ ಕ್ರಿಯಾ ನ್ಯೂನತೆ (ಹೈಪೋಥೈರಾಯಿಡಿಸಂ) ಇರುವುದು ದೃಢವಾಯಿತು. ಅವಳ ಥೈರಾಯಿಡ್ ಗ್ರಂಥಿ ಅತಿ ಕಡಿಮೆ ಥೈರಾಯಿಡ್ ಚೋದಕವನ್ನು ರಕ್ತದೊಳಕ್ಕೆ ಸ್ರವಿಸುತ್ತಿತ್ತು. ಈಗ ಆಕೆ ಪ್ರತಿನಿತ್ಯವೂ ವೈದ್ಯರು ಬರೆದುಕೊಟ್ಟ ಮಾತ್ರೆಗಳನ್ನು ಸೇವಿಸುತ್ತಿದ್ದಾಳೆ. ದಣಿವೆ ಕಡಿಮೆಯಾಗುತ್ತಾ ಬಂದಿದೆ. ಮೊದಲಿದ್ದ ಲವಲವಿಕೆಯೂ ಮರಳುತ್ತಿದೆ.

ಇದು ಕವಿತಾಳ ಕಥೆಯಾದರೆ, ಚೆನ್ನೈ ನಗರದ ಶಾರದೆಯ ಕಥೆ ಇನ್ನೊಂದು ಬಗೆಯದು. ಶಾರದೆಗೆ ನಲವತ್ತುವರ್ಷಗಳಾಗುತ್ತಲೇ, ಆಕೆ ಹೊರಗಾಗುವುದು ನಿಂತು ಹೋಯಿತು. ಎದೆಯಲ್ಲಿ ಏನೋ ಆತಂಕ ಮೊದಲಾಯಿತು. ಆಕೆಗೆ ತಡೆಯಲಾರದಷ್ಟು ಹಸಿವೆ. ಹವೆ ನಿಯಂತ್ರಿತ ಕೊಠಡಿಯಲ್ಲಿ ಕುಳಿತಿದ್ದರೂ ಸಹಿಸಲಾರದಷ್ಟು ಸೆಖೆ ಮೈ ಎಲ್ಲಾ ಬೆವತು ಬಿಡುತ್ತಿತ್ತು. ಯಾವುದರಲ್ಲಾದರೂ ಸ್ವಲ್ಪ ಏರುಪೇರಾದರೆ ಸಾಕು, ಕೂಗಾಡುವುದಕ್ಕೆ ಪ್ರಾರಂಭಿಸಿ ಬಿಡುತ್ತಿದ್ದಳು. ''ತನಗೆ ಮುಟ್ಟು ನಿಲ್ಲುವ ಸಮಯ ಹತ್ತಿರವಾಗುತ್ತಿದೆ; ಆದರಿಂದಲೇ ಹೀಗೆಲ್ಲಾ ಆಗುತ್ತಿದೆ'' ಎಂದು ಆಕೆ ಭಾವಿಸಿದ್ದಳು.

ಡಿಸೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಕೂಮಿ ಚಿನೋಯ್ ಅವರ ಲೇಖನದ ಅನುವಾದ

ಒಂದು ದಿನ ಇದ್ದಕ್ಕಿದ್ದಂತೆ ಆಕೆಗೆ ತಲೆ ಸುತ್ತು ಬಂದು ಹೃದಯ ಒಂದೇ ಸಮನೆ ಬಡಿದುಕೊಳ್ಳಲಾರಂಭಿಸಿತು. ತಾನು ಸಾಯುತ್ತಿರುವೆನೆಂಬ ಭಯ ಆಕೆಯನ್ನು ಆವರಿಸಿತು. ವೈದ್ಯರು ಪರೀಕ್ಷೆ ಮಾಡಿದಾಗ ಆಕೆಯ ರಕ್ತದ ಒತ್ತಡ ಅಧಿಕವಾಗಿತ್ತು. ಇಸಿಜಿ (ಹೃದಯದಲ್ಲಿನ ವಿದ್ಯುತ್ ಸಂಚಾರದ ರೇಖಾಚಿತ್ರ) ಆಕೆಯ ಹೃದಯ ಹೆಚ್ಚಾಗಿ ಬಡಿದುಕೊಳ್ಳುತ್ತಿರುವುದನ್ನು ದೃಢಪಡಿಸಿತು. ವೈದ್ಯರು ಕೊಟ್ಟ ಸುಪ್ತಿಕಾರಕದ (ಟ್ರಾಕ್ವಿಲೈಜರ್) ಮಾತ್ರೆಗಳನ್ನು ಎರಡು ದಿನ ತೆಗೆದುಕೊಂಡ ಮೇಲೆ ಶಾರದೆಯ ರಕ್ತದ ಒತ್ತಡದಲ್ಲಿ ಇಳುವರಿ ಕಂಡು ಬಂದಿತು. ಆದರೆ ಆಕೆಯ ವೈಯಲ್ಲಿನ ಮುಜುಗರ ಹಾಗೆಯೇ ಉಳಿಯಿತು. ಆಗ ವೈದ್ಯರು ಆಕೆಯ ಕಣ್ಣುಗಳನ್ನು ಪರೀಕ್ಷಿಸಿ ಆಕೆಗೆ ಥೈರಾಯಿಡ್ ಗ್ರಂಥಿಯ ಅತಿಕ್ರಿಯೆ (ಹೈಪರ್ ಥೈರಾಯಿಡಿಸಂ) ಇರಬಹುದೆಂದು ಶಂಕಿಸಿ, ನಿರ್ನಾಳ ಗ್ರಂಥಿಯ ತಜ್ಞರಲ್ಲಿ ತೋರಿಸಿಕೊಂಡು ಬನ್ನಿ ಎಂದು ಕಳುಹಿಸಿಕೊಟ್ಟರು. ಅವರು ರಕ್ತಪರೀಕ್ಷೆ ಮಾಡಿಸಲು ಶಾರದೆಗೆ ಥೈರಾಯಿಡ್ ಗ್ರಂಥಿಯ ಅತಿಕ್ರಿಯೆ ಇರುವುದು ದೃಢವಾಯಿತು. ಆಕೆಯ ಥೈರಾಯಿಡ್ ಗ್ರಂಥಿ ಹೆಚ್ಚು ಹೆಚ್ಚು ಚೋದಕವನ್ನು ರಕ್ತದೊಳಕ್ಕೆ ಸುರಿಸುತ್ತಿತ್ತು. ಇದಕ್ಕೆ ವೈದ್ಯರು ಚಿಕಿತ್ಸೆ ಮಾಡಿದ ಮೇಲೆ ಆಕೆ ಆರೋಗ್ಯದಿಂದಿದ್ದಾಳೆ.

ಹೀಗೆ ಥೈರಾಯಿಡ್ ಗ್ರಂಥಿಯ ಕ್ರಿಯೆ ಮಂದವಾದರೂ ಕಷ್ಟ; ಅತಿಯಾದರೂ ಕಷ್ಟ. ಅದು ಸಮರ್ಪಕವಾಗಿ ಕೆಲಸ ಮಾಡುತ್ತಿದ್ದರೇನೇ ನಾವು ಆರೋಗ್ಯವಾಗಿರುವುದು. ''ನಮ್ಮ ದೇಶದಲ್ಲಿ ಸಿಹಿಮೂತ್ರ ರೋಗವನ್ನು ಬಿಟ್ಟರೆ, ಥೈರಾಯಿಡ್ ಗ್ರಂಥಿಯ ರೋಗಗಳೇ ನಿರ್ನಾಳ ಗ್ರಂಥಿಗಳ ರೋಗಗಳ ಪೈಕಿ ಹೆಚ್ಚಾಗಿ ಕಂಡು ಬರುವ ರೋಗಗಳು. ಥೈರಾಯಿಡ್ ಗ್ರಂಥಿಯ ರೋಗ ಪ್ರಾರಂಭದ ಚಿಹ್ನೆಗಳನ್ನು ಅನೇಕರು ನಿರ್ಲಕ್ಷ್ಯಮಾಡಿಬಿಡುತ್ತಾರೆ, ಇನ್ನೂ ಕೆಲವರು-ತಮಗೆ ವಯಸ್ಸಾಗುತ್ತಿರುವುದರಿಂದ ಹೀಗಾಗುತ್ತಿದೆ; ತಮಗೆ ಆತಂಕದಿಂದ ಹೀಗಾಗುತ್ತಿದೆ-ಎಂದು ಭಾವಿಸಿಕೊಂಡು ಇದ್ದು ಬಿಡುತ್ತಾರೆ. ಹೀಗಾಗಿ ಎಷ್ಟೋ ವೇಳೆ ಥೈರಾಯಿಡ್ ಗ್ರಂಥಿಯ ರೋಗಗಳು ಪತ್ತೆಯಾಗುವುದೇ ಇಲ್ಲ'' ಎಂದು ಮುಂಬಯಿನ ಬಾಂಬೆ ಹಾಸ್ಪಿಟಲ್ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ನಿರ್ನಾಳ ಗ್ರಂಥಿ ತಜ್ಞ ಡಾ. ಶಾಂತಿ ಸಹಾನಿ ಅಭಿಪ್ರಾಯ ಪಡುತ್ತಾರೆ.

ಜ್ಞಾಪಕಶಕ್ತಿ ಕುಗ್ಗುವುದು, ಒಂದು ವಿಷಯದ ಮೇಲೆ ಮನಸ್ಸಿಡುವುದರಲ್ಲಿ ಅಶಕ್ತತೆ, ನಿರಾಸಕ್ತಿ, ಆತಂಕ, ಸುಲಭದಲ್ಲಿ ಸಿಟ್ಟಿಗೇಳುವುದು ಮುಂತಾದ ಮಾನಸಿಕ ತೊಂದರೆಗಳೂ ರಾಷ್ಟ್ರೀಯ ವೈದ್ಯಕೀಯ ಕಾಲೇಜ್ ಹಾಗೂ ಟಿ.ವೈ.ಎಲ್. ನಾಯರ್ ಆಸ್ಪತ್ರೆಯಲ್ಲಿ ಮನೋರೋಗ ಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ. ಚಾರ್ಲ್ಸ್ ಪಿಂಟೋ ಹೇಳುತ್ತಾರೆ. ಥೈರಾಯಿಡ್ ಗ್ರಂಥಿಯ ರೋಗ ಪತ್ತೆಯಾಗದೆ ವೈದ್ಯರಿಂದ ವೈದ್ಯರಿಗೆ ಅಂಡಲೆಯುವ ಈ ಚಿಹ್ನೆಗಳುಳ್ಳ ರೋಗಗಳನ್ನು ಅವರು ಕಂಡಿದ್ದಾರೆ.

ಹೆಂಗಸರೇ ಗಂಡಸರಿಗಿಂತ ಹೆಚ್ಚಾಗಿ ಥೈರಾಯಿಡ್ ಗ್ರಂಥಿಯ ತೊಂದರೆಗಳಿಗೆ ತುತ್ತಾಗುವವರು. ಥೈರಾಯಿಡ್ ಗ್ರಂಥಿಯ ರೋಗಗಳಿಗೆ ಮೂಲವಾದ ದೈಹಿಕ ವಿಕಾರಗಳೂ ಹೆಂಗಸರಲ್ಲೇ ಹೆಚ್ಚು. ಅವರ ಶರೀರ ಕೆಲವೊಮ್ಮೆ ತನ್ನಲ್ಲಿಯೇ ಥೈರಾಯಿಡ್ ಗ್ರಂಥಿ ತನ್ನದೆಂಬುದನ್ನೇ ಮರೆತು ಅವರ ವಿರುದ್ಧವಾಗಿಯೇ ಪ್ರತಿಕಾಯ (ಆಂಟಿಬಾಡಿ) ಗಳನ್ನು ಸೃಷ್ಟಿಸತೊಡಗುತ್ತದೆ. ಈ ಪ್ರತಿಕಾಯಗಳು

ಅವರ ಶರೀರದ ಥೈರಾಯಿಡ್ ಗ್ರಂಥಿಯ ಮೇಲೆಯೇ ಆಕ್ರಮಣ ನಡೆಸಿ ಅವರಿಗೆ ಥೈರಾಯಿಡ್ ರೋಗ ಬರಿಸುತ್ತವೆ.

ಥೈರಾಯಿಡ್ ಗ್ರಂಥಿ ನಮ್ಮ ಕುತ್ತಿಗೆಯ ಕೆಳಭಾಗದಲ್ಲಿ ಶ್ವಾಸನಾಳದ ಮೇಲಿದೆ. ಮಾಂಸಲವಾದ ಈ ಗ್ರಂಥಿ ಗಾತ್ರದಲ್ಲಿ ಚಿಕ್ಕದು. ಶ್ವಾಸನಾಳದ ಇಕ್ಕೆಲಗಳಲ್ಲಿ ಚಿಟ್ಟೆಯ ರೆಕ್ಕೆಗಳಂತೆ ಇದರ ವಿಸ್ತೃತಿ. ಅದು ರಕ್ತದಿಂದ ಅಯೊಡೀನನ್ನು ಸೆಳೆದುಕೊಂಡು, ಥೈರಾಕ್ಸಿನ್. ಮತ್ತು ಟ್ರೈಅಯೊಡೋಥೈರೋನೀನ್ ಎಂಬ ಎರಡು ಚೋದಕಗಳನ್ನು ಸಂಯೋಜನೆ ಮಾಡಿ ರಕ್ತಕ್ಕೆ ಸುರಿಯುತ್ತದೆ. ನಮ್ಮ ಶರೀರದ ಜೀವಕೋಶಗಳೂ, ಅವುಗಳಿಂದಾದ ಅಂಗಗಳೂ ತಮ್ಮ ಶಕ್ತಿಯನ್ನು ನಿಯಂತ್ರಿಸಿಕೊಂಡು ಸಮರ್ಪಕವಾಗಿ ಕೆಲಸಮಾಡಬೇಕಾದರೆ ಈ ಥೈರಾಯಿಡ್ ಚೋದಕಗಳು ಎಷ್ಟು ಬೇಕೋ ಅಷ್ಟು ಪ್ರಮಾಣದಲ್ಲಿ ರಕ್ತದಲ್ಲಿ ಪ್ರವಹಿಸುತ್ತಿರಬೇಕು. ಅವುಗಳ ಪ್ರಮಾಣ ಹೆಚ್ಚಾದರೆ ಥೈರಾಯಿಡ್ ಅತಿಕ್ರಿಯೆ (ಹೈಪರ್ ಥೈರಾಯಿಡಿಸಂ) ಉಂಟಾಗುತ್ತದೆ ; ಕಡಿಮೆಯಾದರೋ ಥೈರಾಯಿಡ್ ಕ್ರಿಯಾ ನ್ಯೂನತೆ (ಹೈಪೋಥೈರಾಯಿಡಿಸಂ) ಉಂಟಾಗುತ್ತದೆ. ಈ ರೋಗಗಳ ಲಕ್ಷಣಗಳೇನು? ಅವು ನಿಮ್ಮಲ್ಲೇನಾದರೂ ತೋರಿಬಂದರೆ ನೀವೇನು ಮಾಡಬೇಕು? ಇವಕ್ಕೆಲ್ಲಾ ಉತ್ತರ ಇಲ್ಲಿದೆ ; ಬನ್ನಿ ತಿಳಿದುಕೊಳ್ಳೋಣ!

ಥೈರಾಯಿಡ್ ಕ್ರಿಯಾನ್ಯೂನತೆ (ಅವಕ್ರಿಯೆ)

ಥೈರಾಯಿಡ್ ಗ್ರಂಥಿಯ ಕ್ರಿಯಾ ನ್ಯೂನತೆ ಅದರ ಅತಿಕ್ರಿಯೆಗಿಂತ ಹೆಚ್ಚಾಗಿ ಕಂಡು ಬರುತ್ತದೆ. ಥೈರಾಯಿಡ್ ಗ್ರಂಥಿಯ ಕ್ರಿಯೆ ಮಂದವಾಗಲೂ ಕಾರಣಗಳು ಹಲವಾರು : ಭಾರತದಲ್ಲಂತೂ ಆಹಾರದಲ್ಲಿನ ಅಯೊಡೀನ್ ಕೊರತೆ ಅದಕ್ಕೆ ಮುಖ್ಯ ಕಾರಣ. ಇದರ ಜೊತೆಗೆ ಹೆಂಗಸರಲ್ಲಿ ಹಿಂದೆ ತಿಳಿಸಿದಂತೆ ಸ್ವಯಂನಿರೋಧಕತೆ (ಆಟೋಇಮ್ಯೂನಿಟಿ) ಯಿಂದುಂಟಾದ ಹಶಿಮೊಟೋ ರೋಗವೂ ಒಂದು ಕಾರಣ. ಈ ರೋಗವನ್ನು ಹಶಿಮೊಟೋ ಎಂಬ ಜಪಾನ್ ದೇಶದ ವೈದ್ಯರು ಮೊತ್ತ ಮೊದಲಿಗೆ ಪತ್ತೆ ಹಚ್ಚಿ ೧೯೧೨ರಲ್ಲಿ ವಿವರಿಸಿದ್ದರಿಂದ ಅವರ ಹೆಸರನ್ನೇ ಅದಕ್ಕೆ ಇಡಲಾಗಿದೆ. ಚೆನ್ನೈನ ಅಪೋಲೋ ಆಸ್ಪತ್ರೆಯಲ್ಲಿ ನಿರ್ನಾಳ ಗ್ರಂಥಿಗಳ ತಜ್ಞರಾಗಿರುವ ಡಾ. ಸಿ. ವಿ. ಕೃಷ್ಣನ್ ಅವರ ಪ್ರಕಾರ ನೂರರಲ್ಲಿ ೩ ರಿಂದ ೫ರಷ್ಟು ಹೆಂಗಸರಿಗೆ ಹೆರಿಗೆಯಾದ ಕೂಡಲೇ ಥೈರಾಯಿಡ್ ಗ್ರಂಥಿಯ ಕ್ರಿಯಾನ್ಯೂನತೆ ಕಂಡು ಬರುತ್ತದೆ. ಈ ಹೆರಿಗೆಗೆ ಸಂಬಂಧಿಸಿದ ಕ್ರಿಯಾನ್ಯೂನತೆ ಸಾಮಾನ್ಯವಾಗಿ ತನ್ನಷ್ಟಕ್ಕೆ ತಾನೇ ಸರಿಹೋಗುತ್ತದೆ. ಎಲ್ಲೋ ಕೆಲವು ಬಾರಿ ಹೆರಿಗೆಯಾದ ಮೇಲೂ ಅದು ಹಾಗೆಯೇ ಬಹಳ ದಿನ ಉಳಿದು ಹೋದಾಗ ಹೊಸದಾಗಿ ತಾಯಿಯಾದವಳು ಥೈರಾಯಿಡ್ ಚೋದಕದ ಗುಳಿಗೆಗಳನ್ನು ಸೇವಿಸುತ್ತಲೇ ಇರಬೇಕಾಗಬಹುದು.

ತಲೆ ಮತ್ತು ಕುತ್ತಿಗೆಯ ಭಾಗಗಳಿಗೆ ಎಕಿರಣ ಚಿಕಿತ್ಸೆಯಾದಾಗಲೂ, ವಿಷಾಣು (ವೈರಸ್) ಜ್ವರಗಳಿಂದಲೂ, ಪಿಟ್ಯುಟರಿ ಗ್ರಂಥಿಯಲ್ಲಿ ಗೆಡ್ಡೆಗಳು ಇದ್ದಾಗಲೂ , ಅನುವಂಶೀಯತೆಯಿಂದಲೂ ಥೈರಾಯಿಡ್ ಕ್ರಿಯಾ ನ್ಯೂನತೆ ತಲೆದೋರಬಹುದು. ಕೆಲವು ಔಷಧಿಗಳು ಮಾನಸಿಕ ರೋಗಗಳಲ್ಲಿ ಬಳಸುವ ಲೀಥಿಯಂ, ಹೃದ್ರೋಗಗಳಲ್ಲಿ ಬಳಸುವ ಅಮಿಯೋಡೋರಾನ್ ಕೂಡ ಥೈರಾಯಿಡ್ ಕ್ರಿಯಾನ್ಯೂನತೆಯನ್ನುಂಟು ಮಾಡಬಲ್ಲವು. ಕಾರಣವೇನೇ ಇರಲಿ, ಥೈರಾಯಿಡ್ ಕ್ರಿಯಾ ನ್ಯೂನತೆ ಶರೀರದಲ್ಲಿನ ಜೈವಿಕಕ್ರಿಯೆಗಳನ್ನು ನಿಧಾನಗೊಳಿಸುತ್ತದೆ. ಇದರಿಂದ ನಿಶ್ಶಕ್ತಿ, ಚಳಿ

ಬಿಳಿಯಾಗುವಿಕೆ, ಮನಸ್ಸನ್ನು ಕೇಂದ್ರೀಕರಿಸುವಲ್ಲಿ ತೊಂದರೆ, ಜ್ಞಾಪಕ ಶಕ್ತಿ ಕುಂದುವುದು, ಮುಖ ಊದಿಕೊಳ್ಳುವುದು ತೂಕ ಹೆಚ್ಚುವುದು- ಇವೆಲ್ಲಾ ತಲೆದೋರಬಹುದು.

ಸಮಯ ಕಳೆದಂತೆ ಈ ತೊಂದರೆಗಳೆಲ್ಲಾ ಇನ್ನೂ ಉಲ್ಬಣಗೊಳ್ಳುತ್ತವೆ: ಒಣಗಿದ ಚರ್ಮ, ಮುರಿಯುವ ಉಗುರುಗಳು, ಉದುರುವ ಕೂದಲು, ನೋಯುವ ಮಾಂಸ ಖಂಡಗಳು, ಅವನ್ನು ಒಂಟಿದಂತಾಗುವಿಕೆ, ಹೃದಯ ಬಡಿತದಲ್ಲಿ ನಿಧಾನತೆ, ಮಲಬದ್ಧತೆ ಮತ್ತು ಸ್ತ್ರೀಯರಲ್ಲಿ ಎಂದಿಗಿಂತ ಹೆಚ್ಚು ದಿನಗಳು ಅಧಿಕವಾಗಿ ಋತುಸ್ರಾವವಾಗುವಿಕೆ-ಇವು ಕಂಡು ಬರುತ್ತವೆ. ಕೆಲವೊಮ್ಮೆ ಸ್ತ್ರೀಯರಲ್ಲಿ ಅಂಡಾಶಯದಿಂದ ಕ್ರಮದಂತೆ ಅಂಡಾಣು ಬಿಡುಗಡೆ ಯಾಗದೆಯೇ ಋತು ಚಕ್ರ ಏರುಪೇರಾಗಿ ಗರ್ಭಧಾರಣೆಯಲ್ಲಿಯೂ ತೊಂದರೆಯಾಗಬಹುದು. ಗರ್ಭಧಾರಣೆ ಯಾದಾಗಲೂ ಇಂತಹ ಸ್ತ್ರೀಯರಲ್ಲಿ ಗರ್ಭಸ್ರಾವವೂ, ದಿನ ತುಂಬದೆಯೇ ಅವಧಿ ಪೂರ್ವ ಮಕ್ಕಳು ಹುಟ್ಟುವುದೂ, ಬೇರೆಯ ಆರೋಗ್ಯವಂತ ಸ್ತ್ರೀಯರಿಗೆ ಹೋಲಿಸಿದರೆ, ಹೆಚ್ಚಾಗಿರುತ್ತದೆ.

ಥೈರಾಯಿಡ್ ಕ್ರಿಯಾ ನ್ಯೂನತೆಯಿಂದ ಮಾನಸಿಕ ಖಿನ್ನತೆ: ಥೈರಾಯಿಡ್ ಗ್ರಂಥಿ ಕಡಿಮೆ ಚೋದಕವನ್ನು ಉತ್ಪಾದಿಸಿ ಸ್ರವಿಸುವುದರಿಂದ ಮಾನಸಿಕ ಖಿನ್ನತೆಯೂ ತಲೆದೋರಬಹುದು. ಅಮೆರಿಕೆಯಲ್ಲಿ ನಡದ ಸಂಶೋಧನೆಗಳು ಈ ಅಂಶವನ್ನು ಹೊರಗೆಡಹಿವೆ. ಬಹಳ ಕಾಲ ಮನಸ್ಸಿನ ಖಿನ್ನತೆಯಿಂದ ನರಳುತ್ತಿರುವ ನೂರು ರೋಗಿಗಳನ್ನು ತೆಗೆದುಕೊಂಡರೆ, ಅವರಲ್ಲಿ ಇಪ್ಪತ್ತರಷ್ಟು ಮಂದಿಗೆ ಥೈರಾಯಿಡ್ ಚೋದಕದ ನ್ಯೂನತೆ ಇರುತ್ತದೆ. ಅಲ್ಪ-ಸ್ವಲ್ಪ ಚೋದಕದ ನ್ಯೂನತೆ ಇರುವ ಹೆಂಗಸರೂ, ಆರೋಗ್ಯವಂತ ಸ್ತ್ರೀಯರಿಗಿಂ[illegible]ರು ಮೂರುಪಟ್ಟು ಹೆಚ್ಚು ಮಾನಸಿಕ ಖಿನ್ನತೆಗೆ ಗುರಿಯಾಗಿರುತ್ತಾರೆ: ನೂರಕ್ಕೆ ೨೦ ಜನ ಆರೋಗ್ಯವಂತ ಸ್ತ್ರೀಯರು ಮಾನಸಿಕ ಖಿನ್ನತೆಗೆ ಗುರಿಯಾದರೆ, ನೂರಕ್ಕೆ ೫೬ರಷ್ಟು ಥೈರಾಯಿಡ್ ನ್ಯೂನತೆಯುಳ್ಳ ಸ್ತ್ರೀಯರು ಮಾನಸಿಕ ಖಿನ್ನತೆಗೆ ಗುರಿಯಾಗಿರುತ್ತಾರೆ. ಇಷ್ಟೆಲ್ಲಾ ನಮಗೆ ಅರಿವಾಗಿದ್ದರೂ, ಮಾನಸಿಕ ಖಿನ್ನತೆಗಾಗಿ ಚಿಕಿತ್ಸೆ ಪಡೆಯುತ್ತಿರುವ ಅನೇಕ ರೋಗಿಗಳಲ್ಲಿ ಥೈರಾಯಿಡ್ ಪರೀಕ್ಷೆಗೆ ಆದ್ಯತೆ ನೀಡಿರುವುದೇ ಇಲ್ಲ!

ಸಮಂಜಸ ಚಿಕಿತ್ಸೆ ಅಗತ್ಯ: ಕ್ರಿಯಾ ನ್ಯೂನತೆ ಇರುವ ಥೈರಾಯಿಡ್ ಗ್ರಂಥಿಯನ್ನು ಸರಿಪಡಿಸಲು ಸಾಧ್ಯವಿಲ್ಲ. ಆದರೆ ನ್ಯೂನತೆಯ ಚಿಕಿತ್ಸೆ ಸುಲಭ. ರೋಗಿಗಳು ಪ್ರತಿನಿತ್ಯವೂ ಒಂದು ಥೈರಾಯಿಡ್ ಚೋದಕದ ಮಾತ್ರೆಯನ್ನು ಸೇವಿಸಿದರೆ ಸಾಕು, ಅವರ ದೇಹದಲ್ಲಿನ ಈ ಚೋದಕದ ಬೇಡಿಕೆಯನ್ನು ಹೊರಗಿನಿಂದ ಪೂರೈಸಿದಂತಾಗುತ್ತದೆ. ಈ ಮಾತ್ರೆಯನ್ನು ರೋಗಿಗಳು ತಾವು ಜೀವಿಸಿರುವಷ್ಟು ದಿನ ಸೇವಿಸಬೇಕಾಗುತ್ತದೆ. ಯಾರು, ಎಷ್ಟು ಪ್ರಮಾಣದ ಥೈರಾಯಿಡ್ ಚೋದಕದ ಗುಳಿಗೆ ಸೇವಿಸಬೇಕು ಎಂಬುದನ್ನು ಸಾವಧಾನದಿಂದ ವಿವೇಚಿಸಿ ವೈದ್ಯರು ನಿರ್ಧರಿಸಬೇಕಾಗುತ್ತದೆ. ಆವಶ್ಯಕತೆಗಿಂತ ಹೆಚ್ಚು ಥೈರಾಯಿಡ್ ಚೋದಕದ ಸೇವನೆಯೂ ಅಪಾಯವೇ: ಮೂಳೆ ನಶಿಸಿ ಹೋಗಬಹುದು, ಹೃದಯದ ಕುಕ್ಷಿಗಳು ಸಂಕುಚನೆಯಲ್ಲಿನ ತಾಳ-ಮೇಳ ಏರುಪೇರಾಗಿ ಬಿಡಬಹುದು. ಕಡಿಮೆ ಸೇವಿಸಿದರೆ ಚೋದಕದ ನ್ಯೂನತೆಯಿಂದ ಮೊದಲೇ ಹೆಚ್ಚಾಗಿರುವ ರಕ್ತದ ಒತ್ತಡ, ಏರಿದ ರಕ್ತದಲ್ಲಿನ ಕೊಲೆಸ್ಟಿರಾಲ್ ಸಾಂದ್ರತೆ ಹಾಗೆಯೇ ಉಳಿದು ಬಿಡಬಹುದು.

ಕೆಲವೊಮ್ಮೆ ಥೈರಾಯಿಡ್ ನ್ಯೂನತೆಗೆ ಅತಿ ಚಿಕಿತ್ಸೆಯಾದಾಗ ಆಗ ನ್ಯೂನತೆಯ ಲಕ್ಷಣಗಳು

ಹೋಗಿ ಥೈರಾಯಿಡ್ ಅತಿಕ್ರಿಯೆಯ ಚಿಹ್ನೆಗಳಿಗೆ ಎಡೆಮಾಡಿಕೊಡಬಹುದು. ಈ ಮುಂದಿನ ಐತಿಹ್ಯ ಓದಿ. ಮುಂಬೈನ ೪೫ ವರ್ಷದ ಮಹಿಳೆಯೊಬ್ಬಳು ಎಂಟು ಹತ್ತು ತಿಂಗಳುಗಳಿಂದ ಥೈರಾಯಿಡ್ ಕ್ರಿಯಾ ನ್ಯೂನತೆಯನ್ನು ಸರಿಪಡಿಸಲು ಮಾತ್ರೆಗಳನ್ನು ಸೇವಿಸುತ್ತಿದ್ದಳು. ಎಲ್ಲಾ ಸರಿಯಾಗಿಯೇ ಇತ್ತು. ಆದರೆ ಇದ್ದಕ್ಕಿದ್ದಂತೆ ಒಂದು ದಿನ ಆಕೆಗೆ ಏನೋ ಕಳವಳ, ಏನೋ ಅಂಜಿಕೆ ಮೊದಲಾಯಿತು. ಅವಳ ಹೃದಯ ದೌಡಾಯಿಸ ತೊಡಗಿತು. ಕೈ ನಡುಗ ಹತ್ತಿತು. ಆಕೆಯನ್ನು ತನಗೆ ಹೃದಯಾಘಾತವಾಗುತ್ತಿದೆಯೋ ಏನೋ ಎಂಬ ಕಳವಳ ಕಾಡ ತೊಡಗಿತು. ಆಕೆಯ ವೈದ್ಯರು ಆಕೆ ಆವಶ್ಯಕತೆಗಿಂತ ಹೆಚ್ಚು ಪ್ರಮಾಣದ ಥೈರಾಯಿಡ್ ಚೋದಕದ ಮಾತ್ರೆಗಳನ್ನು ಸೇವಿಸುತ್ತಿದ್ದಾಳೆಂದು ಸರಿಯಾದ ಕಾರಣವನ್ನು ಪತ್ತೆಹಚ್ಚಿ ಚೋದಕದ ಮಾತ್ರೆಯ ಪ್ರಮಾಣವನ್ನು ಆವಶ್ಯಕತೆ ಇದ್ದಷ್ಟಕ್ಕೆ ತಗ್ಗಿಸಿದ ಮೇಲೆ, ಎಲ್ಲಾ ಸರಿಹೋಯಿತು.

ಡಾ. ಪಿ. ಪಿ. ರಾವ್ ಮುಂಬಯಿಯ ಸರ್ ಜೆ. ಜೆ. ಶೈಕ್ಷಣಿಕ ಆಸ್ಪತ್ರೆಯಲ್ಲಿ ನಿರ್ನಾಳಗ್ರಂಥಿ ಶಾಸ್ತ್ರದ ಪ್ರಾಧ್ಯಾಪಕರು. ಅವರು ಮುಂಬೈ ನಗರದ ನಿರ್ನಾಳಗ್ರಂಥಿ ಅಧ್ಯಯನ ಸಂಸ್ಥೆ ಚೋದಕ ಚಿಕಿತ್ಸೆಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸ್ಥಾಪಕ-ನಿರ್ವಾಹಕರೂ ಕೂಡ. ಅವರ ಅಭಿಪ್ರಾಯದಂತೆ ಕೆಲವು ಥೈರಾಯಿಡ್ ನ್ಯೂನತೆಯುಳ್ಳ ರೋಗಿಗಳು ವೈದ್ಯರ ಸಲಹೆಯನ್ನು ನಿರ್ಲಕ್ಷಿಸಿ ಆವಶ್ಯಕತೆಗಿಂತ ಹೆಚ್ಚಿನ ಮಾತ್ರೆಗಳನ್ನು ಸೇವಿಸಿ ಥೈರಾಯಿಡ್ ಚೋದಕದ ಅತಿಕ್ರಿಯೆಗೆ ಒಳಗಾಗುತ್ತಾರೆ. ಮಹಾರಾಷ್ಟ್ರದ ವಸ್ಸೈನಲ್ಲಿನ ರೋಗಿಯೊಬ್ಬಳ ಕಥೆ ಹೀಗಿದೆ- ಅವಳು ಥೈರಾಯಿಡ್ ನ್ಯೂನತೆಗಾಗಿ ಮಾತ್ರೆಗಳನ್ನು ಸೇವಿಸುತ್ತಿರುವಾಗ ಹಸಿವೆ ಕಡಿಮೆಯಾಗುತ್ತಿರುವುದನ್ನು ಗಮನಿಸಿದಳು. ಕಡಿಮೆ ತಿಂದು ತನ್ನ ತೂಕ ಇಳಿಸಿಕೊಳ್ಳಲು ಆಕೆ ವೈದ್ಯರ ಸಲಹೆಯಂತೆ ದಿನಕ್ಕೆ ಒಂದು ಮಾತ್ರೆ ಸೇವಿಸುವುದನ್ನು ಬಿಟ್ಟು, ದಿನಕ್ಕೆ ಮೂರು ಮಾತ್ರೆ ಸೇವಿಸಹತ್ತಿದಳು. ಹೀಗೆ ಮೂರು ತಿಂಗಳ ಸೇವನೆಯನಂತರ ಅವಳ ಹೃದಯದ ಬಡಿತ ಹೆಚ್ಚಾಗಿತ್ತು. ಅವಳ ಕಣ್ಣಿನ ಗುಡ್ಡೆಗಳು ಉಬ್ಬಲಾರಂಭಿಸಿದ್ದುವು. ರಕ್ತದ ಪರೀಕ್ಷೆಗಳು ಆಕೆಯ ರಕ್ತದಲ್ಲಿ ಚೋದಕ ಅತಿಯಾಗಿರುವುದನ್ನು ಸಾಬೀತುಪಡಿಸಿದುವು. ವೈದ್ಯರ ಸಲಹೆಯಂತೆ ಆಕೆ ಸರಿಯಾದ ಪ್ರಮಾಣದಲ್ಲಿ ಚೋದಕದ ಮಾತ್ರೆಗಳನ್ನು ಸೇವಿಸಲು ಪ್ರಾರಂಭಿಸಿದ ಮೇಲೆ ಆ ಚಿಹ್ನೆಗಳೆಲ್ಲಾ ಸರಿಹೋದುವು; ಎಲ್ಲಾ ಎಂದಿನಂತಾಯಿತು.

''ಇಪ್ಪತ್ತೈದರಿಂದ ಮೂವತ್ತು ವರ್ಷ ವಯಸ್ಸಿನವರಲ್ಲಿ ಥೈರಾಯಿಡ್ ನ್ಯೂನತೆ ಕಂಡು ಬಂದರೆ, ರೋಗಿಗಳು ತಾವು ಸೇವಿಸುವ ಔಷಧಿಯ ಪ್ರಮಾಣದಲ್ಲಿ ಎಚ್ಚರಿಕೆಯಿಂದಿರಬೇಕು. ಹೀಗೆ ವೈದ್ಯರು ನಿರ್ಧರಿಸಿರುವಂತೆ ಔಷಧಿ ಸೇವಿಸುತ್ತಿರುವವರೂ ವರ್ಷಕ್ಕೆ ಒಮ್ಮೆಯಾದರೂ ತಮ್ಮ ವೈದ್ಯರನ್ನು ಕಂಡು ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು'' - ಎಂದು ಡಾ. ರಾವ್ ಸಲಹೆ ನೀಡುತ್ತಾರೆ.

ಥೈರಾಯಿಡ್ ಗ್ರಂಥಿಯ ಅತಿಕ್ರಿಯೆ (ಹೈಪರ್ ಥೈರಾಯಿಡಿಸಂ): ಥೈರಾಯಿಡ್ ಗ್ರಂಥಿಯ ಅತಿಕ್ರಿಯೆಗೆ ಮುಖ್ಯವಾದ ಕಾರಣ ಗ್ರೇವ್ಸ್‌ನ ರೋಗ. ಗ್ರೇವ್ಸ್ ಎಂಬ ಐರಿಷ್ ವೈದ್ಯ ಈ ರೋಗವನ್ನು ೧೯ ನೇ ಶತಮಾನದಲ್ಲಿ ಮೊತ್ತಮೊದಲಿಗೆ ವಿವರಿಸಿದ. ಆದ್ದರಿಂದ ಈ ರೋಗಕ್ಕೆ ಅವನ ಹೆಸರನ್ನೇ ಇಡಲಾಗಿದೆ. ಈ ರೋಗದಲ್ಲಿಯೂ ಥೈರಾಯಿಡ್ ಗ್ರಂಥಿಯ ಜೀವಕೋಶಗಳ ವಿರುದ್ಧವೇ ದೇಹ ಪ್ರತಿಕಾಯ

ಗಳನ್ನು ಸೃಷ್ಟಿಸ ತೊಡಗುತ್ತಧೆ. ಥೈರಾಯಿಡ್ ಅತಿಕ್ರಿಯೆಯ ಲಕ್ಷಣಗಳೆಲ್ಲಾ ಅದರ ನ್ಯೂನತೆಯ ಲಕ್ಷಣಗಳ ವಿರುದ್ಧ ವಾದುವು. ಅಂಜಿಕೆ, ವಿಪರೀತ ಸಿಟ್ಟಿಗೇಳುವಿಕೆ, ಹೃದಯ ಜೋರಾಗಿ ಬಡಿದುಕೊಳ್ಳುವುದು, ವಿಪರೀತ ಬೆವರುವಿಕೆ, ಮಾಂಶಖಂಡಗಳ ಅಶಕ್ತತೆ, ಉಗುರುಗಳು ತೆಳ್ಳಗಾಗುವುದು, ಕೂದಲು ಉದುರುವಿಕೆ, ಪದೇ ಪದೇ ಮಲವಿಸರ್ಜನೆ ಯಾಗುವುದು, ಸರಿಯಾಗಿ ಉಂಡರೂ ತೂಕ ಇಳಿಯುತ್ತಾ ಹೋಗುವುದು -ಇವೇ ಅದರ ಲಕ್ಷಣಗಳು. ಇವಲ್ಲದೆಯೇ ಸ್ತ್ರೀಯರಲ್ಲಿ ಕಡಿಮೆ ಮುಟ್ಟು ಹೋಗುವುದು, ಮತ್ತು ಎಂದಿಗಿಂತ ಕಡಿಮೆ ದಿನಗಳು ಋತುಸ್ರಾವ ವಾಗುವುದೂ ಥೈರಾಯಿಡ್ ಅತಿಕ್ರಿಯೆಯಲ್ಲಿ ಕಂಡು ಬರುತ್ತವೆ. ಕೆಲವು ಗ್ರೇವ್ಸ್ ರೋಗ ದಿಂದ ಬಳಲುತ್ತಿರುವವರು ಅತಿಯಾದ ಉತ್ಸಾಹದಿಂದ ಕೆಲಸದಲ್ಲಿ ತೊಡಗಿದರೂ, ಸ್ವಲ್ಪ ಸಮಯದಲ್ಲೇ ತೀವ್ರವಾದ ನಿತ್ರಾಣ ವನ್ನನುಭವಿಸುತ್ತಾರೆ.

ಕಣ್ಣು ಬೇನೆಗಳು: ಥೈರಾಯಿಡ್ ಅತಿಕ್ರಿಯೆ ಯಿಂದ ಅನೇಕರು ಕಣ್ಣಿನ ಬೇನೆಗಳನ್ನು ಅನುಭವಿಸುತ್ತಾರೆ; ಕಣ್ಣು ಕೆಂಪಾಗುವುದು, ಉರಿಯುವುದು, ಕಣ್ಣಿನ ಲೋಳೆಪೊರೆ ಒಣಗುವುದು, ಕಣ್ಣಿನ ಊತ-ಇವೇ ಅವರನ್ನು ಪೀಡಿಸುತ್ತವೆ. ಇಂತಹ ರೋಗಿಗಳಲ್ಲಿ ಕೆಲವರಿಗೆ ಕಣ್ಣಿನ ಮೇಲೆ ಭಾರ ಹೇರಿದಂತೆನಿಸುತ್ತದೆ ಅಥವಾ ಕಣ್ಣುಗೆಡ್ಡೆಯ ಹಿಂದೆ ಊತಕ ಶೇಖರಣೆಯಾಗುವುದರಿಂದ ಕಣ್ಣುಗೆಡ್ಡೆಯೇ ಉಬ್ಬಿಕೊಂಡು ಬಿಡುತ್ತದೆ. ಅಂತಹವರ ಕಣ್ಣು ಕಣ್ಣುಗುಳಿಗಳಿಂದ ಹೊರಗೆ ಉಬ್ಬಿದಂತೆ ಕಾಣುತ್ತದೆ. ''ಹೀಗೆ ಉಬ್ಬಿದ ಕಣ್ಣುಗಳನ್ನು ನೀವು ಮುಚ್ಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಆಗ ನಿಮಗೆ ಕಿರಿಕಿರಿಯಾಗುವುದು ಮಾತ್ರವೇ ಅಲ್ಲ ಮಾನಸಿಕವಾಗಿಯೂ ಗೊಂದಲಕ್ಕೀಡಾಗು ತ್ತೀರಿ'' ಎಂದು ಡಾ.ರಾವ್ ಹೇಳುತ್ತಾರೆ.

ಅತಿಕ್ರಿಯೆಗೆ ಚಿಕಿತ್ಸೆ: ಥೈರಾಯಿಡ್ ಅತಿಕ್ರಿಯೆಗೆ ಚಿಕಿತ್ಸೆ ನೀಡುವುದು ಬಲು ನಾಜೂಕಿನ ಕೆಲಸ. ಅದಕ್ಕಾಗಿ ವೈದ್ಯರ ಮುಂದೆ ಮೂರು ದಾರಿ ಗಳಿವೆ: ವಿಕಿರಣ ಪಟು (ರೇಡಿಯೋ ಆಕ್ಟೀವ್) ಅಯೊಡೀನ್ ಬಳಕೆ, ಶಸ್ತ್ರಕ್ರಿಯೆ, ಅಥವಾ ಥೈರಾಯಿಡ್ ಚೋದಕದ ಸ್ರಾವವನ್ನು ಕಡಿಮೆ ಮಾಡುವ ಔಷಧಿಗಳ ಬಳಕೆ. ಬಹಳಷ್ಟು ವೈದ್ಯರು ತಮ್ಮ ರೋಗಿಗಳಿಗಾಗಿ ವಿಕಿರಣಪಟು ಅಯೊಡೀನ್ ಬಳಕೆಯನ್ನು ಆರಿಸಿಕೊಳ್ಳುತ್ತಾರೆ. ಇದು ಥೈರಾಯಿಡ್ ಗ್ರಂಥಿಯ ಜೀವಕೋಶಗಳನ್ನು ನಾಶಗೊಳಿಸಿ ದೇಹದಲ್ಲಿ ಥೈರಾಯಿಡ್ ಚೋದಕದ ಉತ್ಪತ್ತಿಯನ್ನುಕಡಿಮೆ ಮಾಡು ತ್ತದೆ. ಆದರೂ ಈ ಚಿಕಿತ್ಸೆ ಪಡೆದ ೧೦೦ ರೋಗಿ ಗಳಲ್ಲಿ ೫೦ ಮಂದಿ ಥೈರಾಯಿಡ್ ಚೋದಕದ ಮಾತ್ರೆಗಳನ್ನು ಹೊರಗಿನಿಂದ ಸೇವಿಸಿ ತಮ್ಮ ರಕ್ತದಲ್ಲಿನ ಚೋದಕದ ಸಾಂದ್ರತೆಯನ್ನು ಸರಿತೂಗಿಸಬೇಕಾಗುತ್ತದೆ. ಬೇರೆ ಉಪಾಯ ಗಳಿಗೆ ಮಣಿಯದೆ ದೊಡ್ಡದಾಗಿ ಬೆಳೆದು ಕುತ್ತಿಗೆಯಲ್ಲಿ ಎದ್ದುಕಾಣುವ ಥೈರಾಯಿಡ್ ಅತಿಕ್ರಿಯೆಯಲ್ಲಿ ತೊಡಗಿದ 'ಗಲಗಂಡ' ವಿದ್ದರೆ ಅದಕ್ಕೆ ಶಸ್ತ್ರಕ್ರಿಯೆಯೇ ದಾರಿ. ಕೆಲವೊಮ್ಮೆ. ಥೈರಾಯಿಡ್ ಅತಿಕ್ರಿಯೆ ಇರುವ ಗರ್ಭಿಣಿ ಯರಲ್ಲೂ, ಮುಂದೆ ಗರ್ಭಧರಿಸಲಿಚ್ಛಿಸುವ ಥೈರಾಯಿಡ್ ಅತಿಕ್ರಿಯೆಯುಳ್ಳ ಹೆಂಗಸರಿಗೂ ಶಸ್ತ್ರಕ್ಕಿಯೆಯನ್ನೇ ಚಿಕಿತ್ಸೆಯಾಗಿ ಆರಿಸಿಕೊಳ್ಳು ತ್ತಾರೆ. ಶಸ್ತ್ರಕ್ರಿಯೆ ಸಾಮಾನ್ಯವಾಗಿ ನಿರುಪದ್ರವ ಕಾರಿ. ಆದರೆ ಶಸ್ತ್ರಕ್ರಿಯೆ ನಡೆಸುವಾಗ ಥೈರಾಯಿಡ್ ಗ್ರಂಥಿಯ ಪಕ್ಕದಲ್ಲಿರುವ ಚಿಕ್ಕ ಚಿಕ್ಕ

ಪ್ಯಾರಾಥೈರಾಯಿಡ್ ಗ್ರಂಥಿಗಳಿಗೋ, ಧ್ವನಿ ಪಟ್ಟಿ(ವೋಕಲ್ ಕಾರ್ಡ್ಸ್)ಗಳಿಗೋ ಪೆಟ್ಟಾಗುವ ಸಂಭವವಿದೆ. ಶಸ್ತ್ರಕ್ರಿಯೆಯಾದ ಮೇಲೂ ಹೊರಗಿನಿಂದ ಥೈರಾಯಿಡ್ ಚೋದಕದ ಮಾತ್ರೆಗಳನ್ನು ರಕ್ತದಲ್ಲಿ ಚೋದಕದ ಸಾಂದ್ರತೆಯನ್ನು ಸರಿದೂಗಿಸಲು ಸೇವಿಸಬೇಕಾಗುತ್ತದೆ.

ಗ್ರೇವ್ಸ್‌ನ ರೋಗ ಕೆಲವೊಮ್ಮೆ ತನ್ನಷ್ಟಕ್ಕೆ ತಾನೇ ಸರಿಹೋಗುತ್ತದೆ; ಆದರೆ ಎಷ್ಟೋ ... ಗಳಾದ ಮೇಲೆ ಮರುಕಳಿಸಬಹುದು. ... ಸಂದರ್ಭಗಳಲ್ಲಿ ವೈದ್ಯರು ವಿಕಿರಣ ಪಟು... ಯೊಡೀನ್ ಬಳಸುವುದಿಲ್ಲ. ಆಗ ಇತ... ಥೈರಾಯಿಡ್ ಚೋದಕದ ಸ್ರಾವವನ್ನು ಕಡಿಮೆ ಮಾಡುವ ಔಷಧಿಗಳಿಗೆ ಒಂದು ಅವಕಾ... ಕೊಟ್ಟು ನೋಡುತ್ತಾರೆ. ಈ ಚಿಕಿತ್ಸೆ ಪಡೆ... ನೂರಕ್ಕೆ ಚಿರಷ್ಟು ಜನರಲ್ಲಿ ಸ್ವಲ್ಪ ಜ್ವರವೋ, ಗಂಟುಗಳ ನೋವುಗಳೋ, ...ರ್ಮದ ಮೇಲೆ ದದ್ದುಗಳೋ, ವಾಕರಿಕೆ-...ಜೀರ್ಣತೆಗಳೋ ಕಂಡುಬರಬಹುದು.

ರಕ್ತಪರೀಕ್ಷೆ ಅನಿವಾರ್ಯ: ಥೈರಾಯಿಡ್ ಗ್ರಂಥಿಯ ರೋಗನಿದಾನದಲ್ಲಿ ರಕ್ತ ಪರೀಕ್ಷೆ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ವಯಸ್ಸು ನಲವತ್ತನ್ನು ದಾಟಿದ ಮೇಲೆ, ವಿಶೇಷತಃ ಸ್ತ್ರೀಯರಲ್ಲಿ ಹೆಚ್ಚು ಹೆಚ್ಚು ನಿತ್ರಾಣ ಕಂಡು ಬಂದರೆ ಅಂತಹವರನ್ನು ವೈದ್ಯರು ಥೈರಾಯಿಡ್‌ಗೆ ಸಂಬಂಧಿತವಾದ ರಕ್ತಪರೀಕ್ಷೆಗಳನ್ನು ಪ್ರಯೋಗಶಾಲೆಯಲ್ಲಿ ಮಾಡಿಸಿಕೊಂಡು ಬರಲು ಬರೆದುಕೊಡುತ್ತಾರೆ. ಈ ಥೈರಾಯಿಡ್ ಸಂಬಂಧಿತ ಪರೀಕ್ಷೆಗಳಲ್ಲೆಲ್ಲಾ ಥೈರಾಯಿಡ್ ಸ್ಟಿಮ್ಯುಲೇಟಿಂಗ್ ಚೋದಕದ ಸಾಂದ್ರತೆಯನ್ನು ರಕ್ತದಲ್ಲಿ ಅಳೆಯುವ ಪರೀಕ್ಷೆ ಬಹಳ ನಾಜೂಕಾದದ್ದು. ಥೈರಾಯಿಡ್ ಗ್ರಂಥಿಯ ಕ್ರಿಯೆ ಮಂದವಾದಾಗ ನಮ್ಮ ಪಿಟ್ಯುಟರಿ ಗ್ರಂಥಿ ಈ ಚೋದಕವನ್ನು ಹೆಚ್ಚು ಹೆಚ್ಚಾಗಿ ಸ್ರವಿಸಿದಾಗ, ಅದು ನಮ್ಮ ರಕ್ತದಲ್ಲಿ ಅಧಿಕ ಸಾಂದ್ರತೆಯಲ್ಲಿರುತ್ತದೆ. ಒಂದು ವೇಳೆ ಥೈರಾಯಿಡ್ ಅತಿಕ್ರಿಯೆಯಿಂದಿದ್ದರೆ ರಕ್ತದಲ್ಲಿ ಈ ಚೋದಕದ ಸಾಂದ್ರತೆ ಕಡಿಮೆ ಇರುತ್ತದೆ. ಥೈರಾಯಿಡ್ ರೋಗಗಳಲ್ಲಿ ಥೈರಾಯಿಡ್ ಸ್ಟಿಮ್ಯುಲೇಟಿಂಗ್ ಚೋದಕದ ಜೊತೆಗೆ ಥೈರಾಯಿಡ್ ಗ್ರಂಥಿಯೇ ಸ್ರವಿಸುವ ಥೈರಾಕ್ಸಿನ್ ಮತ್ತು ಟ್ರೈಅಯೊಡೋಥೈರೋನೀನ್ ಚೋದಕಗಳ ಸಾಂದ್ರತೆಯನ್ನೂ ರಕ್ತದಲ್ಲಿ ಮಾಪನ ಮಾಡಬೇಕೆಂದು ಡಾ.ರಾವ್ ಹೇಳುತ್ತಾರೆ. ಹಶಿಮೊಟೋ ರೋಗದಲ್ಲಿ ಕಂಡುಬರುವ ಥೈರಾಯಿಡ್ ವಿರುದ್ಧವಾದ ಪ್ರತಿಕಾಯಗಳನ್ನೂ ರಕ್ತಪರೀಕ್ಷೆಯಿಂದ ಕಂಡು ಹಿಡಿಯಬಹುದು. ನಿಮ್ಮ ಥೈರಾಯಿಡ್ ಗ್ರಂಥಿಯಲ್ಲಿ ಗಂಟುಗಳಿಲ್ಲದಿದ್ದರೆ ಥೈರಾಯಿಡ್ ರೋಗ ನಿದಾನಕ್ಕೆ ಇಷ್ಟು ಪರೀಕ್ಷೆಗಳು ಸಾಕಾಗಬಲ್ಲವು. ನಿಮಗೆ ಥೈರಾಯಿಡ್ ಗ್ರಂಥಿಯ ಗಂಟುಗಳಿದ್ದರೆ ಕ್ಯಾನ್ಸರ್ ರೋಗದ ಶಂಕೆಯನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ.

ಥೈರಾಯಿಡ್ ಕ್ಯಾನ್ಸರ್: ಥೈರಾಯಿಡ್ ಗ್ರಂಥಿಯ ಕ್ಯಾನ್ಸರ್ ಅಪರೂಪವಾದದ್ದು. ಭಾರತದ ಈ ಬೃಹತ್ ಜನಸಂಖ್ಯೆಯ ಮಧ್ಯದಲ್ಲಿ ವರ್ಷಪ್ರತಿ ೭೦೦೦ ಜನರಿಗೆ ಈ ರೋಗ ಬರುತ್ತದೆ. ಹಿಂದೆ ಯಾವ ಕಾರಣಕ್ಕಾದರೂ ತಲೆ ಅಥವಾ ಕುತ್ತಿಗೆಯ ಭಾಗಗಳಿಗೆ ವಿಕಿರಣ ಚಿಕಿತ್ಸೆಯಾಗಿದ್ದರೆ ಥೈರಾಯಿಡ್ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು. ಹೇಗಾದರೂ ಆಗಲಿ, ಥೈರಾಯಿಡ್ ಗ್ರಂಥಿಯಲ್ಲೇನಾದರೂ ಗಂಟುಗಳು ಕಂಡು ಬಂದರೆ ಅವು ಕ್ಯಾನ್ಸರ್ ಗಡ್ಡೆಗಳಲ್ಲವೆಂದು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಥೈರಾಯಿಡ್ ಗ್ರಂಥಿಯ ಸ್ಕ್ಯಾನಿಂಗ್, ಸೋನೋಗ್ರಾಮ್ ಮಾಡಿಸಿಕೊಳ್ಳಬೇಕಾಗಬಹುದು.

ಕೆಲವು ವೇಳೆ ಪ್ರತ್ಯಕ್ಷ ಪರೀಕ್ಷೆಗಾಗಿ ಒಂದು ಚಿಕ್ಕ ಥೈರಾಯಿಡ್ ಗ್ರಂಥಿಯ ತುಣುಕನ್ನು ಸೂಜಿಯ ಮೂಲಕ ತೆಗೆದು, ಪ್ರಯೋಗಶಾಲೆಯಲ್ಲಿ ಪದರ ಪದರವಾಗಿ ಕತ್ತರಿಸಿ, ಬಣ್ಣಕಟ್ಟಿ ಸೂಕ್ಷ್ಮದರ್ಶಕದ ಅಡಿಯಲ್ಲಿ ಪರೀಕ್ಷೆ ಮಾಡಬೇಕಾಗಿಯೂ ಬರಬಹುದು. ಇದಕ್ಕೆ ''ಬಯಾಪ್ಸಿ' ಅಥವಾ ಜೀವುಂಡಿಗೆ ಪರೀಕ್ಷೆಎಂದು ಕರೆಯುತ್ತಾರೆ.

ಹೀಗೆ ಥೈರಾಯಿಡ್ ಗ್ರಂಥಿಯ ಕ್ರಿಯೆಯಲ್ಲಿ ಏರುಪೇರಾಗಿ ನ್ಯೂನತೆಯೋ ಅತಿರೇಕವೋ ಉಂಟಾದಾಗ ಅವುಗಳ ಅದರ ಲಕ್ಷಣವಾದ ಜುಗುಪ್ಸೆ, ಆತಂಕಗಳು ಕೆಲವರ ಜೀವನವನ್ನೇ ದುಸ್ಸಹವನ್ನಾಗಿ ಮಾಡಬಹುದು. ವೈದ್ಯರ ಪರೀಕ್ಷೆ ಮತ್ತು ರಕ್ತದಲ್ಲಿ ಚೋದಕಗಳನ್ನು ಮಾಪನ ಮಾಡುವುದರಿಂದಲೇ ಥೈರಾಯಿಡ್ ಸಂಬಂಧಿತ ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚುವುದು ಸಾಧ್ಯ. ಪತ್ತೆ ಹಚ್ಚಿದ ಮೇಲೆ ಸರಿಯಾದ ಚಿಕಿತ್ಸೆಯಿಂದ ಎಷ್ಟೋ ಹಾಯೆನಿಸುತ್ತದೆ. ನಮ್ಮ ದೇಶದಲ್ಲಂತೂ ಥೈರಾಯಿಡ್ ಸಂಬಂಧಿತ ರೋಗಗಳು ಸಾಮಾನ್ಯವಾದವು. ಆದರೂ ಮೊದಮೊದಲು ತೋರಿಬರುವ ಚಿಹ್ನೆಗಳನ್ನು ಜನರು ಅಲಕ್ಷ್ಯ ಮಾಡಿ ಮುಂದೆ ಬಹಳ ಬವಣೆ ಪಡುತ್ತಾರೆ.

ಕೆಲವೊಮ್ಮೆ ನೀವೇ ನಿಮ್ಮ ವೈದ್ಯರಿಗೆ ಜ್ಞಾಪಿಸಬೇಕಾದೀತು !

ಥೈರಾಯಿಡ್ ಗ್ರಂಥಿಯ ರೋಗಗಳು ಸಾಮಾನ್ಯವಾದವು. ಸರಿಯಾಗಿ ನಿದಾನವಾದ ಮೇಲೆ ಅವುಗಳ ಚಿಕಿತ್ಸೆ ಸುಲಭ. ಆದರೂ ಥೈರಾಯಿಡ್ ತೊಂದರೆ ಇರುವ ನೂರು ಜನರಲ್ಲಿ ಐವತ್ತು ಮಂದಿಗೆ ಮಾತ್ರ ಸಕಾಲದಲ್ಲಿ ನಿದಾನವಾಗಿ ಸರಿಯಾದ ಚಿಕಿತ್ಸೆಯಾಗುತ್ತದೆ. ಮಿಕ್ಕವರಿಗೆ ತಮಗೆ ಥೈರಾಯಿಡ್ ಸಂಬಂಧಿತ ರೋಗವಿರುವುದೇ ತಿಳಿವಿಗೆ ಬಂದಿರುವುದಿಲ್ಲ. ಸಾಮಾನ್ಯವಾಗಿ ಬೇರೆ ರೋಗಗಳಲ್ಲಿ ತೋರಿಬರುವ ಲಕ್ಷಣಗಳು ಥೈರಾಯಿಡ್ ರೋಗಗಳಲ್ಲೂ ಕಂಡು ಬರುತ್ತವೆ. ಹೀಗಾಗಿ ವೈದ್ಯರೂ ಕೆಲವೊಮ್ಮೆ ನಿದಾನ ಮಾಡುವಾಗ ದಾರಿತಪ್ಪಿ ನಿಜದಲ್ಲಿ ರೋಗ ಥೈರಾಯಿಡ್‌ನಲ್ಲಿದ್ದರೂ ಅದನ್ನು ಗಣಿಸದೆ ಬೇರೆ ರೋಗಗಳಿಗೆ ಚಿಕಿತ್ಸೆ ಕೊಡುತ್ತಾ ಹೋಗುತ್ತಾರೆ. ಇದಕ್ಕೆ ಈ ಕೆಳಗಿನ ದೃಷ್ಟಾಂತವೇ ಸಾಕ್ಷಿ:

ಗೇಲ್ ಡೇವರ್ಸ್ ವಿಶ್ವವಿಖ್ಯಾತ ಓಟಗಾರ್ತಿ; ಒಲಂಪಿಕ್ ಸ್ವರ್ಣ ಪದಕ ವಿಜೇತೆ. ಆಕೆಯನ್ನು ೧೯೮೮ ರಿಂದ ಅನಾರೋಗ್ಯ ಕಾಡಿಸಹತ್ತಿತು. ವೈದ್ಯರು ಏನೇನೋ ಚಿಕಿತ್ಸೆ ಮಾಡಿದರೂ ಸರಿಹೋಗಲಿಲ್ಲ. ಅವಳ ತೂಕ ೩೮ ಪೌಂಡ್‌ಗಳಿಗೆ ಇಳಿದು, ಹೃದಯದ ಬಡಿತ ಹೆಚ್ಚಾಗಿ, ದಣಿವು ಅಧಿಕವಾಗಿ, ಕೂದಲು ಉದುರುವುದಕ್ಕಾರಂಭಿಸಿದ ಮೇಲೆಯೇ ಅವರ ಗಮನ ಥೈರಾಯಿಡ್ ಕಡೆಗೆ ಹರಿದುದು. ಆಕೆಗೆ ಥೈರಾಯಿಡ್ ಅತಿಕ್ರಿಯಾ ರೋಗ ಇರುವುದು ದೃಢವಾಯಿತು. ಆಮೇಲೆಯೇ ಆಕೆಗೆ ಸಮಂಜಸವಾದ ಚಿಕಿತ್ಸೆ ದೊರಕಿದ್ದು! ಇಂತಹ ಸಂದರ್ಭಗಳಲ್ಲಿ ನೀವೇ ನಿಮ್ಮ ವೈದ್ಯರ ಗಮನವನ್ನು ಥೈರಾಯಿಡ್ ಗ್ರಂಥಿಯ ಕಡೆಗೆ ಹರಿಸಬೇಕಾಗಬಹುದು.

ಪುಸ್ತಕ ಪರಿಚಯ : ನಿಮ್ಮ ಮಗು

ಲೇಖಕ-ಪ್ರಕಾಶಕರು : ಡಾ. ಯು. ಜಿ. ಶೆಣೈ, ಮಮತ ಕಿಡ್ ಕೇರ್ ಕ್ಲಿನಿಕ್, ೧೦೮ ಒಂಬತ್ತನೆಯ ಮುಖ್ಯ ರಸ್ತೆ, ಮೂರನೆಯ ಅಡ್ಡರಸ್ತೆ, ಸರಸ್ವತೀಪುರ, ಮೈಸೂರು ೫೭೦ ೦೦೯ ಪ್ರಕಟಣೆ: ೨೦೦೧, ಪುಟಗಳು: ೧೭೭, ಬೆಲೆ : ರೂ ೮೦

''ನಿಸರ್ಗವನ್ನು ವಿಜ್ಞಾನಿ ಅಧ್ಯಯನಗೈಯ್ಯುವುದು ಅದು ಸುಂದರವಾಗಿರುವುದರಿಂದ,'' ಎಂದಿದ್ದಾರೆ ಗಣಿತ-ಭೌತವಿಜ್ಞಾನಿ ಆನ್ರೀ ಪ್ವಾನ್‌ಕ್ವಾರೇ (೧೮೫೪-೧೯೧೨). ಇದರ ಪ್ರತ್ಯಕ್ಷ ಅನುಭವ ನಾನು ಗಳಿಸಿದ್ದು ನಮ್ಮ ಮನೆಯಲ್ಲೇ ಮೊಮ್ಮಗಳು ಅಕ್ಷರಿ (೧೯೮೮) ಬೆಳೆದು ಬೆಳಗಿ ಅರಳಿ ಪರಿಮಳಿಸುವಾಗ . ಕುವೆಂಪು (೧೯೦೪-೯೪) ಕವನ ''ಕೂಸಿನ ಕನಸು'' ಆಗ ನನಗೆ ನೀಡಿದ ಅರ್ಥ ಮತ್ತು ಆನಂದ ಉಪಮಾತೀತ: ''ಕಲ್ಪಾಂತರಗಳ ಸಂಕ್ಷಿಪ್ತಾಕೃತಿ, ಶತಮಾನಂಗಳ ಸಂಗ್ರಹ ಸಂಸ್ಕೃತಿ.''

ಯಾವ ನಿಸರ್ಗ ಇಂಥ ಸುಂದರ ಜೀವಂತ ಕಂದಗಳನ್ನು ಹಡೆಯುತ್ತಾಳೋ ಅವಳೇ ರುದ್ರಭಯಂಕರಿಯಾಗಿ ಇವುಗಳ ಮೇಲೆ ಅಸಂಖ್ಯ, ಕೆಲವು ವೇಳೆ ಚಿಕಿತ್ಸಾತೀತ, ರೋಗ ರುಜಿನಗಳನ್ನು ಕೆಡೆಯುವುದೇಕೆ ? ಈ ಮೂಲಭೂತ ಸಮಸ್ಯೆ ಕುರಿತಂತೆ ನಮ್ಮ ಪ್ರತಿಕ್ರಿಯೆಗಳು, ವ್ಯಾಪಕವಾಗಿ, ಮೂರು ವರ್ಗಗಳಲ್ಲಿ ಅಳವಡುತ್ತವೆ :

೧. ವಿಧಿಲೀಲೆ. ಈ ನಿಲವು ಸಂದೇಹಾತೀತವಾಗಿ ಹೊಣೆಗೇಡಿತನದ್ದು. ಇದರ ಪ್ರಕಟಿತ ರೂಪವಾಗಿ ಮುಗ್ಧ ಮಂದಿ ಯಂತ್ರ, ಮಂತ್ರ, ಭಸ್ಮ, ತಾಯಿತಿ, ಹರಕೆ ಮುಂತಾದ ಅವೈಜ್ಞಾನಿಕ ವಿಧಾನಗಳಿಗೆ ಶರಣಾಗುವುದನ್ನು ಕಾಣುತ್ತೇವೆ. ಮೂರ್ತ ವ್ಯಾಧಿಗೆ ಅಮೂರ್ತ ವಿಹಾರವೆಂದೂ ಶಮನ ಒದಗಿಸದು. ಈ ಅರಿವು ಜನರಿಗೆ, ಮುಖ್ಯವಾಗಿ ಎಳೆ ಮಕ್ಕಳ ತಂದೆ ತಾಯಿಯರಿಗೆ, ಬರುವುದು ಅಗತ್ಯ. ''ನಿಮ್ಮ ಮಗು'' (ಮಕ್ಕಳ ಆರೋಗ್ಯದ ಕುರಿತು ಸಮಗ್ರ ಮಾಹಿತಿ) ಪುಸ್ತಕ ಈ ದಿಶೆಯಲ್ಲಿ ಒಂದು ಉಪಯುಕ್ತ ಒಡನಾಡಿ.

೨. ಸ್ವಂತ ಪರಿಹಾರೋಪಾಯ ಅನ್ವೇಷಣೆ. ಒಂದು ಹಂತದವರೆಗೆ ಇದು ಸರಿ. ಮಗು ಸೀನಿದ್ದಕ್ಕೆ, ಆಕಳಿಸಿದ್ದಕ್ಕೆ, ಅದರ ಮೈ ತುಸು ಬೆಚ್ಚಗಾದದ್ದಕ್ಕೆ ಎಲ್ಲ ಗಾಬರಿಗೊಳ್ಳಬೇಕಾಗಿಲ್ಲ. ಮಗುವಿನ ಯಾವುದೇ ಅಸಹಜ ವರ್ತನೆ ಅಥವಾ ಸ್ಥಿತಿಯನ್ನು ಗಮನಿಸಬೇಕು, ಅನುಭವಜನ್ಯ ನಿರುಪದ್ರವಿ ಶಾಮಕವನ್ನು ಬಳಸಬೇಕು, ಮತ್ತು ಮಗುವಿಗೆ ನೆಮ್ಮದಿ ಒದಗಿಸಬೇಕು. ವೈದ್ಯಕೀಯ ಪರಿಭಾಷೆಯಲ್ಲಿ ಒಂದು ಮಾತಿದೆ : ಸಾಮಾನ್ಯ ನೆಗಡಿಯು ಚಿಕಿತ್ಸೆ ನೀಡಿದರೆ ಒಂದುವಾರದಲ್ಲಿಯೂ ನೀಡದಿದ್ದರೆ ಏಳು ದಿವಸಗಳಲ್ಲಿಯೂ ಉಪಶಮನವಾಗುವುದು ! ಅಂದರೆ, ಕಂದನಿಗೆ ಜಡ್ಡಾಗಿದೆ ಎಂಬ ಲಕ್ಷಣ ಪ್ರಕಟವಾಗುವಾಗಲೇ ಹಿರಿಯರು ಸಾಮಾನ್ಯ ಪ್ರಜ್ಞೆ ಕಳೆದುಕೊಂಡವರಂತೆ ವರ್ತಿಸತಕ್ಕದ್ದಲ್ಲ.

೩. ವೈದ್ಯರ ಸಂಪರ್ಕ. ಎರಡನೇ ನಿಲವು ಪರಿಣಾಮಕಾರಿ ಆಗದಾಗ ವೈದ್ಯರನ್ನು ಅವಶ್ಯ ಸಂಪರ್ಕಿಸಬೇಕು. ಈ ಸೀಮಾರೇಖೆ ಎಳೆಯುವುದು ಹೇಗೆ ? ತರ್ಕದಲ್ಲಿ ಈ ಪ್ರಶ್ನೆ ಸರಿ. ವಾಸ್ತವದಲ್ಲಿ ನೇರವಾಗಿ ಬಾಳುವ ಹೆತ್ತವರಿಗೆ ಪರಿಸ್ಥಿತಿಯೇ ಮುಂದಿನ ನಡೆಯನ್ನು ಸೂಚಿಸುತ್ತದೆ. ''ನಿಮ್ಮ ಮಗು'' ಕೃತಿ ಈ ಸೂಚನೆಯನ್ನು ತಿಳಿಗನ್ನಡದಲ್ಲಿ ಆತ್ಮೀಯವಾಗಿ ನೀಡುತ್ತದೆ.

ಜನಾರೋಗ್ಯದ, ಅಲ್ಲಿಯೂ ಮಕ್ಕಳ ಆರೋಗ್ಯದ, ಬಗ್ಗೆ ಅಪಾರ ಕಾಳಜಿ ಇರುವ ಪ್ರಸಕ್ತ ಲೇಖಕರು ತಮ್ಮ ಅನುಭವದ

ಮೂಸೆಯಿಂದ ಹೆಕ್ಕಿ ಬರೆದಿರುವ ೩೨ ಲೇಖನಗಳ ಸಮುಚ್ಚಯ ''ನಿಮ್ಮ ಮಗು.'' ಮೈಸೂರಿನ ಜನಪ್ರಿಯ ದೈನಿಕ ''ಆಂದೋಲನ''ದಲ್ಲಿ ವಾರವಾರ ಪ್ರಕಟವಾಗುತ್ತಿದ್ದ ಈ ಬರೆಹಗಳು ಈಗ ಒಂದು ಪುಸ್ತಕವಾಗಿ ಹೊರಬಂದಿರುವುದು ಅತ್ಯಂತ ಉಚಿತವಾಗಿದೆ.

ಅಧ್ಯಾಯ - ಶೀರ್ಷಿಕೆಗಳನ್ನು ಓದುವುದೇ ಒಂದು ಶಿಕ್ಷಣ : ಆರೋಗ್ಯವಂತ ತಾಯಿ ಆರೋಗ್ಯವಂತ ಮಗು, ನವಜಾತ ಶಿಶುವಿನ ಆರೈಕೆ, ಅಪಕ್ವಶಿಶು ಹಾಗೂ ಕಡಿಮೆ ತೂಕದ ಶಿಶುಗಳು ಮುಂತಾಗಿ ನಿರ್ದಿಷ್ಟ ಆಲೇಖ್ಯಾನುಸಾರ ಸಾಗಿ ಮಕ್ಕಳಿಗೆ ಬರುವ ವಿವಿಧ ರೋಗಗಳನ್ನು ಚರ್ಚಿಸಿ, ಯೋಗ್ಯ ಚಿಕಿತ್ಸೆಗಳನ್ನು ಸೂಚಿಸಲಾಗಿದೆ. ''ಮೊಲೆಹಾಲು ಮಗುವಿನ ಬೆಳವಣಿಗೆಗೆ ಉತ್ತಮ ಬಂಡವಾಳ,'' ''ಮಕ್ಕಳಿಗೆ ಚುಚ್ಚುಮದ್ದು ನೀಡಿಕೆ ಏಕೆ ? ಯಾವಾಗ ?'' ''ಮಗುವಿನ ಬೆಳವಣಿಗೆ,'' ''ತಾರುಣ್ಯದ ಬೆಳವಣಿಗೆ'' ಮುಂತಾದ ಅಧ್ಯಾಯಗಳು ಹಿರಿಯರ ಕಣ್ತೆರೆಸುವ ಬರೆಹಗಳು. ಮೊಲೆಹಾಲು ಕುರಿತ ವಿವರಣೆಗಳನ್ನು ಓದುತ್ತಿದ್ದಾಗ ಸ್ಫುರಿಸಿದ ಕಗ್ಗ:

ಬಳಸೆಲೊ ನಿಸರ್ಗವಿತ್ತಿಹ ವರವ : ಮೊಲೆಹಾಲು ;
ಹಳಸಲಾಹಾರವನ್ನೂಡದಿರು ಕಂದನಿಗೆ
ತಲೆಮೊರೆಯ ಬರೆವ ತಾಯಿಯ ಸ್ತನ್ಯ. ಡಬ್ಬಿಯಲಿ
ಕೊಳೆಯುಂಟು ಸ್ತನದಲ್ಲಿ ಕೆಳೆಯುಂಟು ಅತ್ರಿಸೂನು

''ಮಕ್ಕಳಲ್ಲಿ ಮನೋಸಾಮಾಜಿಕ ತೊಂದರೆಗಳು'' ಅಧ್ಯಾಯವನ್ನು ಒಂದು ಘಟನೆಯ ಸುತ್ತ ಹೆಣೆದಿದ್ದಾರೆ. ಅದೇ ರೀತಿ, ''ಮಕ್ಕಳಿಗೆ ಚುಚ್ಚುಮದ್ದು ನೀಡಿಕೆ'' ಅಧ್ಯಾಯ ಕೂಡ. ಈ ಶೈಲಿ ಅಧಿಕ ಪರಿಣಾಮಕಾರಿ : ವಾಸ್ತವ ಘಟನೆ ಅರುಹುವ ಪಾಠ. ರೀಡರ್ಸ್ ಡೈಜೆಸ್ಟ್‌ನಲ್ಲಿ ಹಿಂದೆ ಬರುತ್ತಿದ್ದ "I am John's heart" (ನಾನು ಕೃಷ್ಣನ ಗುಂಡಿಗೆ) ಶೈಲಿಯ ಲೇಖನಗಳನ್ನು ಡಾ. ಶೆಣೈಯವರು (ಜನನ ೧೯೬೦- ಇವರಿನ್ನೂ ತರುಣರು!) ಸದಾ ಬರೆಯುತ್ತಾ ಜನರಿಗೆ ಮಾಹಿತಿಯನ್ನು ''ಕಾಂತಾಸಮ್ಮಿತ'' ಮಾದರಿಯಲ್ಲಿ ಒದಗಿಸ ಬೇಕು.

ಬುದ್ಧಿಮಾಂದ್ಯತೆ (ಬುದ್ಧಿ ಮಾಂದ್ಯ), ವೈಶಿಷ್ಟ್ಯತೆ (ವೈಶಿಷ್ಟ್ಯ), ಅನುವಂಶಿತೆ (ಆನುವಂಶಿಕತೆ), ಪೌಷ್ಟಿಕತೆ (ಪೌಷ್ಟಿಕತೆ) ಮುಂತಾದ ಅಪಪ್ರಯೋಗಗಳನ್ನು ನಿವಾರಿಸಬೇಕು; ಅನುಬಂಧದಲ್ಲಿ ವಿಷಯ- ಪುಟಸೂಚಿಯನ್ನು ಕನ್ನಡ ವರ್ಣಮಾಲೆಯ ಅನುಸಾರ ಇಂಗ್ಲಿಷ್ ಸಮಾನಾರ್ಥಕಗಳ ಸಹಿತ ಕೊಡಬೇಕು; ಮತ್ತು ತಾಂತ್ರಿಕ ಪದಗಳ ವಿವರಣೆಯನ್ನು ಯುಕ್ತ ಸನ್ನಿವೇಶದಲ್ಲಿ ಬರೆಯಬೇಕು.

ನಿಜ, ''ಮಗು ಒಂದು ತೋಟದ ಹೂ ಇದ್ದಂತೆ. ಅದನ್ನು ರಕ್ಷಿಸುವ ಜವಾಬ್ದಾರಿ ತಂದೆ-ತಾಯಂದಿರದು. ಅವರನ್ನು ಪ್ರಬೋಧಿಸುವುದೇ ಈ ಲೇಖನಮಾಲೆಯ ಉದ್ದೇಶ'' (ಪುಟ ೧೧ರಲ್ಲಿ ಲೇಖಕರ ಮಾತು). ಅವರ ಉದ್ದೇಶ ಸಫಲವಾಗಿದೆ.

ಜಿ.ಟಿ.ನಾರಾಯಣರಾವ್
೮, ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

'ಪಿಂಕಿಯ ಪ್ರಪಂಚ' ಮತ್ತು 'ಬಾ ಕಂದ ಹಾಡೋಣ' : ಲೇಖಕಿ: ಲೀಲಾ ಮಣ್ಣಾಲ; ಮೊದಲ ಮುದ್ರಣ : ೨೦೦೦ ; ಪುಟಗಳು ಅನುಕ್ರಮವಾಗಿ ೪೮ ಮತ್ತು ೫೬, ಬೆಲೆ : ತಲಾ ರೂ. ೨೦, ಪ್ರಕಾಶಕರು : ನಿಸರ್ಗ ಪ್ರಕಾಶನ,೮೬, ಗುರುರಾಜ ಲೇಔಟ್, ಸಿದ್ಧಾರ್ಥನಗರ, ಮೈಸೂರು -೫೭೦ ೦೧೧.

ಹಿಂದೆ, ಮಕ್ಕಳ ಕತೆ ಪುಸ್ತಕಗಳು ಸಾಕಷ್ಟು ಮುದ್ರಣಗೊಂಡಿರಲಿಲ್ಲ ಮತ್ತು ಕೊಳ್ಳುವವರ ಸಂಖ್ಯೆಯೂ ಕಡಿಮೆ ಇತ್ತು. ಮನೆಯಲ್ಲಿ ಅಜ್ಜ ಅಜ್ಜಿ ಸಾಕಷ್ಟು ಪುರಾಣ ಕಥೆಗಳನ್ನು ಹೇಳುತ್ತಿದ್ದರು. ಮಕ್ಕಳೂ ಆಸಕ್ತಿಯಿಂದ ಕೇಳುತ್ತಿದ್ದರು. ಈಗ ಮಕ್ಕಳಿಗೆ ಬಹಳ ಬೇಗ ಅಕ್ಷರಾಭ್ಯಾಸ ಮಾಡಿಸುವುದರಿಂದ ಅವರೇ ಕತೆ ಪುಸ್ತಕಗಳನ್ನು ಓದುತ್ತಾರೆ. ಕತೆ ಹೇಳು ಎಂದು ಹಿರಿಯರನ್ನು ಪೀಡಿಸುವುದಿಲ್ಲ.

'ಪಿಂಕಿಯ ಪ್ರಪಂಚ' ಎಂಬ ಈ ಪುಸ್ತಕದಲ್ಲಿ ೧೦ ಪುಟ್ಟ ಪುಟ್ಟ ಕತೆಗಳಿವೆ. ಸಣ್ಣ ಮಕ್ಕಳಿಗಾಗಿ ರಚಿತವಾದವು. ಪ್ರಾರಂಭದ ಕತೆಯಿಂದ ಮುಂದಿನ ಕತೆಗಳಿಗೆ ಸಂಪರ್ಕವಿದೆ. ಎಲ್ಲ ಕತೆಗಳೂ ಪಿಂಕಿಯ ಸುತ್ತ ಬರುತ್ತವೆ. ಪ್ರಾಣಿ ಪ್ರಿಯಳಾದ ಪಿಂಕಿ ತನ್ನ ಮನೆಗೆ ಎಲ್ಲಿಂದಲೋ ವಲಸೆ ಬಂದ ಬೆಕ್ಕಿಗೆ ಹಾಲು ಹಾಕಿ ಮುದ್ದಿಸುತ್ತಾಳೆ. ಅದನ್ನು ನೋಡಿದ ಪಿಂಕಿಯ ಅಮ್ಮ ಬೆಕ್ಕನ್ನು ಹೊರಗೆ ಬಿಟ್ಟು ಬಿಡಲು ಹೇಳಿದಾಗ ಪಿಂಕಿ ಒಲ್ಲದ ಮನದಿಂದ ಹೊರ ಬಿಡುತ್ತಾಳೆ. ಸ್ವಲ್ಪ ಹೊತ್ತಿನಲ್ಲೇ ಆ ಬೆಕ್ಕು ಪುನಃ ಮನೆಯೊಳಗೆ ಬಂದದ್ದು ಕಂಡ ಪಿಂಕಿ ಸಂಭ್ರಮ ಪಡುತ್ತಾಳೆ. ಅದನ್ನು ಸಾಕಲು ಅಮ್ಮನ ಒಪ್ಪಿಗೆಯೂ ಸಿಕ್ಕಿ ಬೆಕ್ಕಿಗೆ ಪಿಂಟೂ ಎಂದು ಹೆಸರಿಡುತ್ತಾಳೆ. ಪ್ರಾಣಿಗಳನ್ನು ನಾವು ಪ್ರೀತಿಯಿಂದ ಸಾಕಿದರೆ ಅವು ನಮ್ಮನ್ನು ಬಿಟ್ಟು ಹೋಗುವುದಿಲ್ಲ ಎಂಬುದು 'ಮಿಂಟೂವಿನ ಆಗಮನ' ಕತೆಯಲ್ಲಿ ಕಾಣಬರುತ್ತದೆ. 'ಪಿಂಕಿ ಸುಳ್ಳು ಹೇಳುವುದಿಲ್ಲ' ಕತೆ ಮಕ್ಕಳು ಸುಳ್ಳು ಹೇಳಬಾರದೆಂಬುದನ್ನು ಮನವರಿಕೆ ಮಾಡುತ್ತದೆ. 'ಪಿಂಕಿಯ ಗಾಳಿ ಪಟ' ಮತ್ತು 'ಮರವೇರಿದ ಮಿಂಟೂ' ಕತೆಗಳು ಮಕ್ಕಳ ಮನರಂಜಿಸುವಲ್ಲಿ ಯಶಸ್ವಿಯಾಗಿವೆ.

ಪಿಂಕಿ ಅವಳ ಸ್ನೇಹಿತೆ ಮನೆಯಿಂದ ನಾಯಿ ಮರಿಯನ್ನು ತಂದು ಸಾಕುತ್ತಾಳೆ. ತನ್ನ ಒಡತಿಯ ಪ್ರೀತಿಯಲ್ಲಿ ಪಾಲು ಪಡೆಯಲು ಬಂದ ನಾಯಿ ಮರಿ ಮೋತಿಯ ಬಗ್ಗೆ ಪಿಂಟೂವಿಗೆ ಅಸಮಾಧಾನ, ಮೋತಿಗೆ ಪಿಂಟೂವನ್ನು ಕಂಡರೆ ಸಿಟ್ಟು. ಪಿಂಕಿ ಎರಡು ಪ್ರಾಣಿಗಳನ್ನೂ ಮುದ್ದಿಸುತ್ತ ಇನ್ನು ಮುಂದೆ ನೀವಿಬ್ಬರೂ ಒಳ್ಳೆಯ ಸ್ನೇಹಿತರಾಗಿರಬೇಕೆಂದು ಬುದ್ಧಿ ಹೇಳುವುದೇ 'ಮೋತಿ ಮನೆಗೆ ಬಂತು' ಕತೆ.

ಅಪರಿಚಿತರು ಬಂದು 'ನಿನ್ನ ಅಪ್ಪನಿಗೆ ಅಪಘಾತವಾಗಿದೆ, ನೀನು ನನ್ನ ಜೊತೆ ಬಾ' ಎಂದು ಕರೆದೊಡನೆ ಮಕ್ಕಳು ಅವರೊಂದಿಗೆ ಹೋಗಬಾರದು ಎಂಬುದನ್ನು ಲೇಖಕಿ ಪರಿಣಾಮಕಾರಿಯಾಗಿ ಮಕ್ಕಳ ಮನಮುಟ್ಟುವಂತೆ 'ದಾಂಡಿಗನ ಸೋಲು' ಕತೆಯಲ್ಲಿ ವಿವರಿಸಿದ್ದಾರೆ.

'ಮಿಂಟೂವಿನ ಜಂಬೂ ಸವಾರಿ' ಕತೆ ಏನೂ ಸ್ವಾರಸ್ಯವಿಲ್ಲದಿದ್ದರೂ ಮಕ್ಕಳ ಮನಕ್ಕೆ ಮುದ ನೀಡುತ್ತದೆ. 'ಪಿಂಕಿಯು ಬಂದಳು ಅಜ್ಜನ ಮನೆಗೆ' ಕತೆಯಲ್ಲಿ ಅಸಹಜತೆ ಇದೆ. ಇದರ ಮುಂದುವರಿದ ಭಾಗದಂತೇ 'ಅಂಗಳಕ್ಕೆ ಬಂದ ಚಿರತೆ' ಕತೆ ನಾಟಕೀಯವಾಗಿದೆ.

'ಪಿಂಕಿ ಮತ್ತು ಮೋತಿಯ ಸಾಹಸ' ಎಂಬ ಕೊನೆಯ ಕತೆಯಲ್ಲಿ ಪಿಂಕಿ ತನ್ನ ನಾಯಿ ಮೋತಿಯ ಸಹಾಯದಿಂದ ನೀರಿನ ತೊಟ್ಟಿಗೆ ಬಿದ್ದ ಬಾಲಕನನ್ನು ರಕ್ಷಿಸಿ, ಅವನಿಗೆ ಪ್ರಥಮ ಚಿಕಿತ್ಸೆ ನೀಡುತ್ತಾಳೆ. ಇದು ಮಕ್ಕಳ ಮನೋವಿಕಾಸಕ್ಕೆ ಮುದ ನೀಡುವ ಕತೆ.

ಎಲ್ಲ ಕತೆಗಳಿಗೂ ಹದಿನಾರರ ಬಾಲಕಿ ವರ್ಷಾ ಸಿ.ಆರ್. ಸುಂದರವಾದ ಚಿತ್ರವನ್ನು ಕುಂಚಿಸಿದ್ದಾಳೆ. ಇವಳು ಈ ಪುಸ್ತಕ ಬರೆದ ಲೇಖಕಿಯ ಮಗಳು. ಕತೆಗಳಲ್ಲಿಯ ಚಿತ್ರ ನೋಡುತ್ತ ಮಕ್ಕಳು ಆಹ್ಲಾದದಿಂದ ಈ ಕತೆಗಳನ್ನು ಓದಬಹುದು.

'ಬಾ ಕಂದ ಹಾಡೋಣ' ಈ ಪುಟ್ಟ ಪುಸ್ತಕದಲ್ಲಿ ಪುಟಾಣಿ ಮಕ್ಕಳಿಗಾಗಿ ರಚಿಸಿದ ೪೦ ಹಾಡುಗಳಿವೆ. ಅವು ಪರಿಸರ, ನೀತಿಯುಕ್ತ ತಮಾಷೆ, ಪ್ರಾಸಬದ್ಧ, ಇತ್ಯಾದಿಗಳಿಗೆ ಸಂಬಂಧಪಟ್ಟ ಕವನಗಳು. ನರ್ಸರಿಯ ಪುಟ್ಟ ಮಕ್ಕಳು ನಲಿಯುತ್ತ ಹಾಡುವಂಥ ಕವನಗಳು.

ಮೊದಲಿಗೆ 'ಪ್ರಾರ್ಥನೆ' ಕವನ ಅರ್ಥವತ್ತಾಗಿದೆ. ಉದಾಹರಣೆಗೆ ಆ ಕವನದ ಎರಡನೇ ಸಾಲು ಹೀಗಿವೆ;

ನಡೆನುಡಿ ಕಲಿಸಿ
ಸದ್ಬುದ್ಧಿಯ ಬೆಳೆಸಿ
ನಮ್ಮನು ನಿ ಹರಸು

ತಾಯಿಯ ಮನ ಎಂಥದು ಎಂಬುದನ್ನು 'ತಾಯಿ ದೇವರು' ಕವನದಲ್ಲಿ ಬಿಂಬಿಸಿದ್ದಾರೆ. 'ಹತ್ತರಿಂದ ನೂರು' ಕವನ ಬಾಲಿಶವಾಗಿದ್ದು, ಪ್ರಾಸಬದ್ಧವಾಗಿದೆ. ಆ ಕವನದ ಮೊದಲೆರಡು ಸಾಲು ಹೀಗಿವೆ:

ಮೊದಲನೆಯವನು ಹತ್ತು ಕೆ.ಜಿ
ಎರಡನೆಯವನು ಇಪ್ಪತ್ತು ಕೆ.ಜಿ

ಹೀಗೆ ಮುಂದುವರಿಯುತ್ತ ಕೊನೆಗೆ ಹತ್ತನೆಯವನು ನೂರು ಕೆ.ಜಿ, ನಾನು ನೀನೂ ಎಲ್.ಕೆ.ಜಿ ಎಂದು ಕೊನೆಗೊಳ್ಳುತ್ತದೆ.

ಸುಂದರ ಚಿತ್ರ ಸಹಿತ ಹೆಚ್ಚಿನ ಕವನಗಳಿವೆ. ಈ ಚಿತ್ರಗಳನ್ನು ಕುಮಾರಿ ವರ್ಷಾ ಅರ್ಥವತ್ತಾಗಿ ಬಿಡಿಸಿದ್ದಾಳೆ. ಇವು ಮಕ್ಕಳಿಗೆ ಹರ್ಷ ಕೊಡುತ್ತವೆ. ಈ ಪದ್ಯಗಳನ್ನು ಪುಟ್ಟ ಮಕ್ಕಳು ಕುಲು ಕುಲು ನಗುತ್ತ ಕುಣಿಯುತ್ತ ಹಾಡಿ ನಲಿಯಬಹುದು.

ರುಕ್ಮಿಣಿ ಮಾಲಾ
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ, ಮೈಸೂರು-೫೭೦ ೦೦೯

ಓದುಗರ ಅನಿಸಿಕೆ

'ಪುಸ್ತಕ ಪ್ರಪಂಚ' ಮಾಸಿಕದ ಸಂಪಾದಕರಿಗೆ

ಮಾನ್ಯರೆ,

ಅನಂತ ನಮಸ್ಕಾರಗಳು. ತಾವು ವಿಶ್ವಾಸವಿಟ್ಟು ಕಳಿಸಿದ ಜುಲೈ ೨೦೦೦ರ ಸಂಚಿಕೆ ತಲುಪಿತು. ಮೊದಲಿಗೆ ಆಶ್ಚರ್ಯವಾದರೂ 'ನಕ್ಷತ್ರಗಳು' ವಿಮರ್ಶೆ ಓದಿ ಸಂತೋಷವಾಯ್ತು. ಪುಸ್ತಕ ಪ್ರಪಂಚ ಬಳಗಕ್ಕೆ ನನ್ನ ಧನ್ಯವಾದಗಳು.

ಡಾ. ಹೆಚ್. ಪಿ. ಮಂಜುಳಾರವರು ಚೆನ್ನಾಗಿ ವಿಮರ್ಶೆ ಮಾಡಿದ್ದಾರೆ. ಎಲ್ಲ ಕವಿಗಳ ಕವನಗಳನ್ನು ಗಮನಕ್ಕೆ ತೆಗೆದುಕೊಂಡಿರುವುದು ಸ್ವಾಗತಾರ್ಹ. ಇವರ ವಿಮರ್ಶೆ ನನಗೆ ಮತ್ತಷ್ಟು ಚೈತನ್ಯವನ್ನು ನೀಡಿದೆ. ಅವರಿಗೆ ನಾನು ಚಿರಋಣಿ.

ಈ ಸಂಚಿಕೆಯಲ್ಲಿ ಎಸ್. ಜಿ. ನಾಗಲೋಟಿ ಮಠರವರ ಕ್ಯಾನ್ಸರನ್ನು ತಡೆಗಟ್ಟುವ 'ತರಕಾರಿ ಮತ್ತು ಹಣ್ಣು' ಚೆನ್ನಾಗಿ ಮೂಡಿ ಬಂದಿದೆ. ಅವರ ''ಅವ್ವ'' ಲೇಖನ ಮನಸ್ಸಿಗೆ ಹಿಡಿಸಿತು. ೧೦೦ ವಸಂತಗಳನ್ನು ದಾಟಿದ ಎ. ಎನ್. ಮೂರ್ತಿರಾಯರಿಗೆ ಮತ್ತೊಬ್ಬ ದಿಗ್ಗಜ ದೇ. ಜವರೇಗೌಡರು ಪ್ರೌಢಭಾಷೆಯಲ್ಲಿ ನಮನ ಸಲ್ಲಿಸಿದ್ದು ಈ ಸಂಚಿಕೆಗೆ ಮೆರಗು ತಂದಿದೆ.

ತಮ್ಮ
ರಾಘವೇಂದ್ರ ದಂಡಿನ್
ದಂಡಿನ್ ಟ್ಯೂಷನ್ ಹಾಲ್
ಉಪ್ಪಾರ ಓಣಿ
ಗಂಗಾವತಿ ಜಿ. ಕೊಪ್ಪಳ

ಸನ್ಮಾನ್ಯ ಸಂಪಾದಕರಿಗೆ,

ಜುಲೈ ತಿಂಗಳ ಪುಸ್ತಕ ಪ್ರಪಂಚ ಸಂಚಿಕೆಯಲ್ಲಿ ಪ್ರಕಟಿತ ಎಲ್ಲಾ ಲೇಖನಗಳು, ನುಡಿಮುತ್ತುಗಳು, ಅನುಭವದ ವಾಸ್ತವಿಕತೆ ಹಾಗೂ ಉಚ್ಚಮಟ್ಟದ ಚಿಂತನಾಶೀಲ ಕೃತಿಗಳಾಗಿದ್ದು ಓದುಗರ ಗಮನ ಸೆಳೆದಿದೆ.

ವಿಶೇಷವಾಗಿ ಡಾ. ಸ. ಜ. ನಾಗಲೋಟಿಮಠರವರ 'ಅವ್ವ' ಲೇಖನದಲ್ಲಿ ಇಳಿವಯಸ್ಸಿನ ಪ್ರಿನ್ಸಿಪಾಲರ ಮಾನವೀಯತೆ ಅನುಭವದ ವಾಸ್ತವಿಕತೆ ಹಾಗೂ ಅಪರಿಚಿತ ಮುದುಕಿಯ ಮುಖದಲ್ಲಿ ತಮ್ಮ ತಾಯಿ ಮುಖವನ್ನು ಕಾಣುತ್ತಾ ತಾಯಿಯನ್ನೇ ನೆನೆಪಿಸಿಕೊಂಡು ದಂಪತಿಗಳು ತೋರಿದ ಆದರ, ಗೌರವ ಮತ್ತು ಅತಿಥ್ಯಸತ್ಕಾರವನ್ನು ಮನಮುಟ್ಟುವಂತೆ ವಿವರಿಸಿರುವುದು ಶ್ಲಾಘನೀಯ. ಶ್ರೀಯುತರಿಗೂ ಲೇಖನವನ್ನು ಪ್ರಕಟಿಸಿದ ತಮಗೂ ಹೃದಯ ಪೂರ್ವಕ ವಂದನೆಗಳು. ಇನ್ನು ಮುಂದೆಯೂ ಇಂತಹ ವಾತ್ಸಲ್ಯಭರಿತ ಲೇಖನಗಳು ಮೂಡಿಬರಲೆಂದು ಆಶಿಸುತ್ತೇನೆ.

ವಿನಯ ಪೂರ್ವಕ ವಂದನೆಗಳೊಂದಿಗೆ

ಇಂತೀ
ಜಿ. ಶಿವಾಜಿರಾವ್
ಸೋಮವಂಶಿ ೨೦೬೮, ೧೮ನೇ ಪಶ್ಚಿಮದ ತಿರುವು
ಅಶೋಕ ರಸ್ತೆ, ಮೈಸೂರು

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮುಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು...

ಶರಣ ಚರಿತಾಮೃತ

ಸಣ್ಣ ಕತೆಗಳು ೧೩೮ : (ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು)

ನಾಗರಿಕತೆಯ ಇತಿಹಾಸ

ಸಂಪಾದಕೀಯ ಸಂಕಲನ

ಕಾರಂತ ದರ್ಶನ

ಸ್ವಾಮಿ ವಿವೇಕಾನಂದ

ನನ್ನೂರು

ನಳಚರಿತ್ರೆ ಸಂಗ್ರಹ

ಯುದ್ಧ ಮತ್ತು ಶಾಂತಿ : ಭಾಗ ೧, ೨, ಮತ್ತು ೩

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006
ದೂರವಾಣಿ : 511 875